ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ ತಮ್ಮಲ್ಲಿ ಒಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ; ಇದನ್ನು ಅವರು ಮೂವ್ ಮಾಡುವುದಕ್ಕೆ ನಮಗೆ ಒಪ್ಪಿಗೆ ಇದೆ ಅವರು ಮೂವ್ ಮಾಡಲಿ, ಚರ್ಚೆಗೆ ನಾಳೆ ತೆಗೆದುಕೊಳ್ಳುವುದು ಒಳ್ಳೆಯದು.

ಅಧ್ಯಕ್ಷರು.—ಓಟಿಗೆ ಹಾಕಿದ್ದು ಆಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಡಿಸ್ಕಷನ್ ಇಲ್ಲದೇ ಅಪ್ರೂವ್ ಮಾಡುವುದೇ?

MR. SPEAKER.– I said "Motion Moved". Then I said "I put it to the vote of the House."

SRI S. R. BOMMAI.—I was under the impression that permission was given to the Government to introduce.

MR. SPEAKER.—This is a resolution. Where is the question of introduction and all those things? I did say "motion moved". "I did say" I will put it to the vote of the House.

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನ ವಿಚಾರವೇ ತಪ್ಪಾಗಿರಬಹುದು. ನಮಗೆ ಈಗ ತಾವು ಅವಕಾಶ ಮಾಡಿಕೊಟ್ಟರೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಅನುಕೂಲವಾಗುತ್ತದೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಅಗ್ರಿಕಲ್ಚರಲ್ ಡಿಮ್ಯಾಂಡ್ ಬಂದಾಗ ಮಾತನಾಡಿ.

SRI H.C. SRIKANTAIAH —Some of the areas which were prohibited are included now. That is all. There is nothing else.

ಅಧ್ಯಕ್ಷರು.—ಈಗ ಸಭೆಯ ಓಟಿಗೆ ಹಾಕಿದ್ದು ಆಯಿತು. ಆದುದರಿಂದ ಅಗ್ರಿಕಲ್ಚರಲ್ ಡಿಮ್ಯಾಂಡ್ ಬಂದಾಗ ಪ್ರಸ್ತಾಪ ಮಾಡಿ.

FINANCIAL BUSINESS

4–00 P.M.

Discussion on the Voting of demands for grants for 1982-83 demands 30, 31 and 32.

† ಶ್ರೀ ಐ. ಪಿ. ಡಿ. ಸಾಲಪ್ಪ (ಬಿನ್ನಿಪೇಟೆ).—ಮಾನ್ಯ ಅಧ್ಯಕ್ಷರೇ, ನಿನ್ನೆ ಕಾರ್ಮಿಕರ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೆ. ಬೆಂಗಳೂರು ನಗರದಲ್ಲಿ ಒಂದು ಹೊಸ ಪದ್ಧತಿ ಬಂದಿದೆ. ಪಟ್ನಾಯಕರು ಕಮೀಷನರ್ ಆಗಿ ಬಂದಮೇಲೆ ಬೆಂಗಳೂರು ನಗರದ ಕೊಳಚೆಯನ್ನು ತೆಗೆಯಬೇಕೆಂದು ಮನಸ್ಸು ಮಾಡಿರುವುದು ಸ್ವಾಗತಾರ್ಹ. ಆದರೆ ಈ ಕೆಲಸವನ್ನು ಎಷ್ಟೆಷ್ಟು ಮಾಡಬೇಕೆಂಬುದೇ ಪ್ರಮುಖವಾದ ವಿಚಾರ, ಕೆಲಸಗಾರರು ಇಡೀ ರಾತ್ರಿ ಕೆಲಸ ಮಾಡಬೇಕೇ ಅಥವಾ ಬೆಳಗಿನಿಂದ ಸಂಜೆಯವರೆಗೆ ಮಾಡಬೇಕೇ ಎಂದು ಕೇಳಬೇಕಾಗಿದೆ. ಏಕೆಂದರೆ ಬೆಳಿಗ್ಗೆ ೭ ರಿಂದ ಸಂಜೆ ೫ ರ ವರೆಗೆ ಏನು ಕಾಲವನ್ನು ನಿಗದಿ ಮಾಡಿದ್ದಾರೆ ಆ ಕಾಲದ ಪ್ರಕಾರ ಕೆಲಸ ಮಾಡುವುದಕ್ಕಿಂತಲೂ ಹೆಚ್ಚಾಗಿ ಪೆಟ್ರೋಮ್ಯಾಕ್ಸ್ ಲೈಟುಗಳನ್ನು ಇಟ್ಟುಕೊಂಡು ಇಡೀ ರಾತ್ರಿ ಕೆಲಸ ಮಾಡುವ ಪದ್ಧತಿಯನ್ನು ನೋಡಿದರೆ ಬ್ರಿಟಿಷ್ ಪದ್ಧತಿಯನ್ನೇನಾದರೂ ಅನುಸರಿಸುತ್ತಿದ್ದಾರೇನೋ ಎಂಬ ಸಂಶಯ ಉಂಟಾಗುತ್ತದೆ. ಇದು ನಗರ ಸಭೆಯ ಆದೇಶವೇ ಅಥವಾ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ತಮ್ಮ ಕೆಲಸದಲ್ಲಿ ವೈಫಲ್ಯರಾಗಿ ಕಾರ್ಮಿಕರನ್ನು ಒತ್ತಾಯ ಮಾಡಿ ಕೆಲಸ ಮಾಡಿಸುತ್ತಿದ್ದಾರೆ ಎಂಬುದು ಪ್ರಮುಖವಾದ ವಿಚಾರ. ಕಾರ್ಮಿಕರಿಗೆ ಅನುಕೂಲಕರವಾದ ಕಾಯಿದೆಗಳು ಬಂದಿದೆ. ಅವುಗಳನ್ನು ಪಾಲನೆ ಮಾಡುವುದು ನಗರಸಭೆಯ ಮತ್ತು ಕಾರ್ಮಿಕರ ಕರ್ತವ್ಯ. ಹೀಗಿರುವಾಗ, ಕಾಯಿದೆ ಬಿಟ್ಟು ಇಡೀ ರಾತ್ರಿ ಕೆಲಸ ಮಾಡಿಸುತ್ತಿರುವ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

(ಶ್ರೀ ಎಂ. ಸಿ. ಬಸಪ್ಪನವರು.—ಅಧ್ಯಕ್ಷ ಪೀಠಕ್ಕೆ ಬಂದರು)

ಮಂತ್ರಿಗಳು ಇದನ್ನು ಪರಿಶೀಲಿಸಬೇಕು ಮತ್ತು ಕಾಯಿದೆಯಲ್ಲಿ ಏನು ಹೇಳಿದೆ ಆ ಪ್ರಕಾರ ಕೆಲಸ ಮಾಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಬೆಂಗಳೂರು ನಗರ ಸಭೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಕಾರ್ಮಿಕರು ಸತ್ತಾಗ ಅಥವಾ ನಿವೃತ್ತರಾದಾಗ ಅವರ ಕೆಲಸಗಳನ್ನು ಅವರ ಕುಟುಂಬದವರಿಗೆ ಕೊಡುತ್ತಾ ಬಂದಿದ್ದರು. ಆದರೆ ಈಗ ವಂಶ ಪಾರಂಪರ್ಯವಾಗಿ ಕೆಲಸ ಕೊಡತಕ್ಕ ಪದ್ಧತಿ ಹೋಗಿದೆ. ಇದರಿಂದ ಅವರು ತುಂಬ ಕಷ್ಟವನ್ನು ಅನುಭವಿಸಬೇಕಾದ ಪರಿಸ್ಥಿತಿ ಉಂಟಾಗಿದೆ. ಅವರು ತಮ್ಮ ಹಾಗೂ ತಮ್ಮ ಕುಟುಂಬದ ಹೊಟ್ಟೆ ಪಾಡಿಗಾಗಿ ಆ ಒಂದು ಕಾಯಕವನ್ನು ಕೈಗೊಂಡಿರುತ್ತಾರೆ. ಅವರ ಮರಣದ ಅಥವಾ ನಿವೃತ್ತಿಯ ನಂತರ ಅವರನ್ನೇ ಅವಲಂಬಿಸಿದ ಅವರ ಕುಟುಂಬದ ಗತಿ ಏನಾದೀತು ಎಂಬುದನ್ನು ಮಾನವೀಯತೆಯ ದೃಷ್ಟಿಯಿಂದ ಆಲೋಚನೆ ಮಾಡಬೇಕು. ಇಷ್ಟು ವರ್ಷದಿಂದ ನಡೆದುಕೊಂಡ ಪದ್ಧತಿಯನ್ನು ಇದಕ್ಕಿದ್ದ ಹಾಗೆ ನಿಲ್ಲಿಸಿರುವುದರಿಂದ ಕಾರ್ಮಿಕರಿಗೆ ಹಾಗೂ ಅವರ ಕುಟುಂಬದವರಿಗೆ ಬಹಳ ತೊಂದರೆಯಾಗಿದೆ. ಯಾವುದಾದರೂ ಸಮಸ್ಯೆಗಳಿದ್ದು ಅವು ಕಾರ್ಪೊರೇಷನ್ನಿನಲ್ಲಿ ಚರ್ಚೆಯಾಗಿಯೂ ತೀರ್ಮಾನವಾಗದಿದ್ದರೆ ನನ್ನ ಕಡೆ ತನ್ನಿ, ನಾನು ಮೀಟಿಂಗ್ ಕರೆದು ತೀರ್ಮಾನಿಸುತ್ತೇನೆಂದು ಮಂತ್ರಿಗಳು ಹೇಳಿದ್ದರು. ಇವತ್ತಿನ ದಿವಸ ಅಲ್ಲಿ ಏನಾಗಿದೆ ಎಂದರೆ. ಹೊಸದಾಗಿ ಬಂದಿರತಕ್ಕ ಕಮೀಷನರ್‌ರವರು ಸುಮಾರು ೪೦–೫೦ ವಯಸ್ಸಿನ ೨೦೦ ಜನ ಪೌರ ಕಾರ್ಮಿಕರನ್ನು ದಯದಾಕ್ಷಿಣ್ಯ ಇಲ್ಲದೆ ಸರ್ವೀಸ್ ರಿಜಿಸ್ಟರ್‌ನಲ್ಲಿರುವುದು ತಪ್ಪು ಎಂದು ಪ್ರಿಮೆಚ್ಯೂರ್ ರಿಟೈರ್‌ಮೆಂಟ್ ಮಾಡಿ ಅವರಿಗೆ ಕೆಲಸ ಇಲ್ಲದಂತೆ ಮಾಡಿದ್ದಾರೆ. ಇದು ಕಾರ್ಮಿಕರ ಮತ್ತು ಮಾಲೀಕರ ನಡುವಿನ ಸೌಹಾರ್ದತೆಯನ್ನು ಕೆಡಿಸತಕ್ಕ ದಾರಿಗೆ ಹೋಗುತ್ತಿದೆ. ಇದನ್ನು ಸರ್ಕಾರ ಕಿವಿಗೆ ಹಾಕಿಕೊಳ್ಳದೆ ಕುಳಿತರೆ ಕಾರ್ಮಿಕರಲ್ಲಿ ಅಶಾಂತಿ ಬೆಳೆದು ವಿಪರೀತಕ್ಕೆ ಹೋಗುತ್ತವೆ. ಆದುದರಿಂದ, ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ತಾವು ಏನು, ಸಮಸ್ಯೆಗಳಿದ್ದರೆ ಕರೆಸಿ ಬಗೆಹರಿಸುತ್ತೇನೆಂದು ಆಶ್ವಾಸನೆ ಕೊಟ್ಟಿದ್ದಿರಿ ಆದರಂತೆ ದಯವಿಟ್ಟು ಸಾಧ್ಯವಾದಷ್ಟು ಬೇಗನೆ ಕಮೀಷನರನ್ನು ಕರೆಸಿ, ೧೯೪೪ ರಿಂದ ೧೯೮೨ ರವರೆಗೆ ಯಾವ ರೀತಿ ನಡೆದುಕೊಂಡು ಬಂದಿತ್ತೋ ಅದೇ ರೀತಿ ಮೃತರಾದವರ ಮತ್ತು ನಿವೃತ್ತರಾದವರ ಕೆಲಸವನ್ನು ಅವರ ಕುಟುಂಬದವರಿಗೆ ಕೊಡತಕ್ಕ ಪದ್ಧತಿಯನ್ನು ಮುಂದುವರಿಸುವಂತೆ ಆದೇಶ ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ, ನಮ್ಮ ಸರ್ಕಾರ, ಸ್ಥಳೀಯ ಸಂಸ್ಥೆಗಳಲ್ಲಿ ಕೂಡ ಅವರ ಆಯವ್ಯಯದಲ್ಲಿ ಶೇಕಡ ೧೮ ರಷ್ಟು ಹಣವನ್ನು ಹರಿಜನ–ಗಿರಿಜನರಿಗೆ ಮೀಸಲಿಡಬೇಕೆಂದು ಆದೇಶ ನೀಡಿದೆ. ನಾವು ಎಸ್, ಸಿ. ಎಸ್. ಟಿ. ಕಮಿಟಿಯಲ್ಲಿ ಪ್ರವಾಸ ಮಾಡಿ ನೋಡಿದಾಗ ಈ ವಿಚಾರದಲ್ಲಿ ಕೆಲವು ಜಿಲ್ಲೆಗಳಲ್ಲಿ ಮಾತ್ರ ನಿಜವಾಗಿ ಮಾನವೀಯತೆಯ ದೃಷ್ಟಿಯಿಂದ ಕೆಲಸ ಮಾಡಿದ್ದಾರೆ ಬೆಳಗಾಂ, ಧಾರವಾಡ ಜಿಲ್ಲೆಗಳಲ್ಲಿ ಮಾನವೀಯತೆಯ ದೃಷ್ಟಿಯಿಂದ ಈ ಕೆಲಸ ಮಾಡಿದ್ದಾರೆ. ಆದರೆ ಬೆಂಗಳೂರಿನಲ್ಲಿ ಆಯವ್ಯಯದ ಶೇಕಡ ೧೮ ರಷ್ಟು ಹಣವನ್ನು ಒಂದು ಬಾಬಿಗಾದರೂ ಖರ್ಚು ಮಾಡಿದ್ದಾರೆಯೋ ಎಂಬುದನ್ನು ನೋಡಿದ ಒಂದೂ ಕಾಣುತ್ತಿಲ್ಲ, ಮಂತ್ರಿಗಳೇ ಖುದ್ದಾಗಿ ಹೋಗಿ ಬೆಂಗಳೂರು ನಗರದಲ್ಲಿ ಏನೂ ಕೆಲಸ ಆಗದೆ ಇರುವುದನ್ನು ನೋಡಿ ಏತಕ್ಕೆ ಇದುವರೆಗೆ ಆದೇಶ ಕೊಟ್ಟಿಲ್ಲ ? ಈ ಬಗ್ಗೆ ನಾವು ಪದೇ ಪದೇ ಒತ್ತಾಯಿಸುತ್ತಿದ್ದರೂ ಸರ್ಕಾರ ಆ ಕಡೆಗೆ ಗಮನ ಕೊಡದಿರುವುದರಿಂದ ಇದು ಸರ್ಕಾರದ ಕಾನೂನಿಗೆ ವಿರುದ್ಧವಾಗಿದೆಯೋ ಎಂದು ದುಃಖವಾಗುತ್ತಿದೆ. ಸರ್ಕಾರ ಏನು ಒಂದು ಆಜ್ಞೆ ಮಾಡಿ ೧೮ ಪರ್ಸೆಂಟ್ ಹಣವನ್ನು ತೆಗೆದಿಟ್ಟು ಅದನ್ನು ಹರಿಜನ–ಗಿರಿಜನರಿಗೆ ಉಪಯೋಗವಾಗುವಂಥ ಕೆಲಸಗಳಿಗೆ ಉಪಯೋಗಿಸಬೇಕು ಅವರಿಗೆ ಬೇಕಾದ ಕೊಳಾಯಿಗಳನ್ನು ಹಾಕಿಸಿಕೊಡಬೇಕು, ರಸ್ತೆಗಳನ್ನು ಮಾಡಿಸಿಕೊಡಬೇಕು, ಲೈಟ್ ಹಾಕಿಸಿಕೊಡಬೇಕು, ಲೇಔಟ್‌ಗಳನ್ನು ಮಾಡಿಕೊಡಬೇಕು. ವಿದ್ಯಾವಂತ ಮಕ್ಕಳಿಗೆ ಪುಸ್ತಕಗಳನ್ನು ಕೊಡಬೇಕು, ಹಾಸ್ಟೆಲುಗಳ ವ್ಯವಸ್ಥೆ ಮಾಡಿಕೊಡಬೇಕು, ಕಮ್ಯುನಿಟಿ ಹಾಲ್‌ಗಳನ್ನು ಮಾಡಿ ಕೊಡಬೇಕು, ವಸತಿ ಸೌಕರ್ಯಗಳನ್ನು ಒದಗಿಸಿಕೊಡಬೇಕು ಎಂದು ಏನು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದೆ ಅದು ಬೆಂಗಳೂರು ನಗರದಲ್ಲೇ ಕಾರ್ಯಗತವಾಗುತ್ತಿಲ್ಲ. ಇದನ್ನು ನೋಡಿಕೊಂಡು ಸುಮ್ಮನೇ ಕುಳಿತಿದ್ದರೆ ಪ್ರಧಾನ ಮಂತ್ರಿಗಳ ೨೦ ಅಂಶಗಳ ಆರ್ಥಿಕ ಕಾರ್ಯಕ್ರಮಗಳು ಏನಿವೆ ಅವೂ ಕೂಡ ನಡೆಯುತ್ತಿಲ್ಲ. ರಾಜಧಾನಿಯಲ್ಲೇ ಲೋಪ ದೋಷಗಳಿವೆ, ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಇದನ್ನು ಸರಿಪಡಿಸುವವರು ಯಾರೂ ಇಲ್ಲವೆ ? ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ? ಬಂದಿದ್ದರೆ ಏತಕ್ಕೆ ಕ್ರಮ ಕೈಗೊಂಡಿಲ್ಲ ? ಕ್ರಮ ಕೈಗೊಳ್ಳುವುದಕ್ಕೆ ಏನಾದರೂ ಅಡ್ಡಿ ಅತಂಕ ಇದೆಯೇ ? ಈಗಲಾದರೂ ಕ್ರಮ ಕೈಗೊಂಡು ಸರಿಪಡಿಸುತ್ತೀರಾ ? ಇದನ್ನು ಸರಿಪಡಿಸದೆ ಹೋದರೆ ೧೯೭೩ ರಿಂದ ೧೯೮೧ ರ ವರೆಗೆ ವರ್ಷೇ ವರ್ಷೇ ಇಟ್ಟುಕೊಂಡು ಬಂದಿರತಕ್ಕ ೧೮ ಪರ್ಸೆಂಟ್ ಹಣವನ್ನು ೮ ವರ್ಷಗಳಲ್ಲೂ ಉಪಯೋಗ ಮಾಡಿಲ್ಲ ಅನ್ನಿಸುತ್ತದೆ. ಹರಿಜನ–ಗಿರಿಜನರ ಏಳಿಗೆ

ಆಗಬೇಕಾಗಿದ್ದರೆ ಅದನ್ನು ಯಾವ ಯಂತ್ರದ ಮೂಲಕ ಮಾಡಿಸಬೇಕೆಂಬ ಆಸೆ ಸರ್ಕಾರಕ್ಕೆ ಇಲ್ಲ, ಆದುದರಿಂದ ಎಲ್ಲ ಕೆಲಸಗಳು ಕುಂಟಿತವಾಗುತ್ತಿವೆ. ಇದಕ್ಕೆ ಜವಾಬ್ದಾರರಾದವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ ಯಾವುದೇ ಪಾಲಿಸಿ ಪ್ರೋಗ್ರಾಂಗಳು ನಿಷ್ಠೆಯಿಂದ ಜಾರಿಗೆ ಬರುವುದಿಲ್ಲ ಮತ್ತು ಬಡವರು ಉದ್ಧಾರವಾಗುವುದಿಲ್ಲ ಎಂಬುದನ್ನು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ, ಬೆಂಗಳೂರು ನಗರ ಸಭೆಯಲ್ಲಿ ಈಗ ಹೊಸದಾಗಿ ಬಂದಿರತಕ್ಕ ಕಮೀಷನರ್‌ರವರು ಹಾಕಿಕೊಂಡಿರತಕ್ಕ ಕಾರ್ಯಕ್ರಮದ ಪ್ರಕಾರ ಕಸ ಗುಡಿಸಿ ಅಲ್ಲಲ್ಲೇ ರಾಶಿ ಹಾಕುತ್ತಿದ್ದಾರೆ. ಅದನ್ನು ತೆಗೆಯುವುದಕ್ಕೆ ಲಾರಿಗಳು ಇಲ್ಲ. ಕಾರಣ ನಮ್ಮಲ್ಲಿರತಕ್ಕ ಲಾರಿಗಳ ಸಂಖ್ಯೆ ಕಡಿಮೆ. ಹೀಗಾಗಿ ರಾಶಿ ರಾಶಿ ಕಸವನ್ನು ನಾವು ದಿನಬೆಳಗಾಗಿ ಎದ್ದರೆ ನೋಡಬೇಕಾಗಿದೆ. ಮಂತ್ರಿಗಳು ನನ್ನ ಮನೆಗೆ ಬಂದರೆ ನನ್ನ ಮನೆ ಬಾಗಿಲಿನಲ್ಲಿ ಒಂದು ದಿನಕ್ಕೆ ಕಸದ ರಾಶಿ ಎಷ್ಟು ಬಿದ್ದಿರುತ್ತದೆಂಬುದನ್ನು ತೋರಿಸುತ್ತೇನೆ. ಈ ಕಸವನ್ನು ಏತಕ್ಕೆ ತೆಗೆಯುತ್ತಿಲ್ಲವೆಂದು ಹೆಲ್ತ್ ಇನ್‌ಸ್ಪೆಕ್ಟರನ್ನು ಕೇಳಿದರೆ ನಮ್ಮ ಲಸಕ್ಕೆ ಎರಡು ದಿವಸ ಕೂಡ ಲಾರಿಗಳು ಬರುವುದಿಲ್ಲವೆಂದು ಹೇಳುತ್ತಾರೆ. ಆದರೆ ಲಾರಿಗಳ ಕೊರತೆಯಿಂದ ತೆಗೆಯುವುದಕ್ಕೆ ಆಗುವುದಿಲ್ಲವೆಂದು ಹೇಳುವುದಿಲ್ಲ. ಈ ಬಗ್ಗೆ ಕಮೀಷನರ್‌ರವರ ಜೊತೆ ಕೂಡ ಚರ್ಚೆ ಮಾಡಿದ್ದೇನೆ. ಅವರು ಹೇಳಿದರು, ಲಾರಿಗಳನ್ನು ಬಾಡಿಗೆ ಮೂಲಕ ತೆಗೆದುಕೊಂಡು ಬೇಕಾದ ಕಾರ್ಯಕ್ಕೆ ಉಪಯೋಗಿಸಿಕೊಳುವ ಕಾರ್ಯಕ್ರಮವನ್ನು ಹಾಕಿಕೊಳ್ಳಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಿರುವುದಾಗಿ ತಿಳಿಸಿದರು. ಆದರೆ ಇದುವರೆಗೂ ಬಾಡಿಗೆ ಮೂಲಕ ಲಾರಿಗಳನ್ನು ತೆಗೆದುಕೊಂಡು ಕೆಲಸ ಮಾಡತಕ್ಕ ವ್ಯವಸ್ಥೆ ಆಗಿಲ್ಲ. ಆ ರೀತಿಯಾದರೂ ಮಾಡದಿದ್ದರೆ ರಾಶಿ ರಾಶಿ ಕಸ ಹಾಗೇ ಬಿದಿರುತ್ತದೆ. ದಿನಕ್ಕೆ ೯ ಕಿಲೋಮೀಟರ್ ದೂರ ಕಮೀಷನರ್ ಇನ್‌ಸ್ಪೆಕ್ಷನ್ನಿಗೆ ಹೋಗತಕ್ಕ ಕಡೆ ಮಾತ್ರ ಲಾರಿಗಳ ಮೂಲಕ ಕಸವನ್ನು ತೆಗೆಸಿರುತ್ತಾರೆ. ಅವರು ಅದನ್ನು ನೋಡಿ ಸಮಾಧಾನಪಟ್ಟು ಕೊಂಡು ಬರಬಹುದು. ಅವರು ಪ್ರತಿದಿನ ನಗರದ ಎಲ್ಲ ಭಾಗಗಳಲ್ಲೂ ಇನ್‌ಸ್ಪೆಕ್ಷನ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಅವರು ಹೋಗದ ಕಡೆ ಅದು ಹಾಗೇ ಇರುತ್ತದೆ. ಅವರು ಹೋದ ಕಡೆ ಮಾತ್ರ ನಗರವನ್ನು ಶುಚಿಯಾಗಿ ಇಡಬೇಕೆಂದು ಅಲ್ಲ. ನಗರದ ಎಲ್ಲ ಭಾಗಗಳನ್ನು ಶುಚಿಯಾಗಿಡತಕ್ಕ ವ್ಯವಸ್ಥೆ ಆಗಬೇಕು. ಈ ಜವಾಬ್ದಾರಿ ನಗರ ಕಾರ್ಪೊರೇಷನ್ನಿಗೆ ಸೇರಿದ್ದು. ಕಮೀಷನರ್ ಏನ್ ಜವಾಬ್ದಾರಿ ಹೊತ್ತು ಕೆಲಸ ಮಾಡುತ್ತಾರೆ ಅದೇ ರೀತಿ ಉಳಿದ ಅಧಿಕಾರಿಗಳು ಕೂಡ ಪ್ರತಿದಿನ ೯ ಕಿಲೋಮೀಟರ್ ಪ್ರದೇಶವನ್ನು ಪರಿಶೀಲಿಸಿದರೆ ನನಗೆ ತಿಳಿದ ಹಾಗೆ ಬೆಂಗಳೂರು ನಗರದಲ್ಲಿ ೨-೩ ವರ್ಷಗಳಿಂದ ಏನು ಕೊಳಚೆ ಇದೆ ಅದೆಲ್ಲವನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತದೆ. ಈ ಕೆಲಸವನ್ನು ಕಮೀಷನರ್ ಒಬ್ಬರ ಮೇಲೆ ಹಾಕದೇ ನಗರಸಭೆಯ ಎಲ್ಲ ಅಧಿಕಾರಿಗಳೂ ತೆಗೆದುಕೊಳ್ಳಬೇಕೆಂದು ಮನ ಮಾಡಿಕೊಳ್ಳುತ್ತೇನೆ.

ನಾಲ್ಕುನೂರಕ್ಕಿಂತ ಹೆಚ್ಚು ಕೊಳಚೆ ಪ್ರದೇಶಗಳು ಬೆಂಗಳೂರಿನಲ್ಲಿದೆ. ನಗರ ಕಾರ್ಪೊರೇಷನ್ನಿಗೆ ಸಂಬಂಧಪಟ್ಟಂಥ ಕೊಳಚೆಪ್ರದೇಶಗಳಿವೆ, ಸರ್ಕಾರದ ಜಮೀನಿನಲ್ಲಿ ಮತ್ತು ಖಾಸಗಿಯವರ ಜಮೀನಿನಲ್ಲಿ ಕೊಳಚೆಪ್ರದೇಶಗಳಿವೆ. ಕೊಳಚೆ ನಿರ್ಮೂಲನಾ ಮಂಡಳಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಕ್ರಮ ತೆಗೆದುಕೊಳ್ಳುತ್ತಿದೆ. ಕೊಳಚೆ ನಿರ್ಮೂಲನಕ್ಕೆ ಮತ್ತು ಆ ಜನರ ಕಲ್ಯಾಣಕ್ಕೆ ಮಾನ್ಯ ಮಂತ್ರಿಗಳು ಸಾಕಷ್ಟು ಹಣವನ್ನು ಇಟ್ಟಿದ್ದಾರೆ. ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ಈ ಜನರಿಗೆ ಕೊಡಲು ಕಟ್ಟಿರತಕ್ಕ ಮನೆಗಳನ್ನು ನೋಡಿ ನನಗೆ ಆನಂದವಾಯಿತು. ಜನತಾ ವಸತಿ ಯೋಜನೆ ಮನೆಗಳಿಗಿಂತ ಚೆನ್ನಾಗಿ ಈ ಮನೆಗಳಿವೆ. ಮುಕ್ಕಾಲು ಅಡಿ ಗೋಡೆ ಇದ್ದರೂ ಚೆನ್ನಾಗಿದೆ. ಅದೇರೀತಿ ಮನೆಗಳನ್ನು ಬೆಂಗಳೂರಿನಲ್ಲೂ ಕಟ್ಟಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಇಲ್ಲದಿದ್ದರೆ ನೀವು ಕೊಟ್ಟ ನಿವೇಶನದಲ್ಲಿ ಬಡವರು ಮನೆ ಕಟ್ಟಿಕೊಳ್ಳದೇ ಅದನ್ನು ಮಾರಾಟ ಮಾಡಿ ಅವರು ಎಲ್ಲೋ ಗುಡಿಸಲು ಹಾಕಿಕೊಂಡಿರುತ್ತಾರೆ. ೪೮೪ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುವುದಕ್ಕೆ ಏನು ಯೋಜನೆ ಹಾಕಿಕೊಳ್ಳಬೇಕೆಂದಿದ್ದೀರಿ ಅದಕ್ಕೆ ನನ್ನ ವಿರೋಧ ಇಲ್ಲ. ಅದನ್ನು ಮಾಡಿ. ಆದರೆ ಹುಬ್ಬಳ್ಳಿ ಧಾರವಾಡ ಭಾಗದಲ್ಲಿ ಮುಕ್ಕಾಲು ಅಡಿ ಗೋಡೆ ಕಟ್ಟಿ ಅದರ ಮೇಲೆ ಹೆಂಚು ಹಾಕುವ ಯೋಜನೆ ಏನು ಹಾಕಿಕೊಂಡಿದ್ದೀರಿ ಅದೇರೀತಿ ಇಲ್ಲೂ ಮಾಡಿದರೆ ಒಳ್ಳೆಯದು. ತಮ್ಮ ಕಾಲದಲ್ಲಿ ಈ ಕೆಲಸವನ್ನು ಮಾಡಿ ಮುಗಿಸಿ. ಇಲ್ಲದಿದ್ದರೆ ತಾವು ಪ್ರಾರಂಭಿಸಿದರೆ ಬೇರೆಯವರು ಬಂದಾದರೂ ಮುಗಿಸುವ ಅವಕಾಶ ಸಿಗುತ್ತದೆ. ಒಟ್ಟಿನಲ್ಲಿ ಕೊಳಚೆ ಪ್ರದೇಶಗಳನ್ನು ರಿಹ್ಯಾಬಿಲೇಟ್ ಮಾಡತಕ್ಕ ಕೆಲಸ ಬೇಗ ಆಗಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಪೌರಕಾರ್ಮಿಕರು ವಿದ್ಯಾವಂತರಾಗಿ ಮುಂದೆ ಬಂದರೆ ನಮ್ಮ ಕೆಲಸಕ್ಕೆ ಯಾರೂ ಸಿಗುವುದಿಲ್ಲ ಎಂದು ಅವರನ್ನು ಹಾಗೆಯೇ ಇಟ್ಟುಕೊಂಡಿದ್ದೀರಿ ಎಂದು ಮಾನ್ಯ ಗಂಗಾಧರನ್ ಅವರು ಹೇಳಿದರು.

ಇದಕ್ಕೆ ಬೆಂಗಳೂರು ನಗರಸಭೆಯಲ್ಲಿ ನಡೆಯುತ್ತಿರತಕ್ಕ ಕೆಲಸವೇ ನಿದರ್ಶನ. ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗಿದ್ದು ಶ್ರೀಮಾನ್ ಹೆಚ್.ಸಿ. ಶ್ರೀಕಂಠಯ್ಯನವರು ಪೌರಾಡಳಿತ ಸಚಿವರಾಗಿದ್ದಾಗ ಕೆಲವು ಯೋಜನೆಗಳನ್ನು ಹಾಕಿಕೊಂಡಿದ್ದರು. ಎಸ್.ಎಸ್.ಎಲ್.ಸಿ.ಗಿಂತ ಮೇಲ್ಪಟ್ಟು ವಿದ್ಯಾರ್ಹತೆ ಇರತಕ್ಕ ಪೌರಕಾರ್ಮಿಕರಿದ್ದರೆ ಅವರನ್ನು ಇಂಡಿಪೆಂಡೆಂಟ್ ಚಾರ್ಜ್‌ನಲ್ಲಿಟ್ಟು ಸಿ ಅಂಡ್ ರೂಲ್ಸ್ ಅಮೆಂಡ್ ಮಾಡಿ ಆಯಾ ಕೇಡರ್‌ನಲ್ಲಿ ಕೆಲಸ ಕೊಡಬೇಕೆಂದು ತೀರ್ಮಾನ ಮಾಡಿದ್ದರು. ಕಮಿಷನರ್ ಮತ್ತು ಅಡ್ಮಿನಿಸ್ಟ್ರೇಟರ್ ಚೇಂಬರ್‌ನಲ್ಲಿ ಈ ಬಗ್ಗೆ ಮೀಟಿಂಗ್ ಆದಾಗ ಸಿ ಅಂಡ್ ಆರ್ ಅಮೆಂಡ್‌ಮೆಂಟ್ ಮಾಡುವವರೆಗೆ ವಿದ್ಯಾವಂತ ಪೌರಕಾರ್ಮಿಕರನ್ನು ಇಂಡಿಪೆಂಡೆಂಟ್ ಚಾರ್ಜ್‌ನಲ್ಲಿ ಒ.ಒ.ಡಿ. ಮೇಲೆ ಹಾಕಿ ಕಸ ಗುಡಿಸುವುದನ್ನು ತಪ್ಪಿಸಿ ಬೇರೆ ಕೆಲಸಕ್ಕೆ ಹಚ್ಚಿದ್ದರು. ದುರಾದೃಷ್ಟವಶಾತ್ ಒಂದು ವಾರದ ಕೆಳಗೆ ಹೆಲ್ತ್ ಆಫೀಸರ್ ಅವರು ಮೆಮೋ ವಾಪಸ್ ತೆಗೆದುಕೊಂಡು ವಿದ್ಯಾವಂತರಾಗಿರಲಿ, ಅವಿದ್ಯಾವಂತರಾಗಿರಲಿ ಅವರು ಕಸ ಗುಡಿಸುವುದಕ್ಕೆ ಹೋಗಬೇಕು ಎಂದು ವಿದ್ಯಾವಂತರಾದ ನೂರಾರು ಮಂದಿ ಪೌರಕಾರ್ಮಿಕರನ್ನು ಬೀದಿ ಗುಡಿಸುವುದಕ್ಕೆ ಕಳುಹಿಸಿಕೊಡುತ್ತಿದ್ದಾರೆ. ಇದು ಕಮಿಷನರ್ ಅವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಈ ಸದನದ ಮೂಲಕ ತಮ್ಮ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಹರಿಜನರ ಉದ್ಧಾರ ಮಾಡಬೇಕೆಂಬ ಮನಸ್ಸು ಈ ಸರ್ಕಾರಕ್ಕಿದ್ದರೆ ಹಿಂದಿನ ಸರ್ಕಾರ ಮಾಡಿದ್ದನ್ನು ಅನುಷ್ಠಾನಕ್ಕೆ ತರಬೇಕು. ವಿದ್ಯಾವಂತರಾಗಿ ಬೇರೆ ಕೆಲಸ ಮಾಡುತ್ತಿದ್ದ ಪೌರ ಕಾರ್ಮಿಕರನ್ನು ಅದೇ ಕೆಲಸದಲ್ಲಿ ಮುಂದುವರೆಸಬೇಕು. ವಾಪಸ್ ಕರೆಸಿ ಅವರನ್ನು ಗುಡಿಸುವ ಕೆಲಸಕ್ಕೆ ಹಾಕಿರುವುದನ್ನು ತಪ್ಪಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮೊನ್ನೆ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಬೇಡಿಕೆ ಮೇಲೆ ಮಾತನಾಡುತ್ತಾ ಮಾನ್ಯ ಜೀವರಾಜ ಆಳ್ವ ಅವರು ಕೆಲವು ವಿಚಾರಗಳನ್ನು ಹೇಳಿದರು. ೧೯೮೧ನೇ ಇಸವಿ ಜನವರಿಯಲ್ಲಿ ಮಾನ್ಯ ಮಂತ್ರಿಗಳು ಕಾರ್ಪೊರೇಷನ್ನಿಗೆ ಭೇಟಿ ಕೊಟ್ಟು, ಪ್ರತಿಯೊಂದು ಕ್ಷೇತ್ರದಲ್ಲಿ ೧೦ ಲಕ್ಷ ರೂಪಾಯಿಗಳ ಕೆಲಸ ಆಗಬೇಕೆಂಬ ಸೂಚನೆ ಕೊಟ್ಟರೂ ಅದು ಜಾರಿಗೆ ಬರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರು ಜನರ ಸಮಸ್ಯೆ ಬಗ್ಗೆ ಕೇಳಿದಾಗಲೂ ಅವರ ಗಮನಕ್ಕೆ ಈ ವಿಷಯ ತಂದೆವು. ಹಿಂದೆ ಇದ್ದ ಕಮಿಷನರ್ ಅವರೂ ಆ ಕೆಲಸ ಮಾಡಲಿಲ್ಲ. ಈ ಕಮಿಷನರ್ ಬಂದಮೇಲೆ ೧೦ ಲಕ್ಷರೂಪಾಯಿ ಕೊಟ್ಟಿದ್ದಿರಿ, ಅದು ೮೧ನೇ ಇಸವಿಗೆ ಆಯಿತು. ೧೯೮೧–೮೨ರಲ್ಲಿ ಕೆಲಸ ಆಗಿಲ್ಲ. ೧೯೮೩ಕ್ಕೆ ಪ್ರೋಗ್ರಾಂ ಆಫ್ ವರ್ಕ್ಸ್ ಮತ್ತು ಎಸ್ಟಿಮೇಟನ್ನು ತೋರಿಸಿದ್ದೀರಿ. ಕೆಲಸ ಮಾಡುವುದಕ್ಕೆ ಕೈ ಹಾಕಬೇಕೆಂದು ಪ್ರಯತ್ನ ಮಾಡುತ್ತಿದ್ದೀರಿ. ಈಗಾಗಲೇ ನವೆಂಬರ್‌ನಲ್ಲಿ ಚುನಾವಣೆ ಬರಬಹುದೆಂದು ಮಾನ್ಯ ಸಭಾನಾಯಕರು ಆದೇಶ ಕೊಟ್ಟಿದ್ದಾರೆ. ನವೆಂಬರ್‌ನಲ್ಲಿ ಚುನಾವಣೆ ಬಂದರೆ ಆಗಸ್ಟ್ ತಿಂಗಳಲ್ಲಿ ಅಧಿಕಾರಿಗಳು ಚುನಾವಣಾ ಕಾರ್ಯದಲ್ಲಿ ನಿರತರಾಗುತ್ತಾರೆ. ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳುವುದಿಲ್ಲ. ೧೯೮೦–೮೧ ರಿಂದಲೂ ಚುನಾವಣೆ ಕೆಲಸ ತೋರಿಸಿ ಕೆಲಸ ಮಾಡದೇ ನಿಲ್ಲಿಸಿದ್ದಾರೆ. ಈ ವರ್ಷವೂ ಅದೇ ರೀತಿ ಮಾಡಿದ್ದಾರೆ. ೧೯೮೪–೮೫ರಲ್ಲೂ ಕೂಡ ಇದೇ ತರಹ ಆಗಬಾರದು. ಕೊಟ್ಟ ವಚನವನ್ನು ತಪ್ಪಬಾರದು ಎಂಬುದು ನನ್ನ ಮನವಿ. ಬೆಂಗಳೂರಿನ ನಾಗರೀಕರು ಸಂಯಮದಿಂದ ತಾವು ಕೊಟ್ಟ ಆಶ್ವಾಸನೆಗಳ ಬಗ್ಗೆ ಕಾದು ನೋಡುತ್ತಿದ್ದಾರೆ. ಆದರೆ ಒಂದನ್ನೂ ಜಾರಿಗೆ ತರುತ್ತಿಲ್ಲ. ನಾನು ಕಮಿಷನರ್ ಅವರ ಜೊತೆಯಲ್ಲಿ ಒಂದು ಸಾರಿ ಇನ್ಸ್‌ಪೆಕ್ಷನ್‌ಗೆ ಹೋಗಿದೆ. ಮಾಗಡಿ ರಸ್ತೆ ಆದಮೇಲೆ ಹೊಸಹಳ್ಳಿಗೆ ಹೋಗುವ ಕಡೆ ಚೋಳರ ಪಾಳ್ಯ ಎಂಬ ಜಾಗ ಇದೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯವರು ಅಲ್ಲಿ ಪೈಪ್ ಹಾಕಿ ಕೊಳಚೆ ನೀರು ಹೋಗುವಂತೆ ಮಾಡಿದ್ದಾರೆ. ಕೆಲವು ಭಾಗದಲ್ಲಿ ಆ ಕೆಲಸ ಮಾಡಿ ಇನ್ನು ಮುಕ್ಕಾಲು ಭಾಗ ಹಾಗೆಯೇ ಬಿಟ್ಟಿದ್ದಾರೆ. ಇದರಿಂದ ಮಳೆ ಬಂದಾಗ ಆ ನೀರೆಲ್ಲಾ ಮನೆಗಳಿಗೆ ನುಗ್ಗುತ್ತಿದೆ. ಕಳೆದ ವರ್ಷ ನೀರು ನುಗ್ಗಿ ಒಂದೂವರೆ ಸಾವಿರ ಕೋಳಿಗಳು, ಮತ್ತು ಕೆಲವು ಮಕ್ಕಳು ಸತ್ತುಹೋದವು. ಸರಿಮಾಡುವುದಕ್ಕೆ ಆಶ್ವಾಸನೆ ಕೊಟ್ಟರೂ ಇನ್ನೂ ಸರಿ ಮಾಡಿಲ್ಲ. ಜನತಾ ಪ್ರತಿನಿಧಿಗಳಾದ ನಾವು ಅಲ್ಲಿಗೆ ಹೋದರೆ ಆವತ್ತು ಹೋದವರು ಇವತ್ತು ಬಂದಿದ್ದೀರಾ ಎಂದು ಹೇಳಿ ಮುಂದೆ ಹೆಜ್ಜೆ ಇಡುವುದಕ್ಕೆ ಅವಕಾಶ ಕೊಡುವುದಿಲ್ಲ. ಆದ್ದರಿಂದ ನಾವು ಇಲ್ಲಿ ಜನರ ಕಷ್ಟಕಾರ್ಪಣ್ಯಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ೧೯೭೪ನೇ ಇಸವಿಯಿಂದ ಚುನಾವಣೆಗಳು ನಡೆಯದೇ ಇರುವುದರಿಂದ ಮಾನ್ಯಮಂತ್ರಿಗಳು ನಮ್ಮನ್ನು ಕರೆದು ಕೆಲವು ಸಲಹೆ ಸೂಚನೆಗಳನ್ನು ಕೇಳುತ್ತಿದ್ದಾರೆ.

ನಾವೂ ಕೂಡ ಕರೆದಾಗ ಹೋಗಿ ಸಲಹೆ ಸೂಚನೆಗಳನ್ನು ಕೊಡುತ್ತಿದ್ದೇವೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ನಾವು ಕೊಡುವ ಸಲಹೆಗಳನ್ನು ಜಾರಿಗೆ ಕೊಡುವುದಾದರೆ ನಮ್ಮನ್ನು

ಕರೆದು ಕೆಲವು ಸಲಹೆ ಸೂಚನೆಗಳನ್ನು ಕೇಳುತ್ತಿದ್ದಾರೆ. ನಾವೂ ಕೂಡ ಕರೆದಾಗ ಹೋಗಿ ಸಲಹೆ ಸೂಚನೆಗಳನ್ನು ಕೊಡುತ್ತಿದ್ದೇವೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ನಾವು ಕೊಡುವ ಸಲಹೆಗಳನ್ನು ಜಾರಿಗೆ ಕೊಡುವುದಾದರೆ ನಮ್ಮನ್ನು ಕರೆಯಿರಿ. ಇಲ್ಲದೇ ಹೋದರೆ ದಯುವಿಟ್ಟು ನಮ್ಮನ್ನು ಸಭೆಗೆ ಕರೆಯಬೇಡಿ ನಗರಸಭೆ ಚುನಾವಣೆ ಆಗುವವರೆಗೆ ವಿಧಾನಸೌಧ ಏನು, ನಾವೇನು, ಅಷ್ಟಕ್ಕೇ ಇರುತ್ತೇವೆ. ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವುದು ಬಹಳ ಕಷ್ಟವಾಗಿದೆ. ಮೂರು ವರ್ಷಗಳಿಂದ ರಸ್ತೆ, ದೀಪ, ನೀರು ಮುಂತಾದ ಅಭಿವೃದ್ಧಿ ಕಾರ್ಯಗಳು ಸರಿಯಾಗಿ ನಗರದಲ್ಲಿ ಆಗುತ್ತಿಲ್ಲ ಜನರು ನಮ್ಮನ್ನು ಕೇಳುತ್ತಾರೆ. ಬೆಂಗಳೂರು ನಗರದಲ್ಲಿ ಕೆಲವು ಕಡೆ ಸೋಡಿಯಂ ವೇಪರ್ ಲೈಟ್ ಹಾಕಿದ್ದಾರೆ. ನಮ್ಮನ್ನೆಲ್ಲಾ ಪ್ರವಾಸಕ್ಕೆ ಕರೆದುಕೊಂಡುಹೋಗಿ ಹೊರಗಡೆಯಿಂದ ನೋಡಿಕೊಂಡುಬಂದಮೇಲೆ ಆ ಲೈಟುಗಳನ್ನು ಹಾಕಿದ್ದಾರೆ. ಆದರೆ ಆ ಲೈಟುಗಳನ್ನು ಮಹಾನಗರದಲ್ಲಿ ಶ್ರೀಮಂತರಿರುವ ಪ್ರದೇಶಗಳಲ್ಲಿ ಹಾಕಿದ್ದಾರೆಯೇ ಹೊರತು ಬಡವರು ಇರತಕ್ಕ ಪ್ರದೇಶಗಳಲ್ಲಿ ಹಾಕಿಲ್ಲ. ಸರ್ಕಾರ ನಿಂತಿರತಕ್ಕದ್ದು ಬಡವರು, ಹರಿಜನರು, ಗಿರಿಜನರು, ಅಲ್ಪಸಂಖ್ಯಾತರ ಬೆನ್ನೆಲುಬಿನಿಂದಾಗಿ. ಈ ಜನರನ್ನು ಇಷ್ಟು ದಿವಸ ನಿರ್ಲಕ್ಷ್ಯ ಮಾಡಿದ್ದರು ನಾವು ಆ ರೀತಿ ಮಾಡುವುದು ಬೇಡ. ನಮ್ಮ ಸರ್ಕಾರ ಆ ಜನರಿಗಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಅದನ್ನು ಸರಿಯಾಗಿ ಜಾರಿಗೆ ತರತಕ್ಕ ಅಧಿಕಾರಿಗಳನ್ನು ಅವರಿಂದ ಕೆಲಸ ಮಾಡಿಸಿದ್ದೇ ಆದರೆ ನಿಜವಾಗಿಯೂ ಬಡವರು ಮೇಲಕ್ಕೆ ಬರುತ್ತಾರೆ, ಮತ್ತು ಸಮಾಜವಾದದ ತತ್ವದಲ್ಲಿ ತಾವೇನು ನಂಬಿಕೆ ಇಟ್ಟುಕೊಂಡಿದ್ದೀರಿ ಅದಕ್ಕೆ ಬಲಿ ಕೊಟ್ಟಂತಾಗುತ್ತದೆ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ ನಗರ ಕಾರ್ಪೊರೇಷನ್ನಿನವರು ನಡೆಸತಕ್ಕ ಹೆರಿಗೆ ಆಸ್ಪತ್ರೆಗಳ ಬಗ್ಗೆ ಹೇಳುವುದಾದರೆ, ಆ ಆಸ್ಪತ್ರೆಗಳಲ್ಲಿ ಹೆಣ್ಣುಮಕ್ಕಳನ್ನು ಬಹಳ ನಿಕೃಷ್ಟವಾಗಿ ನೋಡಿ ಕೊಳ್ಳುತ್ತಿದ್ದಾರೆಂದು ನಮ್ಮ ಗಮನಕ್ಕೆ ಬಂದಿದೆ. ಹೆರಿಗೆ ನೋವು ಅನುಭವಿಸುತ್ತಿದ್ದರೂ ಹಣ ಕೊಡದಿದ್ದರೆ ಅವರ ಕಡೆ ತಿರುಗಿಯೂ ನೋಡುವುದಿಲ್ಲ. ಮಾನ್ಯ ಮಂತ್ರಿಗಳು ಬೇಕಾದರೆ ಹೋಗಿ ಪರೀಕ್ಷೆ ಮಾಡಬಹುದು. ಜನರು ಈ ಬಗ್ಗೆ ಅನೇಕ ಬಾರಿ ದೂರು ಹೇಳಿದ್ದಾರೆ. ಲಕ್ಷಾಂತರ ರೂಪಾಯಿ ಹಣ ಖರ್ಚು ಮಾಡಿ ಹೆರಿಗೆಆಸ್ಪತ್ರೆಗಳನ್ನು ಕಟ್ಟಿಸಿರುವುದಲ್ಲದೆ ಸಾವಿರಾರು ರೂಪಾಯಿ ಖರ್ಚು ಮಾಡಿ ಔಷಧಿಗಳನ್ನು ತರಿಸಿದ್ದಾರೆ. ಡಾಕ್ಟರುಗಳಿಗೆ ಇರುವುದಕ್ಕೆ ಕ್ವಾರ್ಟರ್ಸ್ ಕೊಟ್ಟಿದ್ದಾರೆ. ಇಷ್ಟೆಲ್ಲಾ ಇದ್ದರೂ ಹೆಣ್ಣುಮಕ್ಕಳಿಗೆ ತೊಂದರೆ ತಪ್ಪಿಲ್ಲ. ಅವರ ಮೇಲೆ ನಡೆಸತಕ್ಕ ಈ ಅಮಾನುಷ ವರ್ತನೆಯನ್ನು ತಪ್ಪಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಅಂಡರ್‌ಗ್ರೌಂಡ್ ಡ್ರೈನೇಜ್ ಸಿಸ್ಟಂ ಬೆಂಗಳೂರು ನಗರದಲ್ಲಿ ಶ್ರೀಮಂತರು ಇರತಕ್ಕ ಜಾಗದಲ್ಲಿ ಮತ್ತು ಬಿ. ಡಿ. ಎ. ಲೇಔಟ್ ಫಾರಂ ಮಾಡಿರುವ ಕಡೆ ಚೆನ್ನಾಗಿ ಮಾಡಿದ್ದಾರೆ. ಆದರೆ ಬಡವರಿರುವ ಕಡೆಗಳಲ್ಲಿ ಅಂಡರ್ ಗ್ರೌಂಡ್ ಡ್ರೈನೇಜ್ ಸಿಸ್ಟಂ ಮಾಡಿಲ್ಲ. ಸಾರ್ವಜನಿಕ ಶೌಚಗೃಹಗಳಿಲ್ಲ. ಬೆಂಗಳೂರು ಡೈರಿ ಪಕ್ಕದಲ್ಲಿ ಲಕ್ಕಸಂದ್ರದಲ್ಲಿ ಹರಿಜನರಿಗೆ ಅನೇಕ ನಿವೇಶನಗಳನ್ನು ಕೊಟ್ಟಿದ್ದು ಆ ಜನರು ಅಲ್ಲಿ ಮನೆ ಕಟ್ಟಿ ಕೊಂಡಿದ್ದಾರೆ. ಅಲ್ಲಿ ಅಂಡರ್‌ಗ್ರೌಂಡ್ ಡ್ರೈನೇಜ್ ಇಲ್ಲದೇ ಇರುವುದರಿಂದ ಹೆಣ್ಣುಮಕ್ಕಳು ಬೆಂಗಳೂರು ಡೈರಿ ಹಿಂಭಾಗದಲ್ಲಿ ಪಾರ್ಥೇನಿಯಂ ಗಿಡಗಳು ಬೆಳೆದಿರುವ ಕಡೆ ಮಲಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ.

ಅಧ್ಯಕ್ಷರೇ, ಮೂರು-ನಾಲ್ಕು ಸಾರಿ ಅಲ್ಲಿ ಗೂಂಡಾಗಳು ಹೆಣ್ಣುಮಕ್ಕಳನ್ನು ಬಲಾತ್ಕಾರ ಮಾಡಲು ಪ್ರಯತ್ನಪಟ್ಟಿದ್ದಾರೆ. ಅಲ್ಲಿ ಒಳಚರಂಡಿ ವ್ಯವಸ್ಥೆ ಮಾಡಿ ಸಾರ್ವಜನಿಕ ಲ್ಯಾವೆಟ್ರಿಗಳನ್ನು ಕಟ್ಟಿಸಬೇಕೆಂದೂ, ಇಲ್ಲದಿದ್ದರೆ ಹೆಣ್ಣುಮಕ್ಕಳನ್ನು ಬೀದಿಯಲ್ಲಿ ಮಾಡುವುದಕ್ಕೆ ನಾವೇ ಕಾರಣಕರ್ತರಾಗುತ್ತೇವೆ. ಹಾಗೂ ಇದಕ್ಕೆ ನಗರಸಭೆ ಕಾರಣವಾಗುತ್ತದೆ, ದಯುಮಾಡಿ ಬೆಂಗಳೂರಿನಲ್ಲಿ ಇರುವ ಬಡವರು ವಾಸಿಸುವ ಸ್ಥಳಗಳಲ್ಲಿ ಒಳಚರಂಡಿ ವ್ಯವಸ್ಥೆ ಮಾಡಿ ಕಕ್ಕಸ್ಸುಗಳನ್ನು ಕಟ್ಟಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇದನ್ನು ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ಹಾಗೂ ಪೌರಕಾರ್ಮಿಕರಿಗೆ ಹೊಸ ಪೇ ಸ್ಕೇಲನ್ನು ಕೊಟ್ಟಿಲ್ಲ. ಇವರಿಗೆ ಕೊಡುವ ಡಿ. ಎ. ನಲ್ಲೂ ವಿಳಂಬ ಇರುತ್ತದೆ. ಸರ್ಕಾರಿ ನೌಕರರಿಗೆ ಡಿ. ಎ. ಕೊಟ್ಟು ನಂತರ ಒಂದು ವರ್ಷದ ಮೇಲೆ ಇವರಿಗೆ ಡಿ. ಎ. ಕೊಡುತ್ತಾರೆ. ಈ ಬಗ್ಗೆ ಕೇಳಿದರೆ ಮುನಿಸಿಪಾಲಿಟಿಯಲ್ಲಿ ಹಣ ಇಲ್ಲವೆಂದು ಹೇಳುತ್ತಾರೆ. ಇಲ್ಲಿ ಇರುವ ಎರವಲು ಅಧಿಕಾರಿಗಳು ತಾವು ಮಾತ್ರ ಸರ್ಕಾರಿ ಆಜ್ಞೆ ಬಂದ ತಕ್ಷಣ ಬಿಲ್ ಮಾಡಿ ತೆಗೆದುಕೊಂಡು ಬಿಡುತ್ತಾರೆ. ಬಡ ಕಾರ್ಮಿಕರಿಗೆ ಇದು ಸಿಗುತ್ತಾ ಇಲ್ಲ. ಇಂತಹ ವ್ಯವಸ್ಥೆಯನ್ನು ತಪ್ಪಿಸಬೇಕು, ಒಬ್ಬ ತಿನ್ನುವುದು, ಒಬ್ಬ ನೋಡುವುದನ್ನು ತಪ್ಪಿಸಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರೇ, ಬೆಂಗಳೂರಿನಲ್ಲಿ ಇರುವ ಬೃಹದಾಕಾರ ಸಮಸ್ಯೆ ಎಂದರೆ, ರೆವಿನ್ಯೂ ಸೈಟ್‌ಗಳಲ್ಲಿ ಮನೆಗಳನ್ನು ಕಟ್ಟಿರತಕ್ಕದ್ದು. ನನ್ನ ಕ್ಷೇತ್ರದಲ್ಲಿಯೇ ಅರ್ಧದಷ್ಟು ಅನಧಿಕೃತ ಮನೆಗಳನ್ನು ಕಟ್ಟಲಾಗಿದೆ. ಬಿ. ಡಿ. ಎ. ಮುಖಾಂತರ ಸೈಟ್ ಪಡೆಯಲಾಗದೇ ರೆವಿನ್ಯೂ ಸೈಟ್‌ಗಳನ್ನು ಪಡೆದುಕೊಂಡು ಮನೆಗಳನ್ನು ಕಟ್ಟಿದ್ದಾರೆ. ಇವಿಷ್ಟನ್ನೂ ಈಗ ಕೆಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅವರಿಂದ ಡೆವಲಪ್‌ಮೆಂಟ್ ಚಾರ್ಜಸ್ ಪಡೆದು ರೆಗ್ಯೂಲರೈಸ್ ಮಾಡಿ ಅವರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹೀಗೆ ನನ್ನ ಕ್ಷೇತ್ರದಲ್ಲಿಯಷ್ಟೇ ಅಲ್ಲಾ ಇಡೀ ಬೆಂಗಳೂರು ನಗರದಲ್ಲಿ ಅನಧಿಕೃತ ಮನೆಗಳು ನಿರ್ಮಾಣವಾಗಿವೆ. ಅವುಗಳನ್ನೆಲ್ಲಾ ಕೆಡವುದಕ್ಕೆ ಹೋದರೆ ಸಾಧ್ಯವಾಗುವುದಿಲ್ಲ. ಬಡವರಾದ ಅವರು ಪುನಃ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ. ಶ್ರೀ ಮೇಲುಕೋಟೆಯವರು ನಮ್ಮ ಅಡ್ಮಿನಿಸ್ಟ್ರೇಟರ್ ಆಗಿದ್ದಾಗ ೮ ರೂಪಾಯಿ ಪ್ರಕಾರ ಚಾರ್ಜಸ್ ಪ್ರಿಸ್ಕ್ರೈಬ್ ಮಾಡಿ ಲೇಔಟ್ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಕಸ್ತೂರಿಬಾ ನಗರ ಹಾಗೂ ಬ್ಯಾಟರಾಯನಪುರದಲ್ಲಿ ೮ ರೂಪಾಯಿಯಂತೆ ವಸೂಲಿ ಮಾಡಿ ಲೇಔಟ್ ಮಾಡಿದರು. ನಗರದಲ್ಲಿ ಎಲ್ಲಾ ಕಡೆ ಈ ರೀತಿ ೮ ರೂಪಾಯಿ ಪ್ರಕಾರ ವಸೂಲಿ ಮಾಡಿ ಲೇಔಟ್ ಮಾಡಿಕೊಟ್ಟರೆ ಮಾತ್ರ ನಾವು ಜನರ ಮಧ್ಯೆ ಹೋಗುವುದಕ್ಕೆ ಸಾಧ್ಯವೇ ಹೊರತು, ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಈ ರೆವಿನ್ಯೂ ಸೈಟ್‌ನಲ್ಲಿ ಮನೆ ಕಡೆ ರಸ್ತೆಗಳು ಇಲ್ಲ, ಚರಂಡಿ ವ್ಯವಸ್ಥೆ ನೀರಿನ ಸೌಕರ್ಯವೇನೇನೂ ಇಲ್ಲ. ಆದ್ದರಿಂದ ರೆವಿನ್ಯೂ ಜಾಗದಲ್ಲಿ ಮನೆಗಳನ್ನು ಕಟ್ಟಿರುವ ಬಗ್ಗೆ ಒಂದು ಪಾಲಿಸಿ ಮಾಡಿ ಅವರಿಗೆ ಎಲ್ಲ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಬೆಂಗಳೂರು ನಗರಸಭೆಯಲ್ಲಿ ವಿದ್ಯಾಭ್ಯಾಸ ಕೂಡಾ ಒಂದು ಭಾಗ. ಈ ಬಗ್ಗೆ ಹೇಳುವುದಾದರೆ ಎಸ್.ಎಸ್.ಎಲ್.ಸಿ.ಯಲ್ಲಿ ಬಂದಿರತಕ್ಕಂತಹ ಒಂದು ಪರ್ಸೆಂಟೇಜನ್ನು ನೋಡಿ ? ಇಲ್ಲಿನ ಎಜ್ಯುಕೇಷನ್ ಆಫೀಸರನ್ನು ನೇಮಕ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲವೇ ಎಂದು ಕೇಳುತ್ತೇನೆ. ಇಲ್ಲಿ ಒಬ್ಬ ರೆವಿನ್ಯೂ ಅಧಿಕಾರಿಯನ್ನು ಇಟ್ಟಿರುವುದರಿಂದ ಹಣ ಪೋಲು ಆಗುತ್ತಿದೆ. ಆದ್ದರಿಂದ ಇಲ್ಲಿಗೆ ವಿದ್ಯಾ ಇಲಾಖೆಯಿಂದ ಒಬ್ಬ ಅಧಿಕಾರಿಯನ್ನು ನೇಮಿಸಿ ಈ ಬಗ್ಗೆ ಹಣ ದುರುಪಯೋಗ ಆಗುತ್ತಿರುವುದನ್ನು ತಪ್ಪಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ಕಾಥಾ ಕೊಡುವ ಬಗ್ಗೆ ತಾರತಮ್ಯವಾಗುತ್ತಿದೆ. ಈ ಬಗ್ಗೆ ಹರಿಜನಗಿರಿಜನರು ಅರ್ಜಿ ಕೊಟ್ಟಾಗ ಅವರಿಗೆ ಕಾಥಾ ಸಿಗುತ್ತಿಲ್ಲ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಬಾಪೂಜಿನಗರದ ಸರ್ವೇ ನಂ. ೨೦೩ರಲ್ಲಿ ನಮ್ಮ ಕಾರ್ಪೋರೇಷನ್‌ನಲ್ಲಿ ಕೆಲಸ ಮಾಡತಕ್ಕ ನೌಕರರೊಬ್ಬರಿಗೆ ಮನೆ ಕಟ್ಟಲು ಸಾಲವನ್ನೂ ಸಹಾ ಮಂಜೂರುಮಾಡಿದ್ದಾರೆ, ಕಾಥಾ ಕೊಟ್ಟಿದ್ದಾರೆ. ಆದರೆ ಇಬ್ಬರು ಪೌರಕಾರ್ಮಿಕರು ಸೈಟ್ ತೆಗೆದುಕೊಂಡು ೨ ವರ್ಷದಿಂದ ಪ್ರಯತ್ನಪಡುತ್ತಿದ್ದಾರೆ, ಅವರಿಗೆ ಮಾತ್ರ ಕಾಥಾ ಕೊಡಲಿಲ್ಲ, ಅವರು ಮನೆಯನ್ನು ಕಟ್ಟುವುದಕ್ಕೆ ಆಗಿಲ್ಲ, ಈ ಬಗ್ಗೆ ಹಿಂದಿನ ಕಮಿಷನರ್‌ರವರ ಗಮನಕ್ಕೂ ತಂದಿದ್ದೇವೆ. ಈಗಿರತಕ್ಕ ಛೀಫ್ ಎಂಜಿನಿಯರ್‌ರವರು ಒಂದು ವಾರದಲ್ಲಿ ಈ ಕೆಲಸ ಆಗಬೇಕೆಂದು, ವರದಿಬರಬೇಕು ಎಂದು ಹೇಳಿದ್ದರೂ, ಈಗ ೧ ತಿಂಗಳು ಆಗುತ್ತಾ ಬಂದಿದೆ, ಇದರ ರೂಪರೇಶ್ ಏನೆಂದು ಗೊತ್ತಾಗಿಲ್ಲ. ಇಂತಹ ತಾರತಮ್ಯ ಏಕೆ ಸ್ವಾಮಿ? ಬಡವರು ಕೊಂಡಿಕೊಂಡಿರತಕ್ಕ ನಿವೇಶನದ ಬಗ್ಗೆ ಈ ಅನ್ಯಾಯ ಸಲ್ಲದು. ಈ ಬಗ್ಗೆ ನ್ಯಾಯ ದೊರಕಿಸಬೇಕಾಗಿದೆ.

ಇನ್ನು ಸಿಟೀ ಮಾರ್ಕೆಟನ್ನು ಚೊಕ್ಕಟ ಮಾಡುವ ಬಗ್ಗೆ ಒಬ್ಬ ಹೆಲ್ತ್ ಇನ್ಸ್‌ಪೆಕ್ಟರ್‌ರವರ ನೆಂಟರೊಬ್ಬರಿಗೆ ೬೦ ಸಾವಿರ ರೂಪಾಯಿಗಳಿಗೆ ಗುತ್ತಿಗೆಗೆ ಕೊಡಲಾಗಿದೆ. ಇದು ಸಮಾಜವಾದದ ತತ್ವ. ಕಂಟೋನ್‌ಮೆಂಟ್ ಮಾರ್ಕೆಟನ್ನು ದಿನಗೂಲಿ ಮೇಲೆ ಚೊಕ್ಕಟಪಡಿಸಲಾಗುತ್ತಿದೆ. ಈ ತಾರತಮ್ಯ ಏಕೆ? ಸಿಟಿಮಾರ್ಕೆಟನ್ನೂ ದಿನಗೂಲಿ ಮುಖಾಂತರ ಚೊಕ್ಕಟಗೊಳಿಸುವುದರಿಂದ ಬಡಜನರಿಗೆ ಕೆಲಸ ಸಿಗುತ್ತದೆ. ಈ ೬೦ ಸಾವಿರ ರೂಪಾಯಿ ಒಬ್ಬ ಹೆಲ್ತ್ ಇನ್ಸ್‌ಪೆಕ್ಟರ್‌ಗೆ ಆದಾಯ ಮಾಡಿಕೊಡಲಾಗುತ್ತಿದೆ. ನಾನು ಹೇಳತಕ್ಕದ್ದರಲ್ಲಿ ಸತ್ಯ ಇದ್ದರೆ ಇದನ್ನು ಸರಿಪಡಿಸಬೇಕೆಂದು ನಾನಾದರೂ ಮನವಿ ಮಾಡಿಕೊಳ್ಳುತ್ತೇನೆ.

ಈಗ ಬಂದಿರತಕ್ಕ ಕಮಿಷನರ್‌ರವರು ಪೌರಕಾರ್ಮಿಕರನ್ನು ಶೋಷಣೆಯಿಂದ ತಪ್ಪಿಸಬೇಕೆಂದು, ಬ್ಯಾಂಕ್ ಮೂಲಕ ಅವರ ಸಂಬಳ ವಿತರಣೆ ಮಾಡುವುದರ ಬಗ್ಗೆ ಹೇಳಿದ್ದಾರೆ. ಆದರೆ ಇವರು ಬ್ಯಾಂಕುಗಳಲ್ಲಿ ಖಾತೆ ತೆಗೆಯಲು ಹೋದಾಗ, ಬ್ಯಾಂಕಿನವರು ಇವರುಗಳ ಖಾತೆ ತೆರೆಯಲು ಒಪ್ಪುತ್ತಾ ಇಲ್ಲ. ಆದ್ದರಿಂದ, ಇವರುಗಳ ಖಾತೆಗಳನ್ನು ತೆರೆಯುವುದರ ಬಗ್ಗೆ ಮಾನ್ಯ ಆರ್ಥಿಕ ಮಂತ್ರಿಗಳು ಬ್ಯಾಂಕುಗಳವರಿಗೆ ಆದೇಶ ಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

೧೯೭೩ನೇ ಇಸವಿಯಲ್ಲಿ ಹ್ಯೂಮನ್ ಡಿಗ್ನಿಟಿ ಇಯರ್ ಎಂದು ಮಹಾತ್ಮಾ ಗಾಂಧೀಜಿಯವರ ೧೦೦ನೇ ವರ್ಷದ ಹುಟ್ಟು ಹಬ್ಬದ ಸಂದರ್ಭದಲ್ಲಿ, ಮಲಮೂತ್ರ ತೆಗೆಯುವುದನ್ನು ರದ್ದು ಮಾಡ ಬೇಕೆಂದು ಪೌರಾಡಳಿತ ಸಚಿವರಾಗಿದ್ದ ಶ್ರೀ ಬಸವಲಿಂಗಪ್ಪನವರು ಎಲ್ಲಾ ಮುನಿಸಿಪಾಲಿಟಿಗೂ ಒಂದು ಆದೇಶವನ್ನು ಕಳುಹಿಸಿದ್ದರು. ಯಾವ ಮುನಿಸಿಪಾಲಿಟಿಯಲ್ಲಿ ಮಲಮೂತ್ರ ತೆಗೆಯಬಾರದೆಂದು, ಆ ಬಗ್ಗೆ ಗ್ರಾಂಟ್ ಸಹಾ ಕೊಟ್ಟರು. ಈ ಮಲ ಹೊರುವ ಪದ್ಧತಿ ಬೆಂಗಳೂರು ನಗರಸಭೆಯಷ್ಟೇ ಅಲ್ಲ, ಹುಬ್ಬಳ್ಳಿ-ಧಾರವಾಡ, ಹಾಗೂ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಇನ್ನೂ ಮುಂದುವರಿಯು ತ್ತಿದೆ. ಇದನ್ನು ತಪ್ಪಿಸುವ ಬಗ್ಗೆ ಪ್ರಯತ್ನವನ್ನೇ ಮಾಡಿಲ್ಲವೆಂದೂ, ಈ ಬಗ್ಗೆ ಸರ್ಕಾರದ ಉದ್ದೇಶ ವೇನೆಂದು ಕೇಳುತ್ತೇನೆ. ಆದ್ದರಿಂದ ಈ ಬಗ್ಗೆ ತಕ್ಷಣ ಆದೇಶ ಕೊಟ್ಟು, ಮಲಮೂತ್ರ ಹೊರುವುದನ್ನು ತಪ್ಪಿಸಿ, ಕೊಟ್ಟಿರತಕ್ಕ ಗ್ರ್ಯಾಂಟನ್ನು ಯಾರು ದುರುಪಯೋಗ ಮಾಡಿಕೊಂಡಿದ್ದಾರೆ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಕಾವೇರಿ ನೀರು ಹೊಸಹೊಸ ಬಡಾವಣೆಗಳಿಗೆ ಹರಿಯುತ್ತಿದೆಯೋ ಹೊರತು, ಬಡವರು ಇರತಕ್ಕ, ಕೊಳಚೇ ಪ್ರದೇಶದಲ್ಲಿ ಇರತಕ್ಕ ಜನರ ಕಡೆ ಹರಿಯುತ್ತಿಲ್ಲ. ಏಕೆಂದರೆ, ಈ ಕಡೆ ಬರೀ ಮುಕ್ಕಾಲು ಇಂಚಿನ ಪೈಪ್ ಹಾಕಿದ್ದಾರೆ. ಇವರು ವಾಸ ಮಾಡತಕ್ಕ ಸ್ಥಳಕ್ಕೆ ಟ್ಯಾಂಕ್‌ನಿಂದ ಸುಮಾರು ೩-೪ ಮೈಲಿ ಹರಿದುಹೋಗಬೇಕು. ನನ್ನ ಕ್ಷೇತ್ರದ ಮೈಸೂರು ರಸ್ತೆಯ ಪೋಲೀಸ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಇರುವ ಟ್ಯಾಂಕ್ ನೀರು ಬ್ಯಾಟರಾಯನಪುರ, ಪಾದರಾಯನಪುರಕ್ಕೆ ಹೋಗಬೇಕು. ಈ ಟ್ಯಾಂಕ್ ನೀರು ಅಲ್ಲಿಗೆ ಸರಿಯಾಗಿ ಹೋಗುವುದಿಲ್ಲ. ನಾಳೆ ಬೆಳಿಗ್ಗೆ ೯ ಗಂಟೆಗೆ ಹೊಸಹಳ್ಳಿಯಲ್ಲಿ ವಾಟರ್‌ಟ್ಯಾಂಕ್ ಇನ್ಯಾಗ್ಯುರೇಷನ್ ಇದೆ. ಮಾಗಡಿ ರಸ್ತೆಯಲ್ಲಿ ಒಂದು ವಾಟರ್ ಟ್ಯಾಂಕ್ ರೆಡಿಯಾಗಿದೆ. ಆದ್ದರಿಂದ ನಾನು ತಿಳಿಸಿರತಕ್ಕ ಪ್ರದೇಶಕ್ಕೂ ಇನ್ನೆರಡು ಟ್ಯಾಂಕ್‌ಗಳು ಬಾರದೆ ಹೋದರೆ ಸಮಸ್ಯೆ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಯುಗಾದಿ ಹಬ್ಬದ ದಿನ ಕೆಂಪಾಪುರ ಅಗ್ರಹಾರದ ಜನ ನೀರು ಬಾರದ್ದರಿಂದ ಕೊಡ ಹೊತ್ತಿಕೊಂಡು ಮನೆ ಹತ್ತಿರ ಬಂದಿದ್ದರು. ಈದ್‌ಮಿಲಾದ್ ಹಬ್ಬದ ದಿನ ಮುಸಲ್ಮಾನ್ ಜನರು ನೀರಿಗಾಗಿ ಬಹಳ ತಾಪತ್ರಯ ಪಟ್ಟು ಮಂತ್ರಿಗಳ ಮನೆಗೆ ಹೋಗಿ ಬಂದರು. ರಂಜಾನ್ ಹಬ್ಬ ಬರುತ್ತಿದೆ. ಇದನ್ನಾದರೂ ಗಮನಿಸಿ ನೀರಿನ ವ್ಯವಸ್ಥೆ ಮಾಡಿ. ವಿದ್ಯುತ್ ಇಲ್ಲ, ಟ್ಯಾಂಕ್ ತುಂಬಿಲ್ಲ ವೆಂದು ಹೇಳಿದರೆ ಹಬ್ಬದ ದಿನ ಸ್ನಾನ ಮಾಡುವುದಕ್ಕೆ ತೊಂದರೆಯಾಗಿ ನಮಾಜಿಗೆ ಹೋಗಲು ತೊಂದರೆ ಯಾಗುತ್ತದೆ. ಈ ಬಗ್ಗೆ ಮುಂದೆ ಆಗಬಹುದಾದ ಅನಾಹುತವನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ನೀರನ್ನು ಒದಗಿಸುವ ಬಗ್ಗೆ ಗಮನಹರಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಪುರಸಭೆಗಳಲ್ಲಿ ೧೮ ಪರ್ಸೆಂಟ್ ಹರಿಜನರ ನೇಮಕಾತಿಯಾಗಿಲ್ಲ. ೧-೨-೩ನೇ ಹುದ್ದೆಗಳಲ್ಲಿ ಇದನ್ನು ಪಾಲನೆ ಮಾಡಿಲ್ಲ, ಇದನ್ನು ತಪ್ಪದೇ ಪಾಲನೆ ಮಾಡುವುದಕ್ಕೆ ಸೂಕ್ತ ಆದೇಶವನ್ನು ಧರ್ಮಸಿಂಗ್ ರವರಾದ ತಾವು ನೀಡಬೇಕೆಂದು ಇಡೀ ೬೦,೦೦೦ ಪೌರಕಾರ್ಮಿಕರ ಪರವಾಗಿ ಮನವಿ ಮಾಡಿಕೊಳ್ಳುತ್ತಾ, ನನಗೆ ಮಾತನಾಡಲು ಸದವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

೪-೩೦ ಪಿ. ಎಂ.

† ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಗೃಹನಿರ್ಮಾಣ ಮತ್ತು ನಗರಾಭಿವೃದ್ಧಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳಿಗೆ ಸಂಬಂಧಪಟ್ಟ ವರದಿಯನ್ನು ಇಂಗ್ಲೀಷಿನಲ್ಲಿಯೇ ಕೊಟ್ಟಿದ್ದಾರೆ. ಇಂಗ್ಲೀಷಿನಲ್ಲಿರುವುದರಿಂದ ಎಲ್ಲಾ ವಿಷಯಗಳನ್ನು ಹೇಳುವುದಕ್ಕೆ ಹೋಗದೇ ದಾವಣಗೆರೆ ನಗರಸಭೆಗೆ ಸಂಬಂಧಪಟ್ಟ ಎರಡು ವಿಷಯಗಳನ್ನು ಮಾತ್ರ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ದಾವಣಗೆರೆ ನಗರಸಭೆಗೆ ಕಳೆದ ೪ ವರ್ಷಗಳಿಂದಲೂ ಚುನಾವಣೆ ನಡೆಸಿಲ್ಲ. ಸರ್ಕಾರಕ್ಕೆ ಚುನಾವಣೆ ನಡೆಸಿದ್ದರೆ ಏನು ತೊಂದರೆಯಾಗುತ್ತಿತ್ತು ಎನ್ನುವುದು ಗೊತ್ತಿಲ್ಲ. ಚುನಾವಣೆಯನ್ನು ನಡೆಸದೇ ಇರುವುದರಿಂದ ನಗರದ ಜನರಿಗೆ ತುಂಬ ತೊಂದರೆಯಾಗಿದೆ ಎನ್ನುವ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಪಡುತ್ತೇನೆ. ಚುನಾವಣೆ ನಡೆದಿದ್ದರೆ?

---

† Indicates that remarks or speeches have not been revised by the member concerned.

೩೫ ಜನ ಪ್ರಜಾ ಪ್ರತಿನಿಧಿಗಳು ನಗರವನ್ನು ಚೊಕ್ಕಟವಾಗಿಡುವುದಕ್ಕೆ ನಗರದ ಅಭಿವೃದ್ಧಿಗೆ ಸತತವಾಗಿ ಪ್ರಯತ್ನ ಪಡುತ್ತಿದ್ದರು. ಚುನಾಯಿತ ಪ್ರತಿನಿಧಿಗಳಿಗೆ ಸಂಭಾವನೆ ಕೊಡಬೇಕಾಗಿರಲಿಲ್ಲ. ಹಿಂದಿನ ಸರ್ಕಾರ ೧೦೦ ರೂಪಾಯಿ ಕೊಡುತ್ತಿತ್ತು. ಅದನ್ನು ತೆಗೆದಿದ್ದರೂ ಯಾರೂ ಕೇಳುತ್ತಿರಲಿಲ್ಲ. ನಗರಸಭೆಯು ನಾಗರೀಕರ ಸೇವೆ ಮಾಡಬೇಕು. ನಗರದ ಅಭಿವೃದ್ಧಿ ಬಗ್ಗೆ ಅಭಿಮಾನ ಇರಬೇಕು. ಕಳೆದ ನಾಲ್ಕು ವರ್ಷದಿಂದ ನಗರಸಭೆಯು ಆಡಳಿತ ವರ್ಗದವರ ಕೈಯಲ್ಲಿ ಇದೆ. ಕಮೀಷನ್‌ರವರು ಇದ್ದಾರೆ. ಆಡಳಿತಾಧಿಕಾರಿಗಳು ಇದ್ದಾರೆ. ತಾವು ಕಾಯಂ ಆಗಿ ನೇಮಿಸಿಲ್ಲ. ಎರಡೂವರೆ ಲಕ್ಷ ಜನಸಂಖ್ಯೆ ಇರತಕ್ಕ ನಗರಸಭೆಗೆ ಜಿಲ್ಲಾಧಿಕಾರಿಯವರನ್ನು ಆಡಳಿತಾಧಿಕಾರಿಗಳನ್ನಾಗಿ ನೇಮಿಸಿದ್ದೀರಿ. ಅವರು ಒಂದು ವಾರದಲ್ಲಿ ಒಂದು ದಿವಸ ಬಂದು, ಇಡೀ ನಗರದ ಸಮಸ್ಯೆಯನ್ನು ತಿಳಿದುಕೊಂಡು ಕಾಗದಪತ್ರಗಳಿಗೆ ರುಜು ಹಾಕುವುದಕ್ಕೆ ವೇಳೆ ಎಲ್ಲಿದೆ ? ಅಲ್ಲದೆ ಜಿಲ್ಲಾಧಿಕಾರಿಯವರು ಬಂದರೆ ತಹಶೀಲ್ದಾರ್ ಬಿ.ಡಿ.ಓ. ಬರುತ್ತಾರೆ. ನಗರದ ಕೆಲಸವನ್ನು ನೋಡುವುದಕ್ಕಾಗುವುದಿಲ್ಲ. ಆದ್ದರಿಂದ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಸಮರ್ಪಕವಾಗಿ ನಡೆಸುವುದಕ್ಕೆ ಆಗುವುದಿಲ್ಲ ಎನ್ನುವಂತ ಮಾತನ್ನು ಹೇಳುತ್ತಾ ಚುನಾವಣೆ ನಡೆಸುವುದಕ್ಕೆ ಈಗಲೂ ಪ್ರಾರಂಭ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಚುನಾವಣೆ ನಡೆಸುವುದಕ್ಕೆ ಯಾವ ತೊಂದರೆಯೂ ಇಲ್ಲ. ಚುನಾವಣೆ ನಡೆಸುವುದರಿಂದ ಅನಾಹುತವೇನೂ ಆಗುವುದಿಲ್ಲ. ನಗರದ ನಾಗರೀಕರ ಹಿತವನ್ನು ರಕ್ಷಣೆ ಮಾಡತಕ್ಕ ಸರ್ಕಾರ ಚುನಾಯಿತ ಪ್ರತಿನಿಧಿಗಳು ಬಂದರೆ, ಸರ್ಕಾರ ಸಹಾಯ ಮಾಡಬೇಕಾಗುತ್ತೆ ಹಣ ಒದಗಿಸಬೇಕಾಗುತ್ತದೆ. ನಗರವನ್ನು ಸುಂದರವಾಗಿಡುವುದು, ಚೊಕ್ಕಟವಾಗಿಡುವುದು ನೀರಿನ ಸೌಲಭ್ಯ, ದೀಪದ ವ್ಯವಸ್ಥೆ, ರಸ್ತೆ ರಿಪೇರಿ, ಹೊಸದಾಗಿ ರಸ್ತೆಗಳನ್ನು ನಿರ್ಮಾಣ ಮಾಡುವುದು ಅತ್ಯಗತ್ಯವಾದ ಕೆಲಸವನ್ನು ಮಾಡುವುದಕ್ಕೆ ಸಹಾಯಕವಾಗುತ್ತದೆ. ನಗರಸಭೆಯಲ್ಲಿ ಆಡಳಿತಾಧಿಕಾರಿಗಳು ಕಮೀಷನರು ಇರುವುದರಿಂದ ಸಮರ್ಪಕವಾಗಿ ಕೆಲಸ ನಡೆದಿಲ್ಲ. ನಡೆಸುವುದಕ್ಕೆ ಆಗುವುದಿಲ್ಲ. ಎರಡೂವರೆ ಲಕ್ಷ ಜನಸಂಖ್ಯೆ ಇರತಕ್ಕ ದೊಡ್ಡ ನಗರವನ್ನು ಒಬ್ಬ ಅಧಿಕಾರಿಯಿಂದ ನೋಡಿಕೊಳ್ಳುವುದು ಸಾಧ್ಯವಿಲ್ಲದ ಮಾತು. ಚುನಾಯಿತ ಪ್ರತಿನಿಧಿಗಳು ಬಂದರೆ, ಅಧಿಕಾರಿಗಳ ಮೇಲೆ ಒತ್ತಡ ತಂದು ಕೆಲಸವನ್ನು ಮಾಡಿಸಿಕೊಂಡು ಜನರಿಗೆ ಅನುಕೂಲವನ್ನು ಒದಗಿಸುತ್ತಾರೆ. ಮಾನ್ಯ ಮಂತ್ರಿಯವರು ಇದರ ಬಗ್ಗೆ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗಾಗಿ ಇಡೀ ರಾಜ್ಯಕ್ಕೆ ಒಂದು ಕಾರ್ಪೊರೇಷನ್ ಮಾಡಿದ್ದಾರೆ. ದಾವಣಗೆರೆ ನಗರಕ್ಕೆ ನೀರಿನ ಕೊರತೆ ಇಲ್ಲ. ಆದರೂ ಜನರಿಗೆ ನೀರು ಸರಿಯಾಗಿ ಸಿಗುತ್ತಿಲ್ಲ. ಇದಕ್ಕೆ ಕಾರಣ ಏನು ಎಂದರೆ ಕಳೆದ ಇಪ್ಪತ್ತೈದು ವರ್ಷಗಳ ಹಿಂದೆ ಯಾವ ಪೈಪು ಹಾಕಿದ್ದರೋ ಅದೇ ಪೈಪೇ ಈಗಲೂ ಇದೆ. ಅವೊತ್ತಿನ ದಿವಸ ಜನಸಂಖ್ಯೆ ಕಡಿಮೆ ಇದ್ದುದರಿಂದ ಜನಸಂಖ್ಯೆಗೆ ಅನುಗುಣವಾಗಿ ಸಣ್ಣ ಪ್ರಮಾಣದ ಪೈಪುಗಳನ್ನು ಹಾಕಿದ್ದರು, ಇವತ್ತು ಜನಸಂಖ್ಯೆ ಹೆಚ್ಚಾಗಿದೆ ನೀರು ಬರುವಂತಾದ್ದು ಸಾಕಾಗುತ್ತಿಲ್ಲ. ಅನೇಕ ಜನರಿಗೆ ತೊಂದರೆಯಾಗಿದೆ. ೯ ಮತ್ತು ೫ ಅಡಿ ಗುಂಡಿ ತೆಗೆದು ನೀರು ಪಡೆಯುವಂತಹ ಸಮಸ್ಯೆ ಇವತ್ತು ದಾವಣಗೆರೆ ನಗರದಲ್ಲಿ ಇದೆ. ಇದರಿಂದ ಆರೋಗ್ಯಕ್ಕೂ ಧಕ್ಕೆಯಾಗುತ್ತಿದೆ. ಇದನ್ನು ನಿವಾರಣೆ ಮಾಡುವ ಕೆಲಸ ಯಾರದು ? ನಗರಸಭೆಯವರು ನೋಡಬೇಕು ? ಒಳಚರಂಡಿ, ಇಲಾಖೆಯವರು ನೋಡಬೇಕೆ ? ದಾವಣಗೆರೆಯಲ್ಲಿ ಸಮಗ್ರ ನೀರು ಸರಬರಾಜು ಯೋಜನೆಗಾಗಿ ಒಂದು ಕೋಟಿ ರೂಪಾಯಿ ಖರ್ಚು ಮಾಡಿ, ವ್ಯವಸ್ಥಿತವಾಗಿ ಕಟ್ಟಿದ್ದಾರೆ. ಅಲ್ಲಿರತಕ್ಕ ಯಂತ್ರಗಳೆಲ್ಲವೂ ಕೆಟ್ಟು ಹೋಗಿ ಎರಡು ವರ್ಷಗಳಾಗಿರಬಹುದು. ಏತಕ್ಕೆ ಕೆಟ್ಟು ಹೋಯಿತೆಂದು ನೋಡುವವರು ಇಲ್ಲ. ಕೇಳುವವರೂ ಇಲ್ಲ, ಇದನ್ನು ನೋಡಿಕೊಳ್ಳುವುದಕ್ಕೆ ಸಿಬ್ಬಂದಿ ಇಲ್ಲ. ಕೆಟ್ಟು ಹೋಗಿರತಕ್ಕ ಯಂತ್ರಗಳನ್ನು ತೆಗೆಸಿ ಹಾಕಿ, ಬೇರೆ ಯಂತ್ರಗಳನ್ನು ಅಳವಡಿಸಿ ಭದ್ರಾ ನಾಲೆಯಿಂದ ಬರತಕ್ಕ ನೀರನ್ನು ಶುದ್ಧಗೊಳಿಸಿ ನಗರದ ನಾಗರೀಕರಿಗೆ ಒದಗಿಸುವ ವ್ಯವಸ್ಥೆಯನ್ನು ನೋಡಿಕೊಳ್ಳುವವರಿಗೆ ದಿನಗೂಲಿ ಕೊಡುತ್ತಿದ್ದಾರೆ. ೫-೬-೭ ರೂಪಾಯಿ ದಿನಗೂಲಿ ಮೇಲೆ ಇವತ್ತು ಅವರು ಕೆಲಸ ಮಾಡುತ್ತಿದ್ದಾರೆ. ಅಧಿಕಾರಿಗಳು ಅಲ್ಲಿ ಹೋಗಿ ಸರಿಯಾಗಿ ನೋಡುವುದಿಲ್ಲ. ಅದರಿಂದ ಆಗಿಂದಾಗ್ಗೆ ನೀರಿನ ಬಗ್ಗೆ ಅನೇಕ ತಕರಾರು ಬರುತ್ತಿರುತ್ತದೆ. ನೀರಿನಲ್ಲಿ ಗಲೀಜು ಬರುತ್ತದೆ. ಹುಳುಗಳು ಬರುತ್ತದೆ. ಸರಿಯಾದಂತ ನೀರು ಇರುವುದಿಲ್ಲ. ಇದಕ್ಕೆಲ್ಲಾ ಸರಿಯಾದಂಥ ವ್ಯವಸ್ಥೆಯನ್ನು ಮಾಡಬೇಕಾದರೆ ಪ್ರಜಾಪ್ರಭುತ್ವದ ಆಧಾರದಮೇಲೆ ಚುನಾಯಿತ ಪ್ರತಿನಿಧಿಗಳು ಇದ್ದರೆ ಮಾತ್ರ ಸಾಧ್ಯ. ನಾವು ಎಷ್ಟು ಹಣ ಖರ್ಚು

ಮಾಡಿದರೂ ಅದನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಅಲ್ಲಿರತಕ್ಕ ಪ್ರತಿನಿಧಿಗಳು ವ್ಯವಸ್ಥಿತವಾಗಿ ಕೆಲಸ ಮಾಡಬೇಕಾಗುತ್ತದೆ. ಹಿಂದೆ ನಾನು ನಾಲ್ಕು ವರ್ಷ ಆ ನಗರದ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಒಳ್ಳೆಯ ಕೆಲಸ ಮಾಡಿದ್ದೇನೆ. ನಾವು ಇದ್ದ ಕಾಲದಲ್ಲಿ ಸಾಕಷ್ಟು ಗಿಡಗಳನ್ನು ಹಾಕಿಸಿದ್ದೆವು. ಇವೊತ್ತು ಗಿಡಗಳನ್ನು ಉಳಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಇನ್ನು ಬೇಕಾದಷ್ಟು ಗಿಡಗಳನ್ನು ಹಾಕಲಿಕ್ಕೆ ಅವಕಾಶ ಇದೆ. ನಗರಸಭೆಯ ಕರ್ತವ್ಯ ಏನು ? ಜನರಿಗೆ ಒಳ್ಳೆಯ ಗಾಳಿ ನೀರು, ದೀಪದ ಸೌಕರ್ಯ ಒದಗಿಸತಕ್ಕದ್ದೇ ಮುಖ್ಯ ಕರ್ತವ್ಯ, ಇದನ್ನು ಬಿಟ್ಟರೆ ಅವರಿಗೆ ಬೇರೆ ಏನು ಕೆಲಸ ಇದೆ. ಹಿಂದೆ ನಾವು ಏನು ಕೆಲಸ ಮಾಡಿದ್ದೆವು. ಆ ಕೆಲಸಗಳೆಲ್ಲಾ ಇವೊತ್ತು ಹಾಳಾಗಿವೆ. ಇದು ನಾನು ಮೆಚ್ಚಿಗೆ ಪಡೆದುಕೊಳ್ಳ ಬೇಕೆಂದು ಹೇಳುತ್ತಿಲ್ಲ. ನಾಲ್ಕು ವರ್ಷ ಕಷ್ಟಪಟ್ಟು ಕೆಲಸ ಮಾಡಿದ್ದೇವೆ. ಈ ವರ್ಷದಲ್ಲಿ ಎಲ್ಲಾ ಹಾಳಾಗಿ ಹೋಗುತ್ತಿವೆ. ಇದಕ್ಕೆ ಕಾರಣ ನಮ್ಮ ಸರ್ಕಾರ ಚುನಾವಣೆ ನಡೆಸದೇ ಇರುವುದೇ ಹೊರತು ಬೇರೆ ಏನೂ ಕಾರಣ ಇಲ್ಲ. ಸರ್ಕಾರ ಚುನಾವಣೆ ನಡೆಸತಕ್ಕ ವ್ಯವಸ್ಥೆ ಮಾಡಿದ್ದರೆ ಅಲ್ಲಿ, ಖಂಡಿತವಾಗಿ ಅಭಿವೃದ್ಧಿಯಾಗುತ್ತಿತ್ತು. ಅಲ್ಲಿ ಯಾರೇ ಪ್ರಜಾಪ್ರತಿನಿಧಿ ಬಂದರೂ ಆ ನಗರದ ಜನತೆಯ ಬಗ್ಗೆ ಒಳ್ಳೆಯ ಕೆಲಸ ಮಾಡತಕ್ಕ ಯೋಚನೆ ಮಾಡುತ್ತಾರೆ. ಆದ್ದರಿಂದ ಚುನಾವಣೆ ನಡೆಸತಕ್ಕ ಬಗ್ಗೆ ಯೋಚನೆ ಮಾಡಬೇಕು. ಇನ್ನು ದಾವಣಗೆರೆ ನಗರಾಭಿವೃದ್ಧಿ ಮಂಡಲಿ ಅಂಥ ರಚನೆ ಮಾಡಿದರು. ನಗರಾಭಿವೃದಿ ಮಂಡಲಿಗೆ ಅಧ್ಯಕ್ಷರನ್ನು ನೇಮಿಸಿದಿರಿ ಅಧ್ಯಕ್ಷರು ಅದೆಷ್ಟು ಅವರ ಕೆಲಸ ಮಾಡಿದರು. ಅದರ ಬಗ್ಗೆ ವಿರೋಧವಿಲ್ಲ. ಅಧ್ಯಕ್ಷರನ್ನು ತೆಗೆದು ಹಾಕಿದಿರಿ. ನಗರಾಭಿವೃದ್ಧಿ ಮಂಡಲಿ ಇದೆ. ಅದಕ್ಕೆ ಬೇಕಾದಂಥ ಸಿಬ್ಬಂದಿ ಇದೆ ಸಿಬ್ಬಂದಿ ಏನೂ ಕೆಲಸಮಾಡುತ್ತಿಲ್ಲ. ಅದಕ್ಕೆ ಡಿ.ಸಿ. ಅವರು ಅಧ್ಯಕ್ಷರಾಗಿದ್ದಾರೆ. ಅವರ ಕೆಲಸವೇ ಅವರಿಗೆ ಜಾಸ್ತಿ ಇದೆ. ಈ ನಗರಾಭಿವೃದ್ಧಿ ಬಗ್ಗೆ ಅವರು ಯೋಚನೆ ಮಾಡಲಿಕ್ಕೆ ಆಗುತ್ತದೆಯೋ ? ಬೇರೆ ಕಡೆಗಳಲ್ಲಿ ನಗರಾಭಿವೃದ್ಧಿ ಮಂಡಲಿ ಅಧ್ಯಕ್ಷರನ್ನು ನೇಮಿಸಿದ್ದೀರಿ. ಈ ದಾವಣಗೆರೆ ಏನು ಕರ್ಮ ಮಾಡಿದೆಯೋ ಗೊತ್ತಿಲ್ಲ. ಇನ್ನು ಟೌನ್ ಪ್ಲಾನಿಂಗ್ ಅಂಥ ಹೇಳುತ್ತೀರಿ. ದಾವಣಗೆರೆಯನ್ನು ಇನ್ನು ಹತ್ತು ವರ್ಷ ಬಿಟ್ಟು ನೋಡಿದರೆ ಸಾಮಾನ್ಯ ಹಳ್ಳಿ ಗಳಿಗಿಂತಲೂ ಕೀಳು ಮಟ್ಟದಲ್ಲಿ ಬರತಕ್ಕ ಪರಿಸ್ಥಿತಿ ಉಂಟಾಗುತ್ತದೆ. ಇನ್ನು ಸ್ವಂತಕ್ಕೆ ಎಂದು ಜಮೀನು ಖರೀದಿ ಮಾಡಿ ಸೈಟುಗಳನ್ನು ವಿಂಗಡಿಸಿ, ಚಿಕ್ಕ ಚಿಕ್ಕ ಸೈಟುಗಳು ಚಿಕ್ಕ ಚಿಕ್ಕ ರಸ್ತೆಗಳನ್ನು ಮಾಡುತ್ತಿದ್ದಾರೆ. ಅದನ್ನು ಜನರು ಕೊಂಡುಕೊಳ್ಳುತ್ತಿದ್ದಾರೆ. ಸುಮ್ಮನೆ ನಾವು ಹೆಸರಿಗೆ ನಗರಾಭಿವೃದ್ಧಿ ಮಂಡಲಿ ಟೌನ್ ಪ್ಲಾನಿಂಗ್ ಅಂಥ ಅದು ಇದು ಹೇಳುತ್ತಿದ್ದರೂ ಕೂಡ ಅದರ ಅಭಿವೃದ್ಧಿಯಾಗಿಲ್ಲ. ಅಭಿವೃದ್ಧಿ ಇಂದು ಹಾಳಾಗುತ್ತಿದೆ. ಅದನ್ನು ಕೂಡ ಮಾನ್ಯ ಮಂತ್ರಿಗಳು ಗಮನಿಸಬೇಕೆಂದು ಹೇಳುತ್ತೇನೆ. ತಕ್ಷಣ ಅಭಿವೃದ್ಧಿ ಮಂಡಲಿಗೆ ಅಧ್ಯಕ್ಷರನ್ನು ನೇಮಿಸತಕ್ಕ ವ್ಯವಸ್ಥೆಯಾಗಬೇಕು ಅದಕ್ಕೆ ಬೇಕಾದಷ್ಟು ಪೈಪೋಟಿ ಬರಬಹುದು. ಯಾರನ್ನೊ ಒಬ್ಬರು ಒಳ್ಳೆಯವರನ್ನು ನೇಮಿಸಿ ನಗರಾಭಿವೃದ್ಧಿಯಾಗುವುದಕ್ಕೆ ಬೇಕಾದಷ್ಟು ಸವಲತ್ತು ಅವರಿಗೆ ಒದಗಿಸಿಕೊಟ್ಟು ಈಗ ಆಗುತ್ತಿರುವ ಅನಾಹುತವನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಸರ್ಕಾರದಲ್ಲಿ ಆರ್ಥಿಕವಾಗಿ ಹಿಂದುಳಿದಂಥವರಿಗೆ ಪುಕ್ಕಟ್ಟೆ ಸೈಟು ಕೊಡುವುದು ಮನೆಗಳನ್ನು ಕಟ್ಟಿಸಿಕೊಡುವುದು, ಇವೆಲ್ಲಾ ಯೋಜನೆಗಳು ಇವೆ. ದಾವಣಗೆರೆಯಲ್ಲಿ ಆ ಯೋಜನೆ ಏನಾಯಿತೋ ಗೊತ್ತಿಲ್ಲ. ಮಾನ್ಯ ಮಂತ್ರಿಗಳಿಗೆ ಒಂದು ವಿಚಾರ ಗೊತ್ತಿದೆ. ಯಾವುದೋ ಒಂದು ಖಾಸಗಿ ಮಾಲೀಕರ ಜಾಗದಲ್ಲಿ ಮನೆಗಳನ್ನು ಕಟ್ಟಿಸಿದಾಗ ಅವರು ಉಚ್ಚ ನ್ಯಾಯಾಲಯದಿಂದ ಆ ಮನೆಗಳನ್ನು ತೆಗೆಸಲಿಕ್ಕೆ ಆರ್ಡರ್ ತಂದು ಎಲ್ಲ ಮನೆಗಳನ್ನು ಕಿತ್ತು ಹಾಕಿಸಿದರು. ಅಲ್ಲಿ ಮನೆ ಕಟ್ಟಿ ಕೊಂಡಿದ್ದಂಥವರು ಯಾರು ಆರ್ಥಿಕವಾಗಿ ಹಿಂದುಳಿದವರು ದುರ್ಬಲವರ್ಗದವರು, ಅಲ್ಪಸಂಖ್ಯಾತರು, ಇಂಥ ಜನರಿಗೆ ನಗರಸಭೆಯವರಾಗಲೀ ಅಥವಾ ನಗರಾಭಿವೃದ್ಧಿ ಮಂಡಲಿಯವರಾಗಲೀ ಪುಕ್ಕಟ್ಟೆಯಾಗಿ ಸೈಟು ಕೊಡಬಹುದಾಗಿತ್ತು. ಆರ್ಥಿಕವಾಗಿ ಹಿಂದುಳಿದವರಿಗೆ ದುರ್ಬಲವರ್ಗದವರಿಗೆ ಮನೆಗಳನ್ನು ಕಳೆದು ಕೊಂಡು ೧೫ ದಿವಸಗಳವರೆಗೆ ಯಾವ ಗಂಡು ಮಕ್ಕಳು, ಹೆಣ್ಣು ಮಕ್ಕಳು ರಸ್ತೆಯಲ್ಲಿ ಬಿದ್ದಿದ್ದವರು ಅಂಥ ನಿರ್ಗತಿಕರಿಗೆ ಸರ್ಕಾರ ಸೈಟುಗಳನ್ನು ಒದಗಿಸಲಿಲ್ಲ. ಅನಂತರ ಒದಗಿಸಿದರು. ದೊಡ್ಡ ಮನಸ್ಸು ಮಾಡಿ ನಗರಾಭಿವೃದ್ಧಿ ಮಂಡಲಿಯಿಂದ ೧೫ ಸಾವಿರ ರೂಪಾಯಿಗೆ ಒಂದು ಎಕರೆ ಜಮೀನು ತೆಗೆದುಕೊಂಡು ಆ ಜಮೀನಿನಲ್ಲಿ ೩೦ ಅಡಿ ಉದ್ದ ಹನ್ನೆರಡೂವರೆ ಅಡಿ ಅಗಲ ಜಾಗ ಕೊಟ್ಟರು. ಅದು ೧೧೫೦ ರೂಪಾಯಿ ಬೆಲೆಗೆ ೩೦೦ ರೂಪಾಯಿ ಸಬ್ಸಿಡಿ ಅಂಥ ಹೇಳಿ ಅದೇನೋ ಧರ್ಮ ಅಂಥ ಬಿಟ್ಟರು. ಒಂದು ಸೈಟಿಗೆ ೮೫೦ ರೂಪಾಯಿ ಆಯಿತು. ಈ ತರಹ ಸೈಟುಗಳು ಒಂದು ಎಕರೆಗೆ ರಸ್ತೆ ಬಿಟ್ಟು ಸುಮಾರು ೭೦-೭೫ ಆಗಬಹುದು. ಒಂದು ಸೈಟಿಗೆ ೮೦೦ ರೂಪಾಯಿಯಂತೆ ಲೆಕ್ಕ ಹಾಕಿದರೂ ಬೇಕಾದಷ್ಟು ದುಡು

ಆಗುತ್ತದೆ. ಆ ನಿರ್ಗತಿಕರ ಕಡೆಯಿಂದ ಇವರು ಆ ಬೆಲೆಯನ್ನು ತೆಗೆದುಕೊಳ್ಳಬೇಕಾಗಿತ್ತೇನು. ಅಲ್ಲಿ ರಸ್ತೆ ಮಾಡಿಸಿಲ್ಲ. ದೀಪಗಳನ್ನು ಹಾಕಿಸಿಲ್ಲ. ಅಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗಿಲ್ಲ. ಹೊಲದಲ್ಲಿ ಒಂದು ಗೆರೆ ಹಾಕಿ ಸೈಟುಗಳಿಗೆ ದುಡ್ಡು ತೆಗೆದುಕೊಂಡಿದ್ದಾರೆ. ಮುಂದೆ ಅದು ಅಭಿವೃದ್ಧಿಯಾಗಬೇಕಾದರೆ ಎಷ್ಟೋ ಸಮಯ ಬೇಕಾಗುತ್ತದೆ. ಇಷ್ಟೊಂದು ಹಣ ತೆಗೆದುಕೊಳ್ಳುತ್ತಿರುವಾಗ ಸರ್ಕಾರ ನಾವು ಬಡವರಿಗೆ ಸಹಾಯ ಮಾಡುತ್ತೇವೆಂದು ಏತಕ್ಕೆ ಹೇಳಿಕೊಳ್ಳಬೇಕು. ಸರ್ಕಾರ ಹೇಳ ತಕ್ಕುದ್ದು ಒಂದು ನಡೆದುಕೊಳ್ಳತಕ್ಕುದ್ದು ಒಂದು ಮಾನ್ಯ ಮಂತ್ರಿಗಳು ನಾನು ಒಂದು ಲಕ್ಷ ರೂಪಾಯಿ ಕೊಡುತ್ತೇನೆ. ಒಳ್ಳೆಯ ಜಾಗ ಮಾಡೋಣ ಎಂದು, ಆದರೆ ಅಲ್ಲಿರತಕ್ಕವರು ಮಾನ್ಯ ಮಂತ್ರಿಗಳು ಹೇಳಿದ್ದನ್ನು ಗಣನೆಗೆ ತೆಗೆದುಕೊಳ್ಳದೇ ರಾಜಕೀಯ ಮಾಡಿ ಜನರಿಗೆ ತೊಂದರೆ ಕೊಟ್ಟಿದ್ದಾರೆ. ಇವೊತ್ತು ಅಲ್ಲಿ ಮನೆ ಕಳೆದುಕೊಂಡಿರತಕ್ಕವರು ಹಣ ಎಲ್ಲಿಂದ ತಂದುಕೊಡಲಿಕ್ಕೆ ಸಾಧ್ಯವಾಗುತ್ತದೆ. ಅವರು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋದದ್ದರಿಂದ ಅವರು ಕೆಲಸಕ್ಕೆ ಹೋಗಲಿಕ್ಕೆ ಸಾಧ್ಯವಾಗದೆ ಕೆಲಸ ಕಳೆದುಕೊಂಡು ತಮ್ಮ ಜೀವನ ನಡೆಸತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಅಂಥ ಜನರಿಂದ ಇವೊತ್ತು ನಗರಾಭಿವೃದ್ಧಿ ಮಂಡಲಿಯವರು ಬೇರೆ ಹಣ ತೆಗೆದುಕೊಂಡಿದ್ದಾರೆ ಅಂಥವರಿಗೆಲ್ಲಾ ಪುಕ್ಕಟ್ಟೆ ನಿವೇಶನ ಒದಗಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಗರಸಭೆಯವರಾಗಿದ್ದರೆ ಪುಕ್ಕಟ್ಟೆ ಕೊಡುತ್ತಿದ್ದರು ಹಿಂದೆ ನಾವು ಬೇಕಾದಷ್ಟು ಜನರಿಗೆ ಕೊಟ್ಟಿದ್ದೇವೆ, ಸರ್ಕಾರದ ಒಪ್ಪಿಗೆಯ ಮೇಲೆ, ಮಾನ್ಯ ಮುಖ್ಯಮಂತ್ರಿಗಳ ಒಪ್ಪಿಗೆಯ ಮೇಲೆ ಮೂವತ್ತು ನಲವತ್ತು ಇಪ್ಪತ್ತು ಮೂವತ್ತು ಅಡಿಗಳುಳ್ಳ ನಿವೇಶನಗಳನ್ನು ಯಾರು ಶ್ರೀಮಂತರಲ್ಲ, ಯಾರು ಹಣವಂತರಲ್ಲ, ಅಂಥ ಬಡವರಿಗೆ ಕೊಟ್ಟಿದ್ದೇವೆ. ಆದರೆ ಇವೊತ್ತು ಅಂಥ ಬಡವರಿಗೆ ಇವೊತ್ತು ತಾವು ಇಷ್ಟೊಂದು ಬೆಲೆಗೆ ಸೈಟು ಮಾರಾಟ ಮಾಡಿದ್ದೀರಾ ಅಂದರೆ ಸರ್ಕಾರದ ಉದ್ದೇಶ ಏನು? ನಗರಾಭಿವೃದ್ಧಿ ಮಂಡಲಿಯವರು ಸೈಟುಗಳನ್ನು ಮಾಡಿ ದೊಡ್ಡ ದೊಡ್ಡವರಿಂದ ಹೆಚ್ಚು ಹಣ ಪಡೆದು ಸಾಮಾನ್ಯ ಜನರಿಗೆ ಕಡಿಮೆ ಬೆಲೆಯಲ್ಲಿ ಕೊಡಬೇಕು. ಆದರೆ ಇಲ್ಲಿ ಏನಾಗಿದೆ ಬಡಜನರಿಂದಲೇ ಹೆಚ್ಚು ಹಣವನ್ನು ಪಡೆದಿದ್ದಾರೆ. ೧೫ ಸಾವಿರರೂಪಾಯಿ ಎಕರೆಗೆ ತೆಗೆದುಕೊಂಡು ೬೦ ಸಾವಿರ ರೂಪಾಯಿ ಎಕರೆಗೆ ಆಗುವಷ್ಟು ಲೆಕ್ಕ ಹಾಕಿ ಹಣ ತೆಗೆದುಕೊಂಡಿದ್ದಾರೆ. ಈ ರೀತಿ ಆದರೆ ಡೆವಲಪ್‌ಮೆಂಟ್ ಹೇಗೆ ಆಗುತ್ತದೆ. ಇದೇ ರೀತಿ ಆದರೆ ಇನ್ನು ಹತ್ತುವರ್ಷ ಬಿಟ್ಟರೂ ಅಭಿವೃದ್ಧಿಗೊಳಿಸುವುದಕ್ಕೆ ಆಗುವುದಿಲ್ಲ. ತಾವು ಆ ಜನರಿಂದ ಹಣ ಪಡೆಯುವಾಗ ಅವರಿಗೆ ಕಂತು ಕೊಟ್ಟಿದ್ದೇವೆಂದು ತಾವು ಹೇಳಬಹುದು. ಆ ನಿರ್ಗತಿಕ ಜನರಿಗೆ ಸರ್ಕಾರ ಪುಕ್ಕಟ್ಟೆ ನಿವೇಶನಗಳನ್ನು ಒದಗಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ನನಗೆ ಇಂಗ್ಲಿಷ್ ಅಷ್ಟಾಗಿ ಬರುವುದಿಲ್ಲ. ಆದರೂ ಕೂಡ ತಮ್ಮ ಡಿಮ್ಯಾಂಡ್‌ನಲ್ಲಿ ಎಲ್ಲಾದರೂ ಕೊಳಚೆ ಪ್ರದೇಶದ ಬಗ್ಗೆ ಹೇಳಿದ್ದಾರೆಯೋ ಎಂದರೆ ಎಲ್ಲೂ ಇಲ್ಲ. ಅದರಲ್ಲೂ ನಮ್ಮ ದಾವಣಗೆರೆ ನಗರವಂತೂ ಲೆಕ್ಕಕ್ಕೇ ಇಲ್ಲ. ನಮ್ಮ ದಾವಣಗೆರೆಯನ್ನು ಏತಕ್ಕಾಗಿ ಮರೆತರು ಎಂಬುದು ನನಗೆ ಅರ್ಥವೇ ಆಗಲಿಲ್ಲ. ಸ್ವಾಮಿ, ನಮ್ಮಲ್ಲಿ ಸುಮಾರು ೨೨ ಕೊಳಚೆ ಪ್ರದೇಶಗಳಿವೆ. ಇಷ್ಟು ಇದ್ದರೂ ಕೂಡ ಆ ಭಾಗದ ಯೋಚನೆಯನ್ನೇ ಈ ಸರ್ಕಾರದವರು ಮಾಡಿದಂತೆ ಕಾಣುತ್ತಿಲ್ಲ. ಈ ಕೊಳಚೆ ಪ್ರದೇಶಗಳಲ್ಲಿ ಕೆಲವು ನಗರಸಭೆಯ ಜಮೀನಿನಲ್ಲಿವೆ, ಇನ್ನು ಕೆಲವು ಖಾಸಗಿ ಜನರ ಜಮೀನಿನ ಮೇಲೆ ಇವೆ. ಹಾಗಾದರೆ ಸರ್ಕಾರದವರು ಏನು ಮಾಡುತ್ತಿದ್ದಾರೆ. ಕೊಳಚೆ ಪ್ರದೇಶಗಳೆಂದು ತಾವು ಏನು ತೀರ್ಮಾನ ಮಾಡಿದ್ದೀರಿ ಅಂಥ ಪ್ರದೇಶದಲ್ಲಿ ಕೆಲವರು ಜಾಗವನ್ನು ಅಳತೆಮಾಡಿ ಈಗಾಗಲೇ ಮಾರಾಟ ಮಾಡುತ್ತಿದ್ದಾರೆ. ಆದರೆ ಆ ರೀತಿ ಮಾರಾಟ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೂ ನಮ್ಮ ದಾವಣಗೆರೆಯಲ್ಲಿ ಇಂಥದ್ದು ನಡೆಯುತ್ತಿದೆ. ಇದನ್ನು ತಾವು ತಡೆಯಬೇಕು. ಏತಕ್ಕೆ ಹೀಗೆ ಆಗುತ್ತಿದೆ ಎಂದರೆ ಅವರು ಹೇಳುತ್ತಾರೆ. ಸ್ವಾಮಿ, ಎಷ್ಟು ದಿವಸ ಅಂತ ನಾವು ಈ ಕೊಳಚೆ ಪ್ರದೇಶದಲ್ಲಿರುವುದು ನಾವು ಒಂದು ಸೈಟ್ ಮಾಡಿಕೊಂಡು ಸಾಲಾಗಿ ಮನೆಗಳನ್ನು ಕಟ್ಟಿಸಿಕೊಂಡು ಲೈಟು, ನಲ್ಲಿ ಹಾಕಿಸಿಕೊಂಡು ರಸ್ತೆಗಳನ್ನು ಮಾಡಿಸಿಕೊಂಡು ಸಮ್ಮದಿಯಾಗಿರೋಣ ಎಂದಿದ್ದೇವೆ ಅಂತ ಹೇಳುತ್ತಾರೆ. ಆದರೆ ಸರ್ಕಾರದವರು ಅಲ್ಲಿಗೆ ಹೋಗುವುದಿಲ್ಲ. ಚರಂಡಿ ಮಾಡುವುದಿಲ್ಲ. ರಸ್ತೆ ಮಾಡುವುದಿಲ್ಲ, ಲೈಟು ಕೊಡುವುದಿಲ್ಲ, ಹಾಗಾದರೆ ಅಲ್ಲಿ ಜನರು ಹೇಗೆ ವಾಸ ಮಾಡಬೇಕು ? ಎಷ್ಟು ವರ್ಷದವರೆಗೆ ಇದೇ ರೀತಿ ಇರಬೇಕು. ಅದಕ್ಕೂ ಒಂದು ಮಿತಿ ಬೇಡವೆ ? ನಮ್ಮ ರಾಜ್ಯದಲ್ಲಿ ಸುಮಾರು ೨೦೦-೮೦೦ ಕೊಳಚೆ ಪ್ರದೇಶಗಳಿವೆ. ನಮ್ಮ ದಾವಣಗೆರೆಯಲಿ ಸುಮಾರು ೨೨ ಕೊಳಚೆಪ್ರದೇಶಗಳಿವೆ. ಅಲ್ಲಿಗೆ ಸರ್ಕಾರದವರು ಯಾವುದೇ ಕೆಲಸವನ್ನೂ ಮಾಡಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ನಮ್ಮ ದಾವಣಗೆರೆ

ಯನ್ನೂ ಗಣನೆಗೆ ತೆಗೆದುಕೊಳ್ಳಬೇಕು. ನಮ್ಮ ದಾವಣಗೆರೆಯಲ್ಲಿ ರಾಜ್ಯದ ಮಧ್ಯಭಾಗದಲ್ಲಿ ಹೃದಯದಂತಿದೆ ಎಂದು ಎಲ್ಲರೂ ಹೇಳುತ್ತಾರೆ. ಆದರೂ ಅದನ್ನು ಏತಕ್ಕೆ ಮರೆತಿದ್ದೀರಿ ದಯವಿಟ್ಟು ಮೊದಲು ಆ ಕೊಳಚೆ ಪ್ರದೇಶದಲ್ಲಿರತಕ್ಕ ಜನರಿಗೆ ಬೇಕಾದ ಸೌವಲತ್ತುಗಳನ್ನು ಒದಗಿಸಿಕೊಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಗೃಹನಿರ್ಮಾಣ ಮಂಡಲಿ ಬಗ್ಗೆ ಒಂದು ಮಾತು ಹೇಳುವುದಾದರೆ, ನಮ್ಮ ದಾವಣಗೆರೆಯಲ್ಲಿ ಅನೇಕ ಕೈಗಾರಿಕೆಗಳಿದ್ದು, ವಿದ್ಯಾಭ್ಯಾಸದಲ್ಲಿ ಮುಂದುರಿಯುವತ್ತಿದೆ. ಅಲಿ ಕಾಲೇಜುಗಳಿವೆ. ಅಲ್ಲಿಗೆ ಬೇರಬೇರೆ ಕಡೆಗಳಿಂದ ಅಧಿಕಾರಿಗಳು ಬರುತ್ತಾರೆ. ಅಲ್ಲಿ ಸಣ್ಣಪುಟ್ಟ ಮನೆಗಳನ್ನಾಗಲಿ, ಅಥವಾ ಬಾಡಿಗೆಗೋಸ್ಕರ ಮನೆಗಳನ್ನಾಗಲಿ ಯಾರೂ ಕಟ್ಟುವುದಿಲ್ಲ. ಕಾರಣ ಸಿಮೆಂಟ್ ಅಭಾವ ಕೂಡ ಒಂದು. ಇದರಿಂದಾಗಿ ಅಲ್ಲಿ ಮನೆಗಳ ಕೊರತೆ ಬಹಳವಾಗಿದೆ. ಅಲ್ಲಿಗೆ ಬೇರೆ ಊರುಗಳಿಂದ ಯಾರನ್ನಾದರೂ ಅಧಿಕಾರಿಗಳನ್ನು ವರ್ಗಮಾಡಿದರೆ ಮನೆಗಳ ಅಭಾವದಿಂದಾಗಿ ಯಾರೂ ಅಲ್ಲಿಗೆ ಬರುವುದಕ್ಕೆ ಇಷ್ಟಪಡುತ್ತಿಲ್ಲ. ಕೆ. ಎಸ್, ಆರ್. ಟಿ, ಸಿ. ಯವರು ಅಲ್ಲಿ ಒಂದು ಡಿಪೋವನ್ನು ತೆರೆದಿದ್ದಾರೆ. ಅಲ್ಲಿಗೆ ಅವರ ನೌಕರರನ್ನು ವರ್ಗಮಾಡಿದರೆ ನಾವು ಹೋಗುವುದಿಲ್ಲವೆಂದು ಹೇಳುತ್ತಿದ್ದಾರೆ. ಇವತ್ತು ಸಾಮಾನ್ಯ ಮನಷ್ಯ ಒಂದು ಸಣ್ಣ ಮನೆ ಬಾಡಿಗೆಗೆ ಬೇಕೆಂದರೂ ಕನಿಷ್ಟ ೨೦೦–೩೦೦ ರೂ. ಗಳನ್ನಾದರೂ ಬಾಡಿಗೆ ಕೊಡಬೇಕಾಗುತ್ತದೆ ಹಿಂದೆ ಗೃಹನಿರ್ಮಾಣ ಮಂಡಲಿಯವರು ಸುಮಾರು ೮೦ ಎಕರೆ ಜಮೀನನ್ನು ವಶಪಡಿಸಿಕೊಂಡು ಅಲ್ಲಿ ಮನೆಗಳನ್ನು ಕಟ್ಟಬೇಕೆಂದು ಯೋಜನೆ ಹಾಕಿಕೊಂಡಿದ್ದರು. ಆದರೆ ಇವತ್ತು ಆ ಯೋಜನೆ ಏನಾಗಿದೆ ಎಂಬುದು ಗೊತ್ತಿಲ್ಲ ? ದಿನೇ ದಿನೇ ಕೈಗಾರಿಕೆಗಳು ಜಾಸ್ತಿಯಾಗಿ ಬೆಳೆಯುತ್ತಿವೆ ಒಳ್ಳೆಯ ವ್ಯಾಪಾರ ಕೇಂದ್ರ ವಲ್ಲದೆ ವಿದ್ಯಾಕ್ಷೇತ್ರದಲ್ಲೂ ನಮ್ಮ ದಾವಣಗೆರೆಯು ಬೆಳೆಯುತ್ತಿದೆ. ಕಳೆದ ೨ ವರ್ಷಗಳಲ್ಲಿ ಗೃಹನಿರ್ಮಾಣದ ಕೆಲಸ ಏನೇನೂ ಆಗಿಲ್ಲ. ಹುಡ್ಕೋ ಸ್ಕೀಂನಿಂದ ಮಾಡಬಹುದಿತ್ತು, ಆದರೆ ಏತಕ್ಕೆ ಮಾಡಲಿಲ್ಲ ?

ಇಲ್ಲಿ ಇನ್ನೊಂದು ಮಾತನ್ನು ಹೇಳುವುದಾದರೆ, ನಮ್ಮಲ್ಲಿ ಕೈಗಾರಿಕೆಗಳು ಬಹಳವಾಗಿ ಬೆಳೆಯುತ್ತಿರುವುದರಿಂದ ಯಾವ ಕಾರ್ಖಾನೆಗಳಲ್ಲಿ ೨೦೦ ಜನರಿಗಿಂತ ಹೆಚ್ಚಿಗೆ ಕಾರ್ಮಿಕರಿರುತ್ತಾರೆ ಅವರಿಗೆ ಆ ಕಾರ್ಖಾನೆಯವರೇ ಪ್ರತಿವರ್ಷ ೨೦-೩೦ ಮನೆಗಳನ್ನು ಕಟ್ಟಿಕೊಡುವಂತೆ ಕಡ್ಡಾಯ ಮಾಡಬೇಕು. ಮತ್ತು ಈ ಬಗ್ಗೆ ಹುಡ್ಕೋ ಸ್ಕೀಂನಿಂದ ಏನಾದರೂ ಸಹಾಯ ಬೇಕಾಗಿದ್ದರೆ ನಾವು ಮಾಡುತ್ತೇವೆಂದು ತಾವು ಹೇಳಬೇಕು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಆ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ವಾಸ ಇರುವುದು ಒಂದುಕಡೆಯಾದರೆ, ಕೆಲಸಮಾಡುವುದು ಇನ್ನೊಂದು ಕಡೆ. ಇವರು ವಾಸ ಮಾಡುವ ಸ್ಥಳದಿಂದ ಕೆಲಸಮಾಡುವ ಸ್ಥಳಕ್ಕೆ ಪ್ರತಿದಿನ ಹೋಗಿಬರುವುದಕ್ಕೇ ಬಹಳ ಹಣ ಖರ್ಚಾಗಿ ಹೋಗುತ್ತದೆ. ಇಂಥ ಪರಿಸ್ಥಿತಿ ಅಲ್ಲಿರುವುದರಿಂದ ಗೃಹನಿರ್ಮಾಣ ಮಂಡಲಿಯಿಂದ ದಾವಣಗೆರೆಗೆ ಹೆಚ್ಚಿನ ಆದ್ಯತೆ ಸಿಕ್ಕುವಂತೆ ಮಾಡಬೇಕು. ಕಾರ್ಮಿಕರಿಗೆ, ನೌಕರರಿಗೆ, ಬಡವರಿಗೆ, ಹುಡ್ಕೋ ಸ್ಕೀಂನಿಂದ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಸಿಕೊಡಬೇಕು.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರ ಏನೆಂದರೆ ಹಿಂದೆ ಹೌಸಿಂಗ್ ಬೋರ್ಡ್‌ನವರು ಮನೆಗಳನ್ನು ಕಟ್ಟಿ ಬಾಡಿಗೆಗಾಗಿ ಕೊಟ್ಟಿದ್ದರು. ಈಗ ಆ ಮನೆಗಳಲ್ಲಿ ಯಾರ್‍ಯಾರು ವಾಸಮಾಡುತ್ತಿದ್ದಾರೆ ಅವರವರಿಗೆ ಆ ಮನೆಗಳನ್ನು ಅಲಾಟ್‌ಮಾಡಬೇಕೆಂದು ಆದೇಶವನ್ನು ಹೊರಡಿಸಿದ್ದೀರಿ. ಆದರ ಪ್ರಕಾರ ಕೆಲವರಿಗೆ ಆ ಮನೆಗಳನ್ನು ಕೊಟ್ಟಿದ್ದಾರೆ. ಇನ್ನು ಕೆಲವರಿಗೆ ಕೊಟ್ಟಿಲ್ಲ. ಇದರಲ್ಲಿ ಏನಾದರೂ ಸಣ್ಣ ಪುಟ್ಟ ತೊಡಕುಗಳಿದ್ದರೆ ಅವುಗಳನ್ನು ನಿವಾರಿಸಿ ಆ ಮನೆಗಳನ್ನು ಅವರವರಿಗೇ ಕೊಡಬೇಕು. ಈಗ ಅಲ್ಲಿದ್ದ ಈ ಆಫೀಸನ್ನು ತೆಗೆದಿದ್ದೀರಿ. ನಮ್ಮ ನಗರಸಭೆಯ ಜನಸಂಖ್ಯೆ ಹಿಂದೆ ಸುಮಾರು ೨೨ ಸಾವಿರ ಇದ್ದದ್ದು ಇವತ್ತು ಎರಡೂವರೆ ಲಕ್ಷ ಆಗಿದೆ. ಆದರೆ ಅದಕ್ಕನುಗುಣವಾಗಿ ಸಿಬ್ಬಂದಿ ಇರಬೇಕು. ಅಲ್ಲಿ ಕೆಲವರನ್ನು ದಿನಗೂಲಿಯಮೇಲೆ ನೇಮಕ ಮಾಡಿಕೊಂಡಿದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿಯಮೇಲೆ ಕೆಲಸಮಾಡುವವರಿಗೆ ದಿವಸಕ್ಕೆ ೯.೪೦ ರೂ. ಗಳನ್ನು ಕೊಡುತ್ತಿರುವಂತೆಯೇ ಇವರಿಗೂ ಕೂಲಿಯನ್ನು ಕೊಡಬೇಕೆಂದು ಆದೇಶ ನೀಡಬೇಕು. ಏಕೆಂದರೆ, ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ೯.೪೦ ರೂ. ಕೂಲಿ ಕೊಡಬೇಕೆಂದು ಈ ಹಿಂದೆಯೇ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಅದೇರೀತಿ ಇವರಿಗೂ ಕೊಟ್ಟರೆ ಇವರು ಉತ್ತಮ ಜೀವನ ನಡೆಸುವುದಕ್ಕೆ ಅನುಕೂಲವಾಗುತ್ತದೆ. ಕೇವಲ ೪–೫ ರೂ. ಕೂಲಿ ಕೊಡುವುದಾದರೆ ಇಂಥ ದುಭಾರಿ

ಕಾಲದಲ್ಲಿ ಜೀವನ ಮಾಡುವುದಾದರೂ ಹೇಗೆ ? ನಿಜವಾಗಿಯೂ ಕಷ್ಟಪಟ್ಟು ಕೆಲಸ ಮಾಡುವವರೆಂದರೆ ದಿನಗೂಲಿಯಮೇಲೆ ಕೆಲಸಮಾಡುವವರು.

ಇನ್ನೊಂದು ವಿಚಾರ ಏನೆಂದರೆ ಎನ್. ಆರ್. ಗ್ಯಾಂಗ್‌ನಲ್ಲಿ, ಪಾರ್ಕ್‌ಗಳಲ್ಲಿ ಕೆಲಸಮಾಡುತ್ತಿರುವವರು ಸುಮಾರು ೧೦–೧೫ ವರ್ಷಕಾಲ ಸೇವೆ ಸಲ್ಲಿಸಿರುತ್ತಾರೆ. ಅಂಥವರನ್ನು ಖಾಯಂ ಮಾಡಿದರೆ ಸ್ವಲ್ಪ ಹೆಚ್ಚಿನ ಸಂಬಳ ಬರುತ್ತದೆ. ಅದರಿಂದ ಇವರು ಉತ್ತಮ ಜೀವನ ಮಾಡುವುದಕ್ಕೂ ಅನುಕೂಲವಾಗುತ್ತದೆ, ಆದ್ದರಿಂದ ದಯವಿಟ್ಟು ಇವರನ್ನು ಖಾಯಂ ಮಾಡಬೇಕು. ಮತ್ತು ದಿನಗೂಲಿಯ ಮೇಲೆ ಕೆಲಸಮಾಡುವವರಿಗೆ ಸರ್ಕಾರ ನಿಗದಿಮಾಡಿರುವಂಥ ಕನಿಷ್ಟ ಕೂಲಿಯನ್ನು ಕೊಡುವಂತೆ ಆದೇಶ ನೀಡಬೇಕು. ಅದುಬಿಟ್ಟು ಫೈಲನ್ನು ಈ ಕಡೆಯಿಂದ ಆ ಕಡೆಗೆ, ಆ ಕಡೆಯಿಂದ, ಈಕಡೆಗೆ ಓಡಾಡಿಸುತ್ತಾ ಹೋಗುವುದಾದರೆ ಇನ್ನು ಆರು ತಿಂಗಳಾದರೂ ಆಗುವುದಿಲ್ಲ. ನಿಮ್ಮ ಅಧಿಕಾರಿಗಳಿಗೆ ಇದರ ಬಗ್ಗೆ ಯೋಚನೆಯೇ ಇಲ್ಲ. ಆದ್ದರಿಂದ ತಾವಾದರೂ ಇದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ನಮ್ಮ ನಗರಾಭಿವೃದ್ಧಿ ಮಂಡಲಿಯಲ್ಲಿ ಅಧ್ಯಕ್ಷರೇ ಇಲ್ಲ. ಅಲ್ಲಿಗೆ ಯಾರನ್ನಾದರೂ ನೇಮಕ ಮಾಡಬೇಕು. ತಾವು ಹಾಕಿಕೊಂಡಿರುವ ಯೋಜನೆ ಬಹಳ ಉತ್ತಮವಾದುದು. ಆದರೆ ಎಲ್ಲಾ ಅಭಿವೃದ್ಧಿ ಆಗಿಲ್ಲ. ಏನೋ ಸ್ವಲ್ಪ ಜಮೀನನ್ನು ವಶಪಡಿಸಿಕೊಂಡು ಸೈಟು ವಿಂಗಡಿಸಿ ರಸ್ತೆ ಮಾಡಿದರು ಅಷ್ಟೆ. ಅಲ್ಲಿಗೆ ನೀರಿನ ಸೌಲಭ್ಯ, ದೀಪದ ಸೌಲಭ್ಯ ಒಳಚರಂಡಿ ವ್ಯವಸೆ ಯಾವುದನ್ನೂ ಕೊಟ್ಟಿಲ್ಲದ ಕಾರಣ ಯಾರೂ ಅಲ್ಲಿ ಹೋಗಿ ವಾಸಮಾಡುವುದಕ್ಕೆ ಇಷ್ಟಪಡುವುದಿಲ್ಲ. ತಮ್ಮದೇ ಆದಂಥ ಒಂದು ಮನೆಯನ್ನು ಕಟ್ಟಿಕೊಳ್ಳಬೇಕೆಂದು ಎಲ್ಲರಿಗೂ ಆಸೆ ಇರುತ್ತದೆ. ಆದರೆ ಅದಕ್ಕೆ ತಕ್ಕಂತೆ ಸೌಲಭ್ಯಗಳನ್ನು ಅಲ್ಲಿ ಒದಗಿಸಿರುವುದಿಲ್ಲ. ನಮ್ಮ ನಗರಾಭಿವೃದ್ಧಿ ಮಂಡಲಿಯಲ್ಲಿ ಅಧ್ಯಕ್ಷರು ಇದ್ದಿದ್ದರೆ ಇದನ್ನೆಲ್ಲಾ ಒದಗಿಸುತ್ತಿದ್ದರು. ಇವತ್ತು ನಮ್ಮ ದಾವಣಗೆರೆ ಬಹಳ ದೊಡ್ಡದಾಗಿ ಬೆಳೆದಿದ್ದು ಜನರು ವಾಸಮಾಡಲು ಕಿಷ್ಕಿಂಧವಾಗಿದೆ. ಆದ್ದರಿಂದ ನಗರದ ಹೊರಭಾಗಕ್ಕೆ ಹೋಗಿ ಮನೆ ಕಟ್ಟಿಕೊಳ್ಳಲು ಅನುಕೂಲವಾಗುವಂತೆ ಟೌನ್ ಪ್ಲಾನಿಂಗ್‌ನವರು ಮತ್ತು ನಗರಾಭಿವೃದ್ಧಿ ಮಂಡಲಿಯವರು ಚೆನ್ನಾಗಿ ಕೆಲಸಮಾಡುವಂತೆ ವ್ಯವಸ್ಥೆ ಮಾಡಬೇಕು. ಈಗ ಕೊಟ್ಟಿರತಕ್ಕ ಸಣ್ಣ ಸಣ್ಣ ಸೈಟುಗಳಲ್ಲಿ ಶಾಲೆಗಳನ್ನು ಕಟ್ಟುವುದಕ್ಕಾಗುವುದಿಲ್ಲ, ಪಾರ್ಕ್‌ಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಯಾರಾದರೂ ಒಬ್ಬ ೫೦ ಸಾವಿರ ರೂ. ಕೊಟ್ಟು ಒಂದು ಜಮೀನು ತೆಗೆದುಕೊಂಡರೆ ಅದೇ ಜಮೀನನ್ನೇ ೫೦ ಸಾವಿರ ರೂ. ಲಾಭಕ್ಕೆ ಮಾರಾಟ ಮಾಡುವ ವ್ಯವಸ್ಥೆ ಇದೆ. ಅಲ್ಲಿ ಬಡವರ ಸುಲಿಗೆಯಾಗುತ್ತಿದೆ. ಇದೆಲ್ಲಾ ಹೋಗಿ ಸಾರ್ವಜನಿಕರಿಗೆ ಅನುಕೂಲವಾಗುವಂಥ ವ್ಯವಸ್ಥೆ ಆಗಬೇಕು.

೫–೦೦ ಪಿ. ಎಂ.

ಈವತ್ತಿನ ಪರಿಸ್ಥಿತಿಯನ್ನು ನಾವು ನೋಡಿದಾಗ ನಮಗೆ ಒಂದು ರೀತಿಯಾದ ಗಾಬರಿ ಉಂಟಾಗುತ್ತದೆ. ಬೇರೆಬೇರೆ ನಗರಗಳನ್ನು ನಾವು ನೋಡಿದಾಗ ಎಲ್ಲ ನಗರಗಳು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಬೆಳೆದುಕೊಂಡು ಹೋಗುತ್ತಿದ್ದರೆ ನಮ್ಮ ದಾವಣಗೆರೆ ನಗರ ಹಾಳಾಗುತ್ತಾ ಹೋಗುತ್ತಿದೆ. ಇದನ್ನು ನೋಡಿದರೆ ನಮಗೆ ಬಹಳ ದುಃಖವಾಗುತ್ತದೆ. ಮಾನ್ಯ ಸಚಿವರು ಒಮ್ಮೆ ದಾವಣಗೆರೆ ನಗರಕ್ಕೆ ಭೇಟಿಕೊಟ್ಟರೆ ಎಲ್ಲ ವಿಷಯಗಳನ್ನು ಮೊಕ್ತ ತೋರಿಸುತ್ತೇನೆ. ಅಲ್ಲಿನ ಪರಿಸ್ಥಿತಿ ಯಾವ ರೀತಿ ಇದೆ, ಹಣ ಸಂಪಾದನೆ ಮಾಡತಕ್ಕ ಜನರಿಗೆ ಮುಂದೆ ಯಾವರೀತಿ ತೊಂದರೆಯಾಗಬಹುದು ಎಂಬುದನ್ನೆಲ್ಲ ವಿವರವಾಗಿ ನೋಡಿ ನಾವು ಹೇಳುವುದು ಸರಿ ಇದೆ ಎಂದು ತಾವೇ ಒಪ್ಪಿಕೊಂಡು ಎಲ್ಲ ಯೋಜನೆಗಳನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರೆಂದು ನಂಬಿರುತ್ತೇವೆ. ಈವತ್ತಿನದಿವಸ ದಾವಣಗೆರೆ ನೀರು ಸರಬರಾಜು ಯೋಜನೆಯಲ್ಲಿ ಕೆಲಸ ಮಾಡತಕ್ಕಂಥವರು ದಿನಗೂಲಿಯಲ್ಲಿ ಕೆಲಸ ಮಾಡುತ್ತಿರುತ್ತಾರೆ. ಅವರನ್ನು ಖಾಯಂ ಮಾಡುವುದಕ್ಕೂ ಮತ್ತು ಅವರಿಗೆ ಇನ್ನೂ ಹೆಚ್ಚಿನ ಕೂಲಿಯನ್ನು ಒದಗಿಸುವುದಕ್ಕೂ ತಾವು ಆದೇಶವನ್ನು ಕೂಡಲೇ ಹೊರಡಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮನ್ನು ಕೇಳಿಕೊಂಡು ಈವತ್ತಿನ ದಿವಸ ಈ ಒಂದು ಬೇಡಿಕೆಯಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಮೂಳಗಿ (ಬ್ಯಾಡಗಿ). — ಸನ್ಮಾನ್ಯ ಅಧ್ಯಕ್ಷರೇ, ನಗರಸಭಾ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ನಗರಸಭೆಗಳಿಗೆ ಈ ರಾಜ್ಯದಲ್ಲಿ ಈಗಿರತಕ್ಕಂಥ ಪ್ರಗತಿಪರವಾದ ಕೆಲಸಗಳನ್ನು ಹೇಳುತ್ತಾ ಇನ್ನೂ ಕೆಲವು ಅನುಕೂಲತೆಗಳನ್ನು ಕೊಡಬೇಕಾಗಿದೆ ಎಂದು ಸಲಹೆ ಮಾಡುತ್ತಾ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ನಗರಸಭೆಗಳಿಗೆ ಸದಸ್ಯನಾಗಿ ಆಡಳಿತಾಧಿಕಾರಿಯಾಗಿ ನಗರಸಭೆಗಳಲ್ಲಿ ಕುಳಿತು ಕೆಲಸ ಮಾಡಲಿಕ್ಕೆ ಈಗ ಅವಕಾಶವಿದೆ ಎನ್ನುವ ಮಾತನ್ನು ಬಹಳ ಸಂತೋಷದಿಂದ ಹೇಳಬೇಕಾಗಿದೆ. ಒಳ್ಳೆಯ ಅವಕಾಶವಿದೆ, ಒಳ್ಳೆಯ ಅನುಕೂಲತೆ ಇದೆ, ಸರ್ಕಾರದವರು ನೆರವು ಕೊಡುತ್ತಾ ಇದ್ದಾರೆ. ಸರ್ಕಾರ ಕೊಡತಕ್ಕಂಥ ಸಹಾಯ ಅನೇಕ ನಗರಸಭೆಗಳಲ್ಲಿ ಸರಿಯಾದ ರೀತಿಯಲ್ಲಿ ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲವೆಂದು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಕಳೆದ ೨೫–೩೦ ವರ್ಷಗಳಿಂದ ಈವತ್ತಿನವರೆಗೂ ಅನೇಕ ನಗರಸಭೆಗಳಲ್ಲಿ ಸದಸ್ಯನಾಗಿ ಕೆಲಸ ಮಾಡುತ್ತಾ ಬಂದಿದ್ದೇನೆ. ಕೆಲವು ಕಾಲದಲ್ಲಿ ನಗರಸಭೆಗಳಲ್ಲಿ ಏನಾದರೂ ಒಳ್ಳೆಯ ರಸ್ತೆಯನ್ನು ಮಾಡಬೇಕು, ಚರಂಡಿಗಳನ್ನು ಮಾಡಬೇಕು, ಊರನ್ನು ಸ್ವಚ್ಛವಾಗಿಡಬೇಕು, ನಿರ್ಮಲವಾಗಿ ಇರಬೇಕು ಎಂದರೆ ಹಣಕಾಸಿನ ವ್ಯವಸ್ಥೆ ಇರಲಿಲ್ಲ. ಈವತ್ತು ನಗರಸಭೆಗಳಲ್ಲಿ ಆಕ್ಟ್ರಾಯ್ ಹೋದಮೇಲೆ ಇನ್ನೂ ಸ್ವಲ್ಪ ಅನುಕೂಲವಾಗಿದೆ, ಆಕ್ಟ್ರಾಯ್ ಇರುವಾಗ ಅರ್ಧದಷ್ಟು ಭಾಗ ಅಪವ್ಯಯವಾಗುತ್ತಿತ್ತು. ಆಕ್ಟ್ರಾಯ್‌ನಿಂದ ಬರುತ್ತಿದ್ದ ಆದಾಯ ನಡುವೆ ಯಾರು ಯಾರಿಗೋ ಮಧ್ಯದಲ್ಲಿಯೇ ಹಂಚಿಹೋಗುತ್ತಿತ್ತು. ನಗರಸಭೆಗಳಿಗೆ ಎಷ್ಟು ಆದಾಯ ಬರಬೇಕಿತ್ತೋ ಅಷ್ಟು ಆದಾಯ ಬರುತ್ತಿಲ್ಲ. ಇದು ಹೋದಮೇಲೆ ಆಕ್ಟ್ರಾಯ್‌ನಿಂದ ಬರತಕ್ಕಂಥ ಆದಾಯದ ಆಧಾರದ ಮೇಲೆ ನಮ್ಮ ರಾಜ್ಯ ಸರ್ಕಾರದವರು ಗ್ರಾಂಟ್ ರೂಪದಲ್ಲಿ ಹಣವನ್ನು ಕೊಡುತ್ತಾ ಇದ್ದಾರೆ. ಈ ಹಣದಿಂದ ರಸ್ತೆಗಳನ್ನು ಘಟಾರಗಳನ್ನು ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಲಿಕ್ಕೆ ಹೆಚ್ಚಿನ ಅವಕಾಶವಿದೆ. ನಗರಮಂಡಲಿ, ಗೃಹನಿರ್ಮಾಣ ಮಂಡಲಿಗಳು ಟೌನ್ ಏರಿಯಾದಲ್ಲಿ ಮನೆಗಳನ್ನು ಕಟ್ಟಿಸಿ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದಾರೆ. ಅನೇಕ ನಗರಸಭೆಗಳಲ್ಲಿ ಲೋ ಇನ್‌ಕಮ್ ಹೌಸಸ್ ಎಂದು ಹೇಳಿ ಕಡಿಮೆ ಕಿಮ್ಮತ್ತಿನಲ್ಲಿ ಮನೆಗಳನ್ನು ಕಟ್ಟಿ ಬಡವರಿಗೆ ಕೊಡುತ್ತಿದ್ದಾರೆ. ಇದು ಅತ್ಯುತ್ತಮವಾದ ರೀತಿಯಲ್ಲಿ ಕಟ್ಟಲಿಕ್ಕೆ ಸಾಧ್ಯತೆ ಇದೆ. ಈವತ್ತಿನ ಮಟ್ಟಿಗೆ ಹೇಳುವುದಾದರೆ ಮೆಟೀರಿಯಲ್ಸ್ ಕಾಸ್ಟ್ ಹೆಚ್ಚಿನ ಪ್ರಮಾಣದ್ದಾದುದರಿಂದ ಮಾನ್ಯ ಸಚಿವರು ಪಿ.ಡಬ್ಲ್ಯೂ.ಡಿ. ಷೆಡ್ಯೂಲ್ ರೇಟ್ ಪ್ರಕಾರ ಹೆಚ್ಚಿನ ಹಣವನ್ನು ಕೊಡಬೇಕು. ಅದನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ.

ಇನ್ನು ನಗರ ಬಡಾವಣೆ ಮಾಡುವಾಗ ಬೇರೆ ಸೈಟ್‌ಗಳನ್ನು ಅಕ್ವಯರ್ ಮಾಡಿ ಜನರಿಗೆ ಸೈಟ್‌ಗಳನ್ನು ಕೊಡುವಾಗ ಕಾರ್ನರ್ ಸೈಟುಗಳನ್ನು ಅಲಾಟ್ ಮುಖಾಂತರ ಹೆಚ್ಚು ಹಣಕ್ಕೆ ಮಾಡಿ ಮಿಕ್ಕ ಸೈಟುಗಳನ್ನು ಕಡಿಮೆ ಕಿಮ್ಮತ್ತಿಗೆ ಕೊಡಬೇಕು ಎನ್ನುವ ಯೋಚನೆ ಏನು ಇದೆ ಇದು ಅತ್ಯುತ್ತಮವಾದ ಯೋಚನೆ. ನಮ್ಮ ಗ್ರಾಮ ಬ್ಯಾಡಗಿಯ ನಗರಸಭೆಯಲ್ಲಿ ಅಕ್ವಯರ್ ಮಾಡಿದಂಥ ಲ್ಯಾಂಡ್‌ನಲ್ಲಿ ಕಾರ್ನರ್ ಸೈಟುಗಳನ್ನು ಅಲಾಟ್ ಮಾಡಿದಾಗ ನಾವು ಜಮೀನಿಗೆ ಎಷ್ಟು ಹಣವನ್ನು ಕೊಟ್ಟಿದ್ದೆವೋ ನಾವು ಎಷ್ಟು ಹಣವನ್ನು ಖರ್ಚು ಮಾಡಿದ್ದೆವೋ ಅದರ ನಾಲ್ಕರಷ್ಟು ಹಣ ಬಂದಿತು. ಉಳಿದ ಜಮೀನನ್ನು ೨೫ ರೂಪಾಯಿಯಿಂದ ೫೦ ರೂಪಾಯಿನವರೆಗೂ ಸೈಟ್‌ಗಳನ್ನು ಬಡವರಿಗೆ ಹಂಚಿದೆವು. ಕಿಮ್ಮತ್ತು ಇಲ್ಲದೆ ಫುಕ್ಕಟೆ ಕೊಟ್ಟರೆ ಜವಾಬ್ದಾರಿಯಿಂದ ನೋಡಿಕೊಳ್ಳುವುದಿಲ್ಲವೆಂದು ನಗರಸಭೆ ಒಂದು ಬೆಲೆಯನ್ನು ನಿಗದಿಮಾಡಿ ೨೫–೫೦ ರೂಪಾಯಿಗಳಿಗೆ ಸೈಟುಗಳನ್ನು ಹಂಚಿದ್ದೇವೆ. ಈ ಕಡಿಮೆ ಕಿಮ್ಮತ್ತಿನಲ್ಲಿ ಕೊಟ್ಟಿರತಕ್ಕಂಥ ಸೈಟುಗಳಲ್ಲಿ ಅತ್ಯುತ್ತಮವಾದ ಮನೆಗಳನ್ನು ಕಟ್ಟಿದ್ದಾರೆ, ಈವತ್ತು ಮನೆಗಳನ್ನು ಯಾರು ನೋಡಿದರೂ ಮೆಚ್ಚತಕ್ಕಂಥ ಮನೆಗಳನ್ನು ಕಟ್ಟಿದ್ದಾರೆ. ಇಂಥ ಒಂದು ಕೆಲಸ ಮಾಡಲಿಕ್ಕೆ ನಗರಸಭೆಗಳು ಇದೆ. ಇಲ್ಲವೆಂದು ಹೇಳಲಿಕ್ಕೆ ಆಗುವುದಿಲ್ಲ. ಇಂಥ ನಗರ ಸಭೆಗಳಲ್ಲಿ ಕುಳಿತು ಕೆಲಸ ಮಾಡುವಾಗ ನಾವು ಜನರಿಗೆ ಸೈಟುಗಳನ್ನು ಕೊಡಬೇಕು, ರಸ್ತೆಗಳನ್ನು ಉತ್ತಮವಾಗಿ ಮಾಡಬೇಕು, ಘಟಾರಗಳನ್ನು ಮಾಡಬೇಕು, ನಗರದ ಆರೋಗ್ಯವನ್ನು ಕಾಪಾಡಬೇಕು, ನಿರ್ಮಲವಾಗಿ ಇಟ್ಟುಕೊಳ್ಳತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಬರತಕ್ಕಂಥದ್ದು ನಗರಸಭೆಗಳ ಕರ್ತವ್ಯವಾಗಿರುತ್ತದೆ. ಮಾನ್ಯ ಅಧ್ಯಕ್ಷರೇ ಈವತ್ತಿನ ದಿವಸ ಅನೇಕ ನಗರಸಭೆಗಳನ್ನು ನೋಡಿದ್ದೇವೆ. ಆಡಳಿತಾಧಿಕಾರಿಗಳು ನಡೆಸುತ್ತಿರತಕ್ಕಂಥ ನಗರಸಭೆಗಳನ್ನೂ ನೋಡಿದ್ದೇವೆ. ಈವತ್ತಿನ ದಿವಸ ಜನತೆಯಿಂದ ಚುನಾಯಿತರಾಗಿ ಬಂದಂತ ಸದಸ್ಯರು ಕೆಲಸ ಮಾಡುತ್ತಿರುವ ನಗರಸಭೆಗಳಲ್ಲಿ ಬಹುತೇಕ ನಗರಸಭೆಗಳು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಮಾತನ್ನು ವಿಷಾದದಿಂದ ಹೇಳಬೇಕಾಗಿದೆ. ಏತಕ್ಕೆ ಈ

ಮಾತನ್ನು ಹೇಳುತ್ತಿದ್ದೇನೆಂದರೆ ನಮ್ಮನ್ನು ಕೇಳುವ ದಾತರೆ ಇಲ್ಲ. ನಗರಸಭೆಗಳಲ್ಲಿರತಕ್ಕಂಥ ಚೀಫ್ ಆಫೀಸರ್ ನಮ್ಮನ್ನು ಕೇಳುವುದೇ ಇಲ್ಲ. ಅವರನ್ನು ನಾವು ನೋಡಲಿಕ್ಕು ಸಿಕ್ಕುವುದಿಲ್ಲ. ಅವರಿಗೆ ಎಷ್ಟೋ ಕೆಲಸಗಳು, ನೂರಾರು ಕೆಲಸಗಳು. ಒಂದೊಂದು ದಿವಸ ಒಂದೊಂದು ಮೀಟಿಂಗ್, ಒಂದೊಂದು ಕಾರ್ಯಕ್ರಮ ಇವೆಲ್ಲ ಕಾರ್ಯಕ್ರಮಗಳು ಹೆಚ್ಚು ಇರುವುದರಿಂದ ಒಂದೊಂದು ಗ್ರೇಡ್ ಮಾಡಿ ಒಬ್ಬೊಬ್ಬರಿಗೆ ವಹಿಸಿಕೊಟ್ಟರೆ ನಗರಸಭೆಗಳು ಆಡಳಿತ ನಡೆಸಲಿಕ್ಕೆ ಅನುಕೂಲವಾಗುತ್ತದೆ. ಈ ನಗರಸಭೆಯ ಆಡಳಿತವನ್ನು ನೋಡಲಿಕ್ಕೆ ಒಬ್ಬ ಸಿರಸ್ತೆದಾರ್‌ರವರ ಗ್ರೇಡ್‌ವರೆಗೆ ಕೊಟ್ಟಿದ್ದಾರೆ. ಇದು ಎಲ್ಲ ಜಿಲ್ಲೆಯಲ್ಲಿರತಕ್ಕಂಥ ವ್ಯವಸ್ಥೆಯಾಗಿದೆ. ನಗರಸಭೆಗಳಿಗೆ ಪ್ರತ್ಯೇಕವಾದ ಆಡಳಿತ ವ್ಯವಸ್ಥೆಯಿಲ್ಲ. ಅದಕ್ಕಾಗಿ ನಾನಾದರೂ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಇದಕ್ಕೆ ಒಂದು ಪ್ರತ್ಯೇಕವಾದ ಡೈರೆಕ್ಟರೇಟ್ ನಿರ್ಮಾಣ ಮಾಡಬೇಕು. ಇದು ಆದರೆ ಮಾತ್ರ ನಗರಸಭೆಗಳಲ್ಲಿ ಉತ್ತಮವಾದ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಎಲ್ಲ ನಗರಸಭೆಗಳಲ್ಲಿ ಉತ್ತಮ ಕೆಲಸವಾದರೆ ನಗರಗಳಲ್ಲಿ ವಾಸಮಾಡ ತಕ್ಕಂಥ ಜನರಿಗೆ ಆರೋಗ್ಯ ನೆಮ್ಮದಿಯಾಗಿ ಇರುತ್ತದೆ. ಸರ್ಕಾರದಿಂದ ಬರತಕ್ಕಂಥ ಹಣ ಒಳ್ಳೆಯರೀತಿ ಉಪಯೋಗವಾಗುತ್ತದೆ. ಎಲ್ಲ ಇಲಾಖೆಗಳಿಗೆ ಪ್ರತ್ಯೇಕವಾದ ಡೈರೆಕ್ಟರೇಟ್ ಇರುತ್ತದೆ. ನಗರಸಭೆಗಳಿಗೆ ಪ್ರತ್ಯೇಕವಾದ ವ್ಯವಸ್ಥೆ ಇಲ್ಲ. ಆದ್ದರಿಂದ ಇದಕ್ಕೆ ಒಂದು ಪ್ರತ್ಯೇವಾದ ಡೈರೆಕ್ಟರೇಟ್ ಮಾಡಿದರೆ ನಗರ ಗಳಲ್ಲಿ ವಾಸಮಾಡತಕ್ಕಂಥ ಜನರಿಗೆ ಅನುಕೂಲ ಮಾಡಿಕೊಡಬೇಕೆಂಬ ಗುರಿ ಏನು ಇದೆ ಅದನ್ನು ಮಾಡಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಮಾನ್ಯ ಸಚಿವರು ಮತ್ತು ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಮಾನ್ಯ ಬಸವಲಿಂಗಪ್ಪ ನವರು ನಗರಾಡಳಿತ ಸಚಿವರಾಗಿದ್ದಾಗ ಒಂದು ಮಾತನ್ನು ಹೇಳಿದ್ದಾರೆ ಪ್ರತ್ಯೇಕವಾದ ಒಂದು ಡೈರೆಕ್ಟರೇಟ್ ಮಾಡುತ್ತೇವೆಂದು ಹೇಳುತ್ತಿದ್ದರು. ನಮ್ಮ ಸರ್ಕಾರಕ್ಕೆ ಮೆಚ್ಚಿಗೆ ಇದೆ. ಜನರಲ್ಲಿ ಒಳ್ಳೆಯ ಅಭಿಪ್ರಾಯವಿದೆ ಸರ್ಕಾರವನ್ನು ಸ್ವಾಗತ ಮಾಡುತ್ತಿದ್ದಾರೆ. ನಗರಸಭೆಗಳಿಗೆ ಪ್ರತ್ಯೇಕವಾದ ನಿರ್ದೇಶನಾಲಯವನ್ನು ಮಾಡಬೇಕು. ಕೆಲವು ನಗರಸಭೆಗಳಲ್ಲಿಯೂ ಲೂಟಿ ಹೊಡೆಯುತ್ತಿದ್ದಾರೆ, ಲೂಟಿ ಹೊಡೆಯದ ಹಾಗೆ ನಿರ್ದೇಶನಾಲಯವನ್ನು ಮಾಡಿ ಒಳ್ಳೆಯ ಅವಕಾಶವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ನಗರ ಸಭೆಗಳಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಇರತಕ್ಕ ತೊಂದರೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬೆಳಗಾಂ, ಬಿಜಾಪುರ, ಧಾರವಾಡ ಕೆಲವು ಕಡೆಗಳಲ್ಲಿ ನಗರ ಸಭೆಗಳಲ್ಲಿ ನೌಕರರುಗಳನ್ನು ನೇಮಿಸುವಾಗ ಫುಲ್‌ಟೈಮ್ ನೌಕರರು ಪಾರ್ಟ್‌ಟೈಂ ನೌಕರರು ಎಂದು ನೇಮಕ ಮಾಡುವ ವ್ಯವಸ್ಥೆ ಇತ್ತು. ಕರ್ನಾಟಕ ಏಕೀಕರಣವಾದ ಮೇಲೆ ಕರ್ನಾಟಕ ಮುನಿಸಿಫಲ್ ಮ್ಯಾನ್ಯುಯಲ್ ಪ್ರಕಾರ ಪಾರ್ಟ್ ಟೈಂ ನೌಕರರೆಂದು ನೇಮಕ ಮಾಡಿಕೊಂಡು ಅವರಿಗೆ ತಿಂಗಳೊಂದಕ್ಕೆ ೩೦ ರೂಪಾಯಿ, ೧೦೦ ರೂಪಾಯಿ ೧೫೦ ರೂಪಾಯಿ ಕೊಡತಕ್ಕಂತಹ ವ್ಯವಸ್ಥೆ ಇದೆ. ನಾನು ಮೊನ್ನೆ ತೋರಿಸಿದ್ದೇನೆ ಅದಕ್ಕಿಂತ ಹೆಚ್ಚಾಗಿ ಯಾರು ಕೊಳುವುದಿಲ್ಲ. ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿಸಿಕೊಂಡು ನೇಮಕ ಮಾಡಿಕೊಳುವುದಿಲ್ಲ. ದಿನಕೂಲಿಯ ಮೇಲೆ ನೇಮಕ ಮಾಡಿಕೊಳ್ಳುತ್ತಾರೆ. ಅವರನ್ನು ಪಾರ್ಟ್‌ಟೈಂ ನೌಕರರು, ಫುಲ್‌ಟೈಂ ನೌಕರರು ಎಂದು ಪರಿಗಣಿಸಬೇಕಾಗಿದೆ. ಇದರ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಒಂದು ಸುತ್ತೋಲೆ ಯನ್ನು ಇಸ್ಯು ಮಾಡಿದರು. ಅದು ಎಲ್ಲಾ ನಗರಸಭೆಗಳಿಗೂ ಬಂತು, ಬಹಳ ನಗರಸಭೆಗಳು ಅದನ್ನು ಅನುಸರಿಸಲಿಲ್ಲ. ಕೆಲವು ನಗರಸಭೆಗಳು ಅನುಸರಿಸಿಕೊಂಡಿವೆ. ನಗರಸಭೆಗಳಲ್ಲಿ ಕೆಲಸ ಮಾಡತಕ್ಕವರು ೨೦-೨೫ ವರ್ಷಗಳಿಂದ ಕೆಲಸ ಮಾಡಿದ್ದಾರೆ. ೨೦ ವರ್ಷ ಕೆಲಸ ಮಾಡಿದರೂ ಅವರನ್ನು ಫುಲ್‌ಟೈಂ ನೌಕರರೆಂದೂ ಮಾಡಿಕೊಳ್ಳುವಾಗ ೫ ವರ್ಷ ಮಾತ್ರ ಸರ್ವೀಸ್ ತೆಗೆದುಕೊಳ್ಳುತ್ತಾರೆ. ಅವರಿಗೆ ಇನ್ನು ೫ ವರ್ಷ ಮಾತ್ರ ಸರ್ವೀಸ್ ಇರುತ್ತದೆ. ಆಗ ಪೆನ್‌ಷನ್ ಕೊಡಲಿಕ್ಕೆ ಸರ್ವೀಸ್ ಕಡಿಮೆಯಾಗುತ್ತದೆ. ಪೆನ್‌ಷನ್ ಕೊಡಬೇಕಾದರೆ ಕನಿಷ್ಠಪಕ್ಷ ೧೦ ವರ್ಷಗಳಾದರೂ ಸರ್ವೀಸ್ ಮಾಡಿರಬೇಕು. ನಗರಸಭೆ ಗಳಲ್ಲಿ ಕಸ ಗುಡಿಸಿ, ಕೊಳಚೆ ತೆಗೆದು ಬಹಳ ಕಷ್ಟಕರವಾದ ಕೆಲಸ ಮಾಡಿರುತ್ತಾರೆ. ಎಲ್ಲಾ ಜನರ ಸೇವೆ ಮಾಡಿರುತ್ತಾರೆ. ಇಂತಹ ಜನರಿಗೆ ಈ ಮನೆಯಲ್ಲಿ ಹರಿಜನ ಗಿರಿಜನರ ಬಗ್ಗೆ ಬಹಳ ಹೇಳುತ್ತೇವೆ. ಇವರಿಗೆ ಇರತಕ್ಕ ತೊಂದರೆ ಏನಿದೆ ಅದನ್ನು ನಿವಾರಣೆ ಮಾಡುವುದಕ್ಕೆ ೧೦ ವರ್ಷ ಸರ್ವೀಸ್ ಇರಲೇ ಬೇಕು ಅನುವುದನ್ನು ರಿಯಾಯಿತಿ ತೋರಿಸಿ ಇವರಿಗೂ ಎಲ್ಲರಂತೆ ಪೆನ್‌ಷನ್ ಸಿಗುವ ವ್ಯವಸ್ಥೆ ಮಾಡಿ ಬೇಕು. ಅವರು ೩೦-೩೫ ವರ್ಷ ಸೇವೆ ಮಾಡಿ ಪೆನ್‌ಷನ್ ಇಲ್ಲದ ಹಾಗೆ ಮಾಡುವುದು ಬೇಡ. ಅವರು ಮೊದಲು ಮಾಡಿರುವ ಸರ್ವೀಸನ್ನು ಗಣನೆಗೆ ತೆಗೆದುಕೊಂಡು ಇರುವ ಕಂಡೀಷನ್‌ನ್ನು ರಿಲಾಕ್ಸ್

ಮಾಡಿ ಪೆನ್‌ಷನ್ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ರೀತಿ ಮಾಡಿದರೆ ಪ್ರಾಮಾಣಿಕವಾಗಿ ಸೇವೆ ಮಾಡಿರತಕ್ಕ ಹರಿಜನ–ಗಿರಿಜನರಿಗೆ ಅನುಕೂಲವಾಗುತ್ತದೆ. ಈ ಸರ್ಕಾರವನ್ನು ಹರಿಜನ ಸರ್ಕಾರ, ಬಡಜನರ ಸರ್ಕಾರವೆಂದು ನಂಬಿಕೊಂಡಿದ್ದಾರೆ. ಅವರ ಮೇಲೆ ದಯೆತೋರಿಸಿ ಅವರಿಗೆ ಕಲ್ಯಾಣ ಮಾಡಿದಂತಾಗುತ್ತದೆ. ನಗರಸಭೆಗಳಲ್ಲಿ ಈಗ ಬಡಾವಣೆಗಳಾಗುತ್ತಿವೆ, ಹೆಚ್ಚಿಗೆ ನೌಕರರನ್ನು ನೇಮಕ ಮಾಡಿಕೊಳ್ಳುತ್ತಿಲ್ಲ. ಬಾಂಬೆ ಕರ್ನಾಟಕದ ಹೊಲ್ಡ್ ಮ್ಯಾನ್ಯುಯಲ್ ಪ್ರಕಾರ ೨ ಟೈಮ್ ಕಸ ಗುಡಿಸಿದರೆ ಅವರನ್ನು ಫುಲ್‌ಟೈಮ್ ನೌಕರರೆಂದೂ ಅವರಿಗೆ ಪಗಾರ ಇತ್ತು. ನಮ್ಮ ಸರ್ಕಾರ ೮ ನೂರು ಜನರಿಗೆ ಒಬ್ಬ ಪೌರ ಕಾರ್ಮಿಕ ಇರಬೇಕೆಂದು ಬಸವಲಿಂಗಪ್ಪನವರು ಮಾಡಿದರು. ಪೌರ ಕಾರ್ಮಿಕರು ಕಸ ಗುಡಿಸುವವರು ಬಂಗಿ ತೆಗೆಯುವವರು, ಕೊಳಕು ತೆಗೆಯುವವರು ಇವರು ಈ ಒಂದು ದೃಷ್ಟಿಯಿಂದ ಬಡಾವಣೆಗಳು ಆಗುತ್ತಿರುವ ಕಡೆಗಳಲ್ಲಿ ೨–೩ ಕಿಲೋಮೀಟರ್‌ಗಳಷ್ಟು ಒಬ್ಬರೆ ಕಸ ಗುಡಿಸಬೇಕು. ಆ ರೀತಿ ಮಾಡಲು ಕಷ್ಟವಾಗುತ್ತದೆ. ಆದ್ದರಿಂದ ಕೆಲಸವನ್ನು ನಿಗದಿ ಮಾಡಬೇಕು. ಬಾಂಬೆ ಗೌರ್ನಮೆಂಟ್‌ನವರು ಮಾಡಿದ್ದಾರೆ, ನಮ್ಮ ಸರ್ಕಾರದದರು ಅದನ್ನು ಅಡಾಪ್ಟ್ ಮಾಡಿಕೊಳ್ಳಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಗರಸಭೆಗಳಲ್ಲಿ ಕೆಲಸ ಮಾಡತಕ್ಕವರಿಗೆ ಏನು ತೊಂದರೆ ಇದೆ ಎಂಬುದನ್ನು ತಿಳಿದುಕೊಂಡು ತಕ್ಷಣ ಅವರಿಗೆ ಅನುಕೂಲ ಮಾಡಿಕೊಡಬೇಕು. ನಗರಸಭೆಗಳಲ್ಲಿರತಕ್ಕ ಜೂನಿಯರ್ ಇಂಜಿನಿಯರ್ ೫೦ ಸಾವಿರ ರೂಪಾಯಿಗಳವರೆಗೂ ಕೆಲಸ ಮಾಡತಕ್ಕ ಅವಕಾಶವಿರಬೇಕು. ಮೇಲ್ವಿಚಾರಣೆ ಮೇಜರ್‌ಮೆಂಟ್ ಚೆಕ್ ಮಾಡಲಿಕ್ಕೆ ಬೇಕಾದರೆ ಲೋಕೋಪಯೋಗಿ ಇಲಾಖೆಯವರೇ ಇರಲಿ ೫೦ ಸಾವಿರ ರೂಪಾಯಿಗಳವರೆಗೂ ನಗರಸಭೆಯವರು ಖರ್ಚು ಮಾಡತಕ್ಕಂತಹ ವ್ಯವಸ್ಥೆ ಇರಬೇಕು ಎನ್ನತಕ್ಕ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ೧೮ ಪರ್ಸೆಂಟ್ ಹಣ ಖರ್ಚು ಮಾಡುವಲ್ಲಿ ಅನೇಕ ನಗರಸಭೆಗಳು ಖರ್ಚು ಮಾಡಿಲ್ಲ. ನಾನು ಗಮನ ಸೆಳೆಯುವ ಸೂಚನೆಯ ಮುಖಾಂತರ ಕೇಳಿದಾಗ ಮಾನ್ಯ ಸಚಿವರೇ ಮಾಡಿಸುತ್ತೇನೆಂದು ಹೇಳಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಬ್ಯಾಡಗಿ ನಗರಸಭೆಯೊಂದನ್ನು ಬಿಟ್ಟರೆ ಬೇರೆ ನಗರಸಭೆಗಳು ೧೮ ಪರ್ಸೆಂಟ್ ಹಣವನ್ನು ಖರ್ಚುಮಾಡಿಲ್ಲ. ಅದಕ್ಕೊಂದು ಹೈಪವರ್ ಕಮಿಟಿ ಮಾಡಿ ಹಣ ಖರ್ಚಾಗುವಂತೆ ಮಾಡಬೇಕು. ನಗರ ಸಭೆಯಲ್ಲಿ ಒಬ್ಬ ಹರಿಜನ ಸದಸ್ಯನಿದ್ದರೆ, ಎಷ್ಟು ಪ್ರಯತ್ನ ಮಾಡಿದರೂ ೧೮ ಪರ್ಸೆಂಟ್ ಹಣ ಖರ್ಚಾಗುವುದಕ್ಕೆ ಅವಕಾಶ ಕೊಡುವುದಿಲ್ಲ. ಸೋಶಿಯಲ್ ವೆಲ್‌ಫೇರ್ ಇನ್ಸ್‌ಪೆಕ್ಟರ್, ಸೋಶಿಯಲ್ ವೆಲ್ ಅಸಿಸ್ಟೆಂಟ್ ಡೈರೆಕ್ಟರ್ ಯಾರು ಬಂದರೂ ಕೂಡ ಯಾರ ಮಾತನ್ನು ಕೇಳುವುದಿಲ್ಲ. ಸೋಶಿಯಲ್ ವೆಲ್‌ಫೇರ್ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿರಬೇಕು. ಯಾವ ನಗರಸಭೆಗಳವರು ಯಾವ ಅಧಿಕಾರಿಗಳಿಗೂ ಅಂಜುವುದಿಲ್ಲ. ಈ ವಿಷಯವನ್ನು ಬಹಳ ವಿಷಾದದಿಂದ ಹೇಳುತ್ತೇನೆ, ಡೈರೆಕ್ಟರೇಟ್ ಮಾಡಿ ಜಿಲ್ಲಾ ಮಟ್ಟದಲ್ಲಿ ಸಪರೇಟ್ ಅಧಿಕಾರಿಗಳು ಇದ್ದರೆ ಸರಿಯಾದ ವ್ಯವಸ್ಥೆ ತೆಗೆದುಕೊಳ್ಳುತ್ತಾರೆ. ಪೌರ ಕಾರ್ಮಿಕರಿಗೆ ಒಳ್ಳೆಯ ಕೆಲಸ ಮಾಡಲು ಅಧಿಕಾರಿಗಳು ಮುಂದೆ ಬರುತ್ತಾರೆ. ಪೌರ ಕಾರ್ಮಿಕರು ಉಗುಳು ತೆಗೆಯುತ್ತಾರೆ, ಎಂಜಲು ತೆಗೆಯುತ್ತಾರೆ, ಕಕ್ಕಸು ತೆಗೆಯುತ್ತಾರೆ, ಕಸ ತೆಗೆಯುತ್ತಾರೆ ಆದ್ದರಿಂದ ಇವರಿಗೆ ಅಂಟುರೋಗ ಬರುವುದು ಸ್ವಾಭಾವಿಕ ಇದೆ. ಇವರಿಗೆ ವೈದ್ಯಕೀಯ ಸೌಕರ್ಯವಿಲ್ಲ. ಅದಕ್ಕೋಸ್ಕರ ಮಾನ್ಯಮಂತ್ರಿಗಳವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಇವರಿಗೆ ಕಡ್ಡಾಯವಾಗಿ ಅಂಟುರೋಗವನ್ನು ತಡೆಗಟ್ಟುವ ಇಂಜೆಕ್ಷನ್ ಮತ್ತು ಪುಕ್ಕಟೆ ಔಷಧ ಮತ್ತು ವೈದ್ಯಕೀಯ ಸೌಕರ್ಯ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಬ್ಯಾಡಗಿಯಲ್ಲಿ ಚಂಗಪ್ಪ ಎಂಬ ಪೌರ ಕಾರ್ಮಿಕ ಕ್ಷಯರೋಗದಿಂದ ಬೀದಿಯಲ್ಲಿ ಬಿದ್ದು ಸತ್ತ. ಆತನಿಗೆ ನಗರಸಭೆಯವರು ಪರಿಹಾರ ಕೊಡಬೇಕೆಂದು ಕೇಳಿದರೆ ಪ್ರಾವಿಜನ್ ಇಲ್ಲವೆಂದು ಹೇಳಿದ್ದಾರೆ. ನಗರಸಭೆಯವರು ಏತಕ್ಕೆ ಕೊಡಬಾರದು ? ಸರ್ಕಾರದಲ್ಲಿ ನೌಕರಿ ಮಾಡುವ ಮನುಷ್ಯ ಸತ್ತರೆ ೧೦ ಸಾವಿರ ರೂಪಾಯಿ ಕೊಡುವ ವ್ಯವಸ್ಥೆ ಇದೆ.

ನಾನು ಎಸ್.ಇ. ಮತ್ತು ಎಸ್.ಟಿ. ಕಮಿಟಿ ಜೊತೆಗೆ ಕೆಲವು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದಾಗ ಹುಬ್ಬಳ್ಳಿ ಮತ್ತು ಬೆಳಗಾಂನಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿರುವುದನ್ನು ನಾವು ನೋಡಿದೆವು. ಮತ್ತೆ ಕೆಲವು ಕಡೆಗಳಲ್ಲಿ ತಮಗಿಷ್ಟ ಬಂದ ರೀತಿಯಲ್ಲಿ ಕೆಲಸಗಳನ್ನು ಮಾಡಿದ್ದಾರೆ. ಹುಬ್ಬಳ್ಳಿ–ಧಾರವಾಡ ನಗರಸಭೆಯಲ್ಲಿ ಕಳೆದ ೬೦–೭೦ ವರ್ಷಗಳಿಂದ ಭಂಗಿ ಕೆಲಸ ಮಾಡಿಕೊಂಡು ಬರುತ್ತಿರುವವರಿಗೆ ಸರಿಯಾದ ಮನೆಗಳನ್ನಾಗಲೀ ಕುಡಿಯುವ ನೀರಿನ ಟ್ಯಾಂಕ್‌ನ ಸೌಲಭ್ಯವನ್ನಾಗಲೀ ಕಲ್ಪಿಸಿಕೊಟ್ಟಿಲ್ಲ. ಹರಿಜನ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆಂದು ಒಂದು ಹಾಸ್ಟೆಲ್‌ನ್ನು ಕಟ್ಟಿಸಿದ್ದಾರೆ. ಈ ಕಟ್ಟಡ ನೋಡಿ ನನಗೆ

ಸಂತೋಷವಾಯಿತು. ಈ ಕಟ್ಟಡದಲ್ಲಿ ಶ್ರೀ ಪುರೋಹಿತ್ ಎಂಬ ಕಮೀಷನರ್ ಅವರ ಪೋಟೋ ಇದೆ ಅಲ್ಲಿನ ಹುಡುಗರು ಬೆಳಿಗ್ಗೆ ಎದ್ದು ಮುಖ ತೊಳೆದ ನಂತರ ಆ ಪೋಟೋಗೆ ಪೂಜೆ ಮಾಡಿ ನಂತರ ಶಾಲೆಗಳಿಗೆ ಹೋಗಬೇಕು. ಒಬ್ಬ ಕಮೀಷನರ್ ಇಲ್ಲವೇ ಒಬ್ಬ ಚೀಫ್–ಆಫೀಸರ್ ಸರ್ಕಾರದ ನೆರವಿನಿಂದ ಹಾಸ್ಟಲ್ ಕಟ್ಟಡ ಕಟ್ಟಿಸಿದರೆ ಇಲ್ಲವೇ ಕಮ್ಯುನಿಟಿ ಸೆಂಟರ್ ಕಟ್ಟಿಸಿದರು ಇಲ್ಲವೇ ಕಲ್ಯಾಣ ಮಂಟಪ ಕಟ್ಟಿಸಿದರೆ ಅದರಲ್ಲಿ ಅವರ ಪೋಟೋ ಹಾಕುವುದು ನಮ್ಮ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಯಾವ ಒಳ್ಳೆಯ ಸಂಪ್ರದಾಯವಾಗುತ್ತದೆ? ಬೇಕಾದರೆ ಮಹಾತ್ಮಾಗಾಂಧಿ ಅವರ ಫೋಟೋ ಹಾಕಲಿ ಇಲ್ಲವೇ ಶ್ರೀಮತಿ ಇಂದಿರಾಗಾಂಧಿ ಅವರ ಫೋಟೋ ಹಾಕಲಿ ಇಲ್ಲವೇ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದಂಥ ಶ್ರೀ ಗುಂಡೂರಾವ್ ಅವರ ಫೋಟೋ ಹಾಕಲಿ, ನಮಗೆ ಸಂತೋಷ. ಆದರೆ ಒಬ್ಬ ಕಮೀಷನರ್ ಅವರ ಫೋಟೋವನ್ನು ಹಾಕಿ ಪೂಜೆ ಮಾಡುವುದನ್ನು ನಾನು ಎಲ್ಲಿಯೂ ನೋಡಿಲ್ಲ, ಇದು ಒಳ್ಳೆಯ ಸಂಪ್ರದಾಯವು ಅಲ್ಲ.

ಇನ್ನು ನಗರಸಭೆಗಳ ಆದಾಯದಲ್ಲಿ ಶೇಕಡಾ ೧೮ರಷ್ಟು ಹಣವನ್ನು ಹರಿಜನರ ಕಲ್ಯಾಣಕ್ಕೆಂದು ಎಲ್ಲಿಯೂ ಸರಿಯಾಗಿ ಖರ್ಚು ಮಾಡುತ್ತಿಲ್ಲ. ಈ ಕಾರಣದಿಂದ ಇದಕ್ಕೆ ಒಂದು ಪ್ರತ್ಯೇಕವಾದಂತ ಹೆಡ್ ಮಾಡಿ, ಅದಕ್ಕೆ ಶೇಕಡಾ ೧೮ರಷ್ಟು ಹಣವನ್ನು ಜಮಾ ಮಾಡುವುದರ ಮೂಲಕ ಹರಿಜನರ ಕಲ್ಯಾಣಕ್ಕೇ ಖರ್ಚು ಮಾಡಬೇಕೆಂದು ಹೇಳುತ್ತೇನೆ. ಪೌರಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಈ ಹಣ ಖರ್ಚು ಮಾಡಿದರೂ ನನಗೆ ಸಂತೋಷ, ಈ ಹಣವನ್ನು ಸರಿಯಾಗಿ ಖರ್ಚು ಮಾಡುವ ಉದ್ದೇಶಕ್ಕಾಗಿ ಎಲ್ಲ ನಗರಸಭೆಗಳಲ್ಲಿಯೂ ಪ್ರತ್ಯೇಕವಾದ ಕಮಿಟಿಗಳನ್ನು ಮಾಡಿದ್ದರೂ ಸಹ ಈ ಹಣ ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಮನೆ ರಿಪೇರಿಗೆಂದು ನೂರಾರು ಜನರ ಸಹಿ ತೆಗೆದುಕೊಂಡು ೫೦೦–೬೦೦ ರೂ.ಗಳನ್ನು ಕೊಡುತ್ತಾರೆ. ಆದರೆ ನಿಜವಾಗಿಯೂ ಈ ಜನರಿಗೆ ಎಷ್ಟು ಹಣ ಕೊಡುತ್ತಾರೆಂಬುದು ಗೊತ್ತಿಲ್ಲ. ಇಂತಹ ಒಂದು ಅವ್ಯವಹಾರ ನಡೆಯುತ್ತಿದೆ, ಇದನ್ನು ತಪ್ಪಿಸುವುದರ ಮೂಲಕ ಒಳ್ಳೆಯ ಕೆಲಸಕ್ಕೆ ಈ ಹಣ ಖರ್ಚು ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಪಂಪಾಪತಿ ಅವರು ಮಾತನಾಡುವಾಗ ಅವರ ಒಂದು ಅನುಭವಗಳನ್ನು ಹೇಳಿದರು. ನಮ್ಮ ರಾಣಿಬೆನ್ನೂರಿನಲ್ಲಿ ಒಬ್ಬರು ಆಡಳಿತಾಧಿಕಾರಿ ಇದ್ದಾರೆ, ಅವರಿಗೆ ಜನ ಸಂಪರ್ಕವೆಂಬುದೇ ಇಲ್ಲ. ಅವರು ಜನರು ಹೇಳಿದಂಥ ಕೆಲಸಗಳನ್ನು ಮಾಡದೇ ತಮ್ಮದೇ ಆದಂಥ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ತಾವೇ ಸರ್ಕಾರ, ತಮ್ಮದೇ ನಗರಸಭೆ ಅನ್ನುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಹತ್ತಿರ ಯಾರೂ ಮಾತನಾಡುವಂತಿಲ್ಲ. ಹರಿಜನರನ್ನು ಏನಾದರು ಕೆಲಸಕ್ಕೆ ತೆಗೆದುಕೊಂಡರೆ ೩ ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಇಂತಹ ಆಡಳಿತಾಧಿಕಾರಿಗೆ ನಾವು ಸರಿಯಾಗಿ ಬುದ್ಧಿ ಕಲಿಸದಿದ್ದರೆ ನಾವು ಜನರ ಒಂದು ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ. ಈ ಆಡಳಿತಾಧಿಕಾರಿಯನ್ನು ಬೇರೆ ಇಲಾಖೆಗೆ ವರ್ಗ ಮಾಡಿ ಅಲ್ಲಿಗೆ ಉತ್ತಮ ರೀತಿಯಿಂದ ಕೆಲಸ ಮಾಡುವ ಅಧಿಕಾರಿಯನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ಎಲ್ಲ ನಗರಸಭೆಗಳಿಗೂ ಅಲ್ಲಿರುವಂತಹ ಆಡಳಿತಾಧಿಕಾರಿಗಳಿಗೆ ಸಲಹೆಗಳನ್ನು ಕೊಡಲು ಸಲಹಾ ಸಮಿತಿಗಳನ್ನು ರಚನೆ ಮಾಡಿ ಆ ಸಮಿತಿಗಳ ಮೂಲಕ ಎಲ್ಲ ಕೆಲಸಗಳೂ ನಡೆಯುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಅತಿ ಮುಖ್ಯವಾಗಿ ಈ ಇಲಾಖೆಗೆ ಸಂಬಂಧಪಟ್ಟಂತೆ ಪ್ರತ್ಯೇಕ ಡೈರಕ್ಟರೇಟ್ ಸ್ಥಾಪನೆಯಾದರೆ ಎಲ್ಲ ನಗರಸಭೆಗಳನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಜೈಹಿಂದ್

ಶ್ರೀ ಎಂ. ಚಂದ್ರಶೇಖರ್ (ಜಯನಗರ),—ಮಾನ್ಯ ಅಧ್ಯಕ್ಷರೇ, ನಗರಾಡಳಿತ ಮತ್ತು ವಸತಿ ಇಲಾಖೆ ಬೇಡಿಕೆಗಳ ಬಗೆ ನನ್ನ ಅನೇಕ ಸ್ನೇಹಿತರು ಮಾತನಾಡಿ ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ನಾನು ಮುಖ್ಯವಾಗಿ ಬೆಂಗಳೂರು ನಗರಕ್ಕೆ ಸೀಮಿತವಾಗಿ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬೆಂಗಳೂರು ಮಹಾನಗರಸಭೆಯ ಚುನಾವಣೆ ಆಗಿ ಸುಮಾರು ೨–೧೦ ವರ್ಷಗಳಾಯಿತು ಚುನಾವಣೆ ನಡೆಸುವುದಾಗಿ ವರ್ಷೇವರ್ಷೇ ಹೇಳುತ್ತಲೇ ಬಂದಿದ್ದಾರೆ, ಆದರೆ ಇಲ್ಲಿಯವರೆಗೆ ಚುನಾವಣೆಯನ್ನು ನಡೆಸಲಿಲ್ಲ, ನಾನಾ ಕಾರಣಗಳಿಂದ ಇವರು ಚುನಾವಣೆಯನ್ನು ನಡೆಸುತ್ತಿಲ್ಲ, ಚುನಾವಣೆ ನಡೆಸಿದರೆ ಆಡಳಿತ ಪಕ್ಷ ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಸಾಧ್ಯವಿಲ್ಲವೆಂಬ ಕಾರಣದಿಂದ ಮತ್ತು

ಎಲ್ಲ ನಗರ ಪ್ರದೇಶಗಳಲ್ಲಿ ಬುದ್ಧಿಜೀವಿಗಳಿರುವುದರಿಂದ ಮತ್ತು ಅನೇಕ ಚಟುವಟಿಕೆಗಳು ನಡೆಯುವುದರಿಂದ ಎಲ್ಲ ಕಡೆಯೂ ವಿರೋಧಪಕ್ಷಗಳ ಒಂದು ಪ್ರಭಾವ ಬೆಳೆಸುವುದಕ್ಕೆ ಅವಕಾಶ ಕೊಡಬಾರದೆಂಬ ಉದ್ದೇಶದಿಂದ ಇವರು ಚುನಾವಣೆಯನ್ನು ನಡೆಸುತ್ತಿಲ್ಲ. ಇವರು ಚುನಾವಣೆ ನಡೆಸುವುದಕ್ಕೆ ಬದಲು ಪ್ರಜೆಗಳಿಗೆ ಎಲ್ಲ ರೀತಿಯ ಸೌಕರ್ಯಗಳನ್ನು ಒದಗಿಸಿಕೊಡಲು ಆಡಳಿತ ಮಂಡಲಿಗಳನ್ನು ರಚನೆ ಮಾಡಿದ್ದಾರೆ, ಆದರೆ ಇವೂ ಸಹ ಸರಿಯಾಗಿ ಕೆಲಸ ಮಾಡುತ್ತಿಲ್ಲ ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ವರ್ಷದಲ್ಲಿ ಎರಡು ಸಲ ಕಮೀಷನರ್ ಮತ್ತು ಮುಖ್ಯ ಇಂಜಿನಿಯರ್ ಅವರು ಬದಲಾವಣೆಯಾದರೆ. ೩ ತಿಂಗಳಿಗೊಮ್ಮೆ ಆಡಳಿತಾಧಿಕಾರಿ ಅವರು ಬದಲಾವಣೆಯಾಗುತ್ತಿದ್ದಾರೆ. ಈ ೩ ಮುಖ್ಯವಾದಂತ ಹುದ್ದೆಗಳಲ್ಲಿ ಯಾರೂ ಖಾಯಂ ಆಗಿ ಕೆಲವು ಕಾಲ ಕೆಲಸ ಮಾಡದ ಕಾರಣ ಯಾವ ಒಂದು ಕೆಲಸವೂ ಸರಿಯಾಗಿ ಆಗಲು ಸಾಧ್ಯವಾಗುತ್ತಿಲ್ಲ. ಒಂದು ಕೆಲಸದ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕು ಅನ್ನುವುದರೊಳಗಾಗಿ ಕಮೀಷನರ್ ಅವರು ಬದಲಾವಣೆಯಾಗುತ್ತಾರೆ ನಂತರ ಬೇರೆಯವರು ಬರುವವರೆಗೂ ಕಾಯಬೇಕು. ಎಸ್ಟಿಮೇಟ್‌ಗಳನ್ನು ಚೀಫ್–ಇಂಜಿನಿಯರ್ ಅವರ ಮಟ್ಟದಲ್ಲಿಯೇ ಮಂಜೂರು ಮಾಡಬೇಕಾಗಿದೆ. ಈ ಮಾತನ್ನು ಹೇಳಲು ನಾಚಿಕೆಯಾಗುತ್ತದೆ, ಏಕೆಂದರೆ. ೫ ಲಕ್ಷ ರೂ.ಗಳ ಒಂದು ಎಸ್ಟಿಮೇಟನ್ನು ಮಂಜೂರು ಮಾಡುವಂತಹ ಚೀಫ್ ಇಂಜಿನಿಯರ್ ಅವರು ಬೆಂಗಳೂರು ನಗರಸಭೆಗೆ ಬಂದಮೇಲೆ ೫ ಸಾವಿರ ರೂ.ಗಳಿಗಿಂತ ಹೆಚ್ಚಿನ ಎಸ್ಟಿಮೇಟನ್ನು ಮಂಜೂರು ಮಾಡುವಂತಿಲ್ಲ. ೫ ಸಾವಿರ ರೂ.ಗಳಿಗಿಂತ ಹೆಚ್ಚಿನ ಎಸ್ಟಿಮೇಟ್ ಆದರೆ, ಅದು ಕಮೀಷನರ್ ಅವರ ಮುಂದೆ ಹೋಗಬೇಕು, ೫ ಲಕ್ಷ ರೂ.ಗಳ ಎಸ್ಟಿಮೇಟ್ ಆದರೆ ಅದು ಕೌನ್ಸಿಲ್ ಮುಂದೆ ಹೋಗಬೇಕು. ಅನಂತರ ಸರ್ಕಾರಕ್ಕೆ ಹೋಗಬೇಕು. ಇಲ್ಲಿ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು ಹಾಗೂ ಅಸಿಸ್ಟೆಂಟ್ ಇಂಜಿನಿಯರ್‌ಗಳು ಇದ್ದಾರೆ. ಇವರುಗಳು ಲೋಕೋಪಯೋಗಿ ಇಲಾಖೆಯಲ್ಲಿಯಾದರೆ ಲಕ್ಷಾಂತರ ರೂಪಾಯಿಗಳ ಕೆಲಸಗಳನ್ನು ಮಾಡಿಸುತ್ತಾರೆ. ಆದರೆ ಬೆಂಗಳೂರು ನಗರಸಭೆಯಲ್ಲಿಯದರೆ ಒಂದು ಎಸ್ಟಿಮೇಟ್ ಮಂಜೂರಾಗಬೇಕಾದರೆ ಕೆಳಗಿನಿಂದ ಮೇಲಿನವರೆಗೂ ಹೋಗಿ ಬರಬೇಕು. ಈ ರೀತಿ ಹೋಗಿ ಬರಲು ೬ ತಿಂಗಳುಗಳಿಂದ ಒಂದು ವರ್ಷವಾಗುತ್ತದೆ. ಇದೇ ಕಾರಣದಿಂದ ಅಲ್ಲಿ ಸರಿಯಾಗಿ ಕೆಲಸಕಾರ್ಯಗಳು ಆಗುತ್ತಿಲ್ಲ

೫–೩೦ ಪಿ. ಎಂ.

ಅಷ್ಟರೊಳಗೆ ೨–೩ ಅಧಿಕಾರಿಗಳು ಬದಲಾವಣೆ ಆಗುತ್ತಾರೆ. ಪುನಃ ಯಥಾ ಪ್ರಕಾರ ಅವರಿಗೆ ಮತ್ತೆ ಹೇಳಬೇಕು, ಅವರ ಮನವೊಲಿಸಬೇಕು ಹೀಗಾಗುತ್ತದೆ. ಬೆಂಗಳೂರು ಕಾರ್ಪೋರೇಷನ್ನಿನ ಅನೇಕ ಅಭಿವೃದ್ಧಿ ಕೆಲಸ ಕಾರ್ಯಗಳು ಈ ಕಾರಣದಿಂದ ಸ್ಥಗಿತವಾಗಿವೆ, ತಾವು ಹೇಳಿರುವ ಪ್ರಕಾರ ನೀವು ೧೯೬೧–೬೨ಕ್ಕೆ ಕೊಟ್ಟಿರತಕ್ಕಂಥಾ ಗ್ರಾಂಟ್‌ನಲ್ಲಿ ೩೭.೧೪ ಕೋಟಿ ರೂಪಾಯಿನಲ್ಲಿ ಬರೇ ೨೮ ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿದ್ದೀರಿ. ಇನ್ನೂ ೯.೨ ಕೋಟಿ ರೂಪಾಯಿಯನ್ನು ಖರ್ಚು ಮಾಡದೇ ಹಾಗೆಯೇ ಉಳಿಸಿದ್ದೀರಿ, ಬೆಂಗಳೂರು ನಗರ ಕಾರ್ಪೋರೇಷನ್ನಿಗೆ ಆಕ್ಟ್ರಾಯಿಂದ ಏನು ವರಮಾನ ಬರುತ್ತಿತ್ತೋ ಅದು ಹೋದ ಕಾರಣ ತಾವು ಈವಾಗ ಏನು ಕಾಂಪನ್ಸೇಷನ್ ಕೊಡುತ್ತೀರೋ ಅದು ಸಾಲದು ಹೆಚ್ಚು ಮಾಡಬೇಕು ಎಂದು ನಾವು ವರ್ಷೇ ವರ್ಷೇ ಕೇಳುತ್ತಿರುವಾಗ ಮಂಜೂರಾಗಿರುವ ಹಣವನ್ನೂ ಕೂಡ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದಾದರೆ ಈ ನಗರ ಸಭೆಯಲ್ಲಿ ಇನ್ನಾವ ರೀತಿಯಲ್ಲಿ ಕೆಲಸ ನಡೆಯುತ್ತಿದೆ ಅನ್ನುವುದನ್ನು ನಾವೇ ತಿಳಿದುಕೊಳ್ಳಬಹುದು. ಈ ನಗರಸಭೆಯ ಆಡಳಿತದ ವ್ಯವಸ್ಥೆ ಅವ್ಯವಸ್ಥೆಯಾಗಿದೆ ಎನ್ನುವುದು ಅರ್ಥವಾಗುತ್ತದೆ. ಈ ನಗರ ಸಭೆಯಲ್ಲಿ ಕ್ಯಾಪಿಟಲ್ ವರ್ಕ್ಸ್ ಆಗಲಿ, ಪರ್ಮನೆಂಟ್ ವರ್ಕ್ಸ್ ಆಗಲಿ ಯಾವ ಕೆಲಸ ಕಾರ್ಯಗಳೂ ಸರಿಯಾಗಿ ನಡೆಯುತ್ತಿಲ್ಲ ಎಂದು ಹೇಳಬಹುದು, ಈ ರಸ್ತೆ ರಿಪೇರಿ ಕೆಲಸವಾಗಲಿ, ಒಂದು ಮೋರಿ ಕೆಲಸವಾಗಲಿ, ಟಾರ್ ಹಾಕುವ ಕೆಲಸವಾಗಲಿ ಇದನ್ನು ವರ್ಷೇ ವರ್ಷೇ ಮಾಡುತ್ತಿದ್ದಾರೇ ವಿನಾ ಇನ್ನಾವ ಅಭಿವೃದ್ಧಿ ಕೆಲಸಗಳನ್ನಾಗಲಿ ಹೊಸ ಕೆಲಸಗಳನ್ನು ತೆಗೆದುಕೊಂಡಿಲ್ಲ. ಈ ನಗರಸಭೆಯು ನೌಕರರಿಗೆ ಕೊಡತಕ್ಕಂಥಾ ಸಂಬಳ ಸಾರಿಗೆ ನೋಡಿದರೆ ಪ್ರತಿವರ್ಷವೂ ೧೦ ರಿಂದ ೧೨ ಕೋಟಿ ರೂಪಾಯಿಗಳವರೆಗೆ ಖರ್ಚಾಗುತ್ತದೆ, ಅಲ್ಲದೆ ಹೊಸದಾಗಿ ಕೆಲವು ಹುದ್ದೆಗಳನ್ನು ಹೆಚ್ಚಿಗೆ ಮಾಡಿಕೊಂಡು ಜಾಸ್ತಿ ಅವರು ತಮ್ಮ ಸಂಬಳ ಸಾರಿಗೆಗಳಿಗೆ ಖರ್ಚು ಮಾಡುತ್ತಿದ್ದಾರೇ ವಿನಾ ಪರ್ಮನೆಂಟ್ ವರ್ಕ್ಸ್ ಇನ್ನು ಇತರ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಯಾವ ರೀತಿಯಾಗಿ ಖರ್ಚು ಮಾಡುತ್ತಾ ಇಲ್ಲ, ಅದ್ದರಿಂದ ಹೆಚ್ಚಿನ ಕೆಲಸ ಕಾರ್ಯಗಳು ಆಗುತ್ತಾ ಇಲ್ಲ. ಮಾನ್ಯ ಮಂತ್ರಿಗಳು ಬಂದ ಪರಿಸರದಲ್ಲಿ ಒಂದು ಪ್ರೋಗ್ರಾಂ ಹಾಕಿ

ಕೊಂಡಿದ್ದರು, ಈಗ ಕೆಲವಾರು ತಿಂಗಳುಗಳಿಂದ ಅದು ತಪ್ಪಿಹೋಗಿದೆ. ಎರಡು ತಿಂಗಳಿಗೊಮ್ಮೆ ಒಂದು ಸಭೆ ಸೇರಿಸಿ ಶಾಸಕರನ್ನು ಕರೆಸಿ ಕಮಿಷನರನ್ನೂ ಕರೆಸಿ ಅವರ ಮುಖಾಂತರ ಅನೇಕ ಸಮಸ್ಯೆಗಳನ್ನು ವಿಚಾರ ಮಾಡುತ್ತಿದ್ದರು. ಈಗ ಅದನ್ನು ತಪ್ಪಿಸಿದ್ದಾರೆ, ೧೯೮೦–೮೧ ಮತ್ತು ೧೯೮೧–೮೨ ಈ ಎರಡು ವರ್ಷದಲ್ಲಿ ನಡೆದಂಥ ಸಭೆಯಲ್ಲಿ ಏನು ತೀರ್ಮಾನಗಳನ್ನು ತೆಗೆದುಕೊಂಡಿದ್ದರು ಆ ತೀರ್ಮಾನ ಕಾರ್ಯರೂಪದಲ್ಲಿ ಬರದೇ ಇದ್ದುದರಿಂದ ಮುಂದೆ ಸಭೆ ಕರೆದರೂ ಪ್ರಯೋಜನ ಇಲ್ಲ, ನಾನೂ ಹೇಳಿದ್ದರೂ ಕೂಡ ಏನೂ ಮಾನ್ಯತೆ ಇಲ್ಲದೇ ಹೋಯಿತಲ್ಲಾ. ಇನ್ನು ಸಭೆ ಕರೆದರೆ ಏನು ಪ್ರಯೋಜನ ಎಂದು ಮಾನ್ಯ ಮಂತ್ರಿಗಳ ಮನಸ್ಸಿಗೆ ಬಂತೋ ಏನೋ ನನಗೆ ಗೊತ್ತಿಲ್ಲ, ೧೯೮೦–೮೧ ರಲ್ಲಿ ಸಾಸಕರ ಸಭೆಯೊಂದನ್ನು ಕರೆದು ತೆಗೆದುಕೊಂಡಂಥಾ ತೀರ್ಮಾನಗಳು ಏನು ಇವೆ ಅದೇ ಕೆಲಸವನ್ನೆ ಅವರ ಪ್ರೋಗ್ರಾಂ ಆಫ್ ವರ್ಕ್ಸ್ ಪ್ರಕಾರ ೧೯೮೦–೮೧, ೧೯೮೧–೮೨ ಮತ್ತು ೧೯೮೨-೮೩ ರಲ್ಲಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೇ ವಿನಾ ಹೊಸ ಕೆಲಸಕಾರ್ಯಗಳನ್ನು ಯಾವುದನ್ನೂ ತೆಗೆದುಕೊಂಡಿಲ್ಲ. ೧೯೮೦–೮೧ರಲ್ಲಿ ಪೂರ್ಣವಾಗದೇ ಇರುವಂಥಾ ಕೆಲಸ ಕಾರ್ಯಗಳು ಆಗುತ್ತದೆಯೋ ವಿನಾ ಅಂಥಾ ದೊಡ್ಡ ದೊಡ್ಡ ಕೆಲಸಗಳು ಆಗುತ್ತಾ ಇಲ್ಲ. ವ್ಯವಸ್ಥಿತವಾಗಿ ಯಾವ ಕೆಲಸವೂ ಆಗುತ್ತಾ ಇಲ್ಲ. ಇದರಿಂದ ಸಾರ್ವಜನಿಕರಿಗೆ ಬಹಳ ಕಷ್ಟವಾದ ಪರಿಸ್ಥಿತಿ ಬಂದಿದೆ. ನಮ್ಮ ಸ್ನೇಹಿತರೊಬ್ಬರು ಇದರ ಬಗ್ಗೆ ಹೇಳುತ್ತಿದ್ದರು ಏನೆಂದರೆ ೧೮ ಪರ್ಸೆಂಟ್ ಗ್ರಾಂಟ್ ಏನು ಇದೇಇದರ ಬಗ್ಗೆ ಅದು ಸಹ ಸರಿಯಾಗಿ ಖರ್ಚು ಮಾಡುತ್ತಿಲ್ಲ ಎಂದು ಹೇಳಿದರು. ಈ ಹರಿಜನ–ಗಿರಿಜನರಿಗೆ ಇದರಲ್ಲಿ ೧೮ ಪರ್ಸೆಂಟ್ ಏನು ಖರ್ಚು ಮಾಡಬೇಕು, ಅವರಿಗೆ ಈ ದುಡ್ಡನ್ನು ತೆಗೆದುಕೊಂಡು ಏನು ಅನುಕೂಲತೆಗಳನ್ನು ಮಾಡಿಕೊಡಬೇಕು, ಆ ದುಡ್ಡನ್ನು ಖರ್ಚೂ ಮಾಡಿಲ್ಲಾ, ಅನುಕೂಲತೆಯನ್ನೂ ಮಾಡಿಕೊಟ್ಟಿಲ್ಲ ಎಂದು ಹೇಳಿದರು. ತಮಗೆ ಹೇಳಬೇಕಾದರೆ ಅವರಿಗೆ ೪೩.೫ ಲಕ್ಷ ಇಟ್ಟಿರುವುದರಲ್ಲಿ ಕೇವಲ ೧೯ ಲಕ್ಷ ರೂಪಾಯಿ ಮಾತ್ರ ಖರ್ಚು ಮಾಡಿದ್ದಾರೆ. ಅವರ ವಿಚಾರದಲ್ಲಿಯೂ ಇವರು ಸರಿಯಾಗಿ ಕಾಳಜಿ ವಹಿಸಿಲ್ಲಾ. ಇದಕ್ಕೆ ಕಾರಣ ಏನೆಂದರೆ ಇದರಲ್ಲಿ ಕೆಲವು ಲೋಪದೋಷಗಳು ಇವೆ. ಹಳ್ಳಿಗಳಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಪಕ್ಕದಲ್ಲೇ ಹರಿಜನ–ಗಿರಿಜನರು ಇರುತ್ತಾರೆ. ಅವರಿಗೆ ನಗರ ಪ್ರದೇಶಗಳಲ್ಲಿರತಕ್ಕಂಥಾ ಕೊಳಚೆ ಪ್ರದೇಶಗಳಲ್ಲಿ ಹರಿಜನ–ಗಿರಿಜನರು ಏನು ಇದ್ದಾರೆ ಅವರಿಗೆ ಸಾಮಾನ್ಯವಾದಂಥಾ ಒಂದು ರಸ್ತೆ ಆಗಲಿ, ಒಂದು ಮೋರಿ ಆಗಲಿ ಜನರಲ್ ಬಡ್ಜೆಟ್‌ನಲ್ಲಿ ಬರತಕ್ಕಂಥಾ ದುಡ್ಡನ್ನೇ ಉಪಯೋಗಿಸಿ ಕೆಲಸಕಾರ್ಯಗಳನ್ನು ಮಾಡಿಕೊಡುತ್ತಾರೆ ಆದರೆ ಅವರಿಗೆ ಬೇರೆ ಕೆಲಸಕಾರ್ಯಗಳನ್ನು ಮಾಡಿಕೊಡಬೇಕಾದರೆ, ಅವರಿಗೆ ಇಟ್ಟಿರತಕ್ಕಂಥಾ ದುಡ್ಡಿನಲ್ಲಿ ಕೆಲಸ ಮಾಡಿಕೊಡಬೇಕಾದರೆ ಅವರುಗಳನ್ನು ಐಡೆಂಟಿಫೈ ಮಾಡಬೇಕು. ಅವರನ್ನು ಐಡೆಂಟಿಫೈ ಮಾಡುವ ಜನರು ಈಗ ಯಾರು ಇದ್ದಾರೆ. ಇದು ಮುಖ್ಯ. ಅಧಿಕಾರಿಗಳಿಗೆ ಇದು ಬೇಕಾಗಿಲ್ಲ. ಜನರ ಪ್ರತಿನಿಧಿಗಳು ಇದ್ದಿದ್ದರೆ ಹರಿಜನರಿಗೆ ಆಗಬೇಕಾದಂಥ ಕೆಲಸಕಾರ್ಯಗಳನ್ನು ಮಾಡಿಕೊಡುತ್ತಿದ್ದರು ಅವರನ್ನು ಐಡೆಂಟಿಫೈ ಮಾಡಿ ಮಾಡಿಕೊಡುತ್ತಿದ್ದರು, ಈಗ ಚುನಾವಣೆ ಆಗದೇ ಇರುವುದರಿಂದ ಎಲ್ಲೂ ಕೌನ್ಸಿಲರ್ಸ್ ಇಲ್ಲ. ಆದರಿಂದ ಆ ಜನಗಳನ್ನು ಕಂಡುಹಿಡಿಯುವರ್‍ಯಾರು, ಐಡೆಂಟಿಫೈ ಮಾಡುವರ್‍ಯಾರು ? ಆದರಿಂದ ಅವರಿಗೆ ಆಗಬೇಕಾದ ಕೆಲಸ ಆಗುತ್ತಾ ಇಲ್ಲ. ಅಧಿಕಾರಿಗಳಿಗೆ ಬೇಕಾಗಿಲ್ಲ. ಇದರಿಂದ ಹರಿಜನರಿಗೆ ೧೮ ಪರ್ಸೆಂಟ್ ಗ್ರಾಂಟ್ ಏನು ಇಟ್ಟಿದ್ದಾರೋ ಅದು ಖರ್ಚಾಗದೇ ಹಾಗೇ ಉಳಿದಿದೆ. ಮಾನ್ಯ ಮಂತ್ರಿಗಳು ಮತ್ತು ಕಮೀಷನರು ಇರತಕ್ಕಂಥಾ ಸಭೆಯಲ್ಲಿ ನಗರ ಸಮಸ್ಯೆ ಏನು ಅನ್ನುವುದನ್ನು ಅನೇಕ ಜನರು ಹೇಳಿದ್ದಾರೆ, ತಮಗೆ ಹೇಳಬೇಕಾದರೆ ನಗರ ಪ್ರದೇಶದ ಅನೇಕ ಕೊಳಚೆ ಪ್ರದೇಶಗಳಲ್ಲಿ ಸರಿಯಾದ ಒಳಚರಂಡಿ ವ್ಯವಸ್ಥೆ ಇಲ್ಲ. ೧೯೬೪ ರಲ್ಲಿ ಬೆಂಗಳೂರು ನಗರಸಭೆಗೆ ೩೨ ಹಳ್ಳಿಗಳು ಏನು ಸೇರಿತು ಅವಕ್ಕೆ ಒಳಚರಂಡಿ ವ್ಯವಸ್ಥೆ ಇಲ್ಲ. ೧೮ ವರ್ಷಗಳಾದರೂ ಕೂಡ ಮಾಡಿಕೊಟ್ಟಿಲ್ಲಾ. ಈವೊತ್ತಿಗೂ ಸಹ ಅವರು ೧೮ ವರ್ಷಗಳಿಂದಲೂ ಅದಕ್ಕೆ ಕಂದಾಯ ಕಟ್ಟಿಕೊಂಡು ಬರುತ್ತಿದ್ದಾರೆ. ಆದರೆ ಅವರಿಗೆ ಅವಶ್ಯಕವಾಗಿ ಏನು ಕೆಲಸ ಮಾಡಿಕೊಡಬೇಕೋ ಅದನ್ನು ಮಾಡಿಕೊಟ್ಟಿಲ್ಲಾ. ಸಾಧಾರಣವಾಗಿ ಹರಿಜನ–ಗಿರಿಜನರು ಎಲ್ಲಿ ಇರೊತ್ತಾರೋ ಅಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ. ಅಲ್ಲಿ ವಾಸಮಾಡುತ್ತಿರುವವರ ಮನೆಯಲ್ಲಿ ಬಚ್ಚಲು ನೀರು ಏನು ಇದೆ ಅದನ್ನು ಹೊರಗಡೆ ಮೋರಿಗೆ ಬಿಡುವ ವ್ಯವಸ್ಥೆಯನ್ನು ನಾವೂ ನೋಡುತ್ತಾ ಇದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ನೋಡಿದರೆ ಅವರ ಬಚ್ಚಲು ನೀರನ್ನು ಹೊರಗಡೆ ಬಿಟ್ಟು ಬಿಡುತ್ತಾರೆ ಅದು ಬೀದಿಗೆ ಹರಿದುಕೊಂಡು ಬರುತ್ತದೆ. ಹೀಗಾಗಿ ಎಲ್ಲೂ ಅಂಡರ್‌ಗ್ರೌಂಡ್ ಡ್ರೈನೇಜ್ ವ್ಯವಸ್ಥೆ ಇಲ್ಲದಾಗಿದೆ. ವಾಟರ್‌ಬೋರ್ಡ್‌ಗೆ ಈ ಬಗ್ಗೆ ಎಷ್ಟು ಹಣ ಕೊಡುತ್ತಾರೋ ಅವರು ದುಡ್ಡು ಖರ್ಚು

ಮಾಡಿ ಅಲ್ಲೆಲ್ಲಾ ಒಳಚರಂಡಿ ವ್ಯವಸ್ಥೆ ಮಾಡಬೇಕು. ಎಲ್ಲೆಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲವೊ ಅಲೆಲ್ಲಾ ಮಾಡುವ ಹಾಗೆ ಮಾಡಬೇಕು. ಅವರು ಆ ಮನೆಗಳಿಗೆ ನೀರು ಹೊರಗೆ ಹೋಗಲು ಒಂದು ಕನೆಕ್ಷನ್ ಕೂಡ ಕೊಟ್ಟಿಲ್ಲಾ. ಹರಿಜನ–ಗಿರಿಜನರು ಇರುವಂಥಾ ಕಡೆಗಳಲ್ಲಿ ಅವರ ಬಚ್ಚಲು ನೀರು ಹೋಗುವುದಕ್ಕೆ ಬೀದಿಯಲ್ಲಿರುವ ಡ್ರೈನೇಜ್‌ಗೆ ಒಂದು ಕನೆಕ್ಷನ್ ಕೊಟ್ಟರೆ ಆ ಪ್ರದೇಶ ಸ್ವಲ್ಪವಾದರೂ ಸ್ವಚ್ಛವಾಗುತ್ತದೆ. ಹೋದ ವರ್ಷ ನಾವು ಮದ್ರಾಸ್‌ಗೆ ಹೋಗಿ ಅವರು ಅಲ್ಲಿ ಯಾವ ರೀತಿ ಲೇಔಟ್ ಮಾಡಿದ್ದಾರೆ ಎನ್ನುವುದನ್ನು ನೋಡಿಕೊಂಡು ಬಂದೆವು. ಅವರು ಯಾವ ರೀತಿ ಮಾಡಿದ್ದಾರೆ ಎಂದರೆ ಅವರ ಸೈಟಿನ ಮಗ್ಗುಲಲ್ಲೇ ಒಂದು ಕಕ್ಕಸು ಮಾಡಿ ಅದಕ್ಕೆ ಒಂದು ಕನೆಕ್ಷನ್ ಕೊಟ್ಟು ಉಳಿದ ಸೈಟಿನಲ್ಲಿ ಮನೆ ಕಟ್ಟಿಕೊಳ್ಳುತ್ತಾರೆ ಅವರು ರೋಡ್ ಮಾಡಿದ ಮೇಲೆ ಖಾಲಿ ಸೈಟು ಕೊಡುವಾಗ ಕಕ್ಕಸು ಮತ್ತು ವಾಟರ್ ಕನೆಕ್ಷನ್ ಮಾಡಿದ ಮೇಲೆ ಅವರಿಗೆ ಆ ಸೈಟಿನಲ್ಲಿ ಮನೆಕಟ್ಟುವ ವ್ಯವಸ್ಥೆ ಮಾಡಿದ್ದಾರೆ, ೧೯೮೧ ರಲ್ಲಿ ಇದ್ದಂಥಾ ಆಗಿನ ಮಂತ್ರಿಗಳು ಮತ್ತು ಕಮೀಷನರು, ನಾವೂ ಸಹ ಮದ್ರಾಸ್‌ಗೆ ಹೋಗಿ ನೋಡಿಕೊಂಡು ಬಂದಮೇಲೆ ಅದೇ ರೀತಿ ಮಾಡಬೇಕೆಂದು ಸಲಹೆ ಕೊಟ್ಟಿದ್ದರೂ ಕೂಡ ಆ ಕೆಲಸ ಈವೊತ್ತಿನವರೆಗೂ ಆಗಿಲ್ಲ. ಆವಾಗ ಅವರು ಯೋಚನೆ ಮಾಡೋಣ ಎಂದು ಹೇಳಿದರು, ಆದರೆ ಈ ಕೆಲಸ ಈವೊತ್ತಿಗೂ ಆಗಿಲ್ಲಾ. ಗ್ರಾಂಟ್ ಕೊಟ್ಟಿರುವುದನ್ನು ಉಳಿಸುವುದರ ಕಡೆ ಗಮನ ಕೊಡುತ್ತಿದ್ದಾರೇ ವಿನಾ ಆ ಜನಕ್ಕೆ ಯಾವರೀತಿಯಿಂದಲಾದರೂ ಅನುಕೂಲ ಮಾಡಿಕೊಡಬೇಕೆನ್ನುವ ದೃಷ್ಟಿ ಹರಿಸಿಲ್ಲಾ. ಉಳಿದಿರುವ ಗ್ರ್ಯಾಂಟ್ ಅನು ವೆಚ್ಚ ಮಾಡಿದ್ದರೆ ಅವರಿಗೆ ಎಷ್ಟು ಅನುಕೂಲವಾಗುತ್ತಿತ್ತು. ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಬೆಂಗಳೂರಿನಲ್ಲಿ ಎಷ್ಟೋ ದಿವಸಗಳಿಂದ ಬೀದಿಗಳಲ್ಲಿ ಸರಿಯಾಗಿ ಸ್ವಚ್ಛತೆ ಇರಲಿಲ್ಲ. ಈಗಿನ ಕಮೀಷನರು ಬಂದ ಮೇಲೆ ಬೀದಿಗಳನ್ನು ಸ್ವಚ್ಛತೆ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ, ಪೌರ ಕಾರ್ಮಿಕರೇ ಆಗಲಿ ಇಂಜಿನೀಯರಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿರುವ ಗ್ಯಾಂಗ್‌ಮನ್ ಆಗಲಿ ಮೊದಲು ಹೆಚ್ಚು ಕೆಲಸ ಮಾಡುತ್ತಿರಲಿಲ್ಲ, ಈಗ ಅವರು ಹೆಚ್ಚು ಕೆಲಸ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಕಮೀಷನರು ಒಳ್ಳೆಯ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುತ್ತೇನೆ. ನಮ್ಮ ಸ್ನೇಹಿತರೊಬ್ಬರು ಹೇಳಿದ ಹಾಗೆ ಗುಡಿಸಿದ ಕಸವನ್ನು ಡಸ್ಟ್‌ಬಿನ್‌ಗೆ ಏನು ಹಾಕುತ್ತಿದ್ದರು, ಆ ಡೆಸ್ಟ್‌ಬಿನ್‌ನಲ್ಲಿ ವಾರಗಟ್ಟಲೆಯಾದರೂ ತೆಗೆದುಕೊಂಡು ಹೋಗುತ್ತಿರಲಿಲ್ಲ. ಸಾಮಾನ್ಯವಾಗಿ ಒತ್ತಡ ಇರತಕ್ಕಂಥಾ ಪ್ರದೇಶದಲ್ಲಿ ದಿನಕ್ಕೆ ಒಂದು ಸಲ ಅಲ್ಲ ಎರಡು ಸಲವಾದರೂ ಸ್ವಚ್ಛತೆ ಮಾಡಬೇಕು. ವಾರಗಟ್ಟಲೆಯಾದರೂ ಆ ಡಸ್ಟ್‌ಬಿನ್‌ನಲ್ಲಿ ಕಸವನ್ನು ಲಾರಿಗಳಲ್ಲಿ ತೆಗೆದುಕೊಂಡು ಹೋಗುತ್ತಿರಲಿಲ್ಲ, ಅವರನ್ನೇನಾದರೂ ಹೋಗಿ ಕೇಳಿದರೆ ಏನು ಹೇಳುತ್ತಿದ್ದರು ಎಂದರೆ ನಮಗೆ ಲಾರಿಗಳು ಸಿಕ್ಕುವುದಿಲ್ಲ, ಅವರು ೧೨೦ ಲಾರಿಗಳನ್ನು ಇಟ್ಟುಕೊಂಡಿದ್ದರೂ ಕೂಡ ರೋಡ್‌ನಲ್ಲಿರುವುದು ಕೇವಲ ೪೦–೫೦ ಲಾರಿಗಳು ಮಾತ್ರ ಇದೆ ಬಾಕಿದು ವರ್ಕ್‌ಷಾಪ್ ಅಲ್ಲಿ ಇಲ್ಲಿ ಇದೆ ಎಂದು ಹೇಳುತ್ತಿದ್ದರು. ಆ ಎರಡು ವರ್ಷದಲ್ಲಿ ಲಾರಿಗಳನ್ನು ಏತಕ್ಕೆ ಹೆಚ್ಚಿಗೆ ಮಾಡಬಾರದು ಎಂದು ನಾವು ಕೇಳಿದಾಗ ಚಾಸಿಸ್‌ಗೆ ಬೇಡಿಕೆ ಹೋದರೂ ಸಹ ಜಾಸ್ತಿ ಸಿಕ್ಕುವುದಿಲ್ಲ ಎಂದು ಹೇಳುತ್ತಿದ್ದರು. ಆ ಸಮಯದಲ್ಲಿ ಈ ಸಭೆಯಲ್ಲಿರುವ ನಮ್ಮ ಸ್ನೇಹಿತರಾದ ಆಳ್ವಅವರು ಅಧಿಕಾರಿಗಳೊಂದಿಗೆ ಒಂದು ಛಾಲೇಂಜ್ ಮಾಡಿದರು, ಏನೆಂದರೆ ನಿಮಗೆ ಬೇಕಾದರೆ ೩೦ ಛಾಸಿಸ್ ಕೊಡಿಸುತ್ತೇನೆ, ೩ ತಿಂಗಳು ಟೈಂ ಕೊಡಿ, ಆ ೩ ತಿಂಗಳೊಳಗೆ ಛಾಸಿಸ್ ಕೊಡಿಸುತ್ತೇನೆ ಈ ಬಗ್ಗೆ ಸರ್ಕಾರ ಒಂದು ಆರ್ಡರ್ ಹೊರಡಿಸಲಿ ಎಂದು ಹೇಳಿದರು. ಆವೊತ್ತಿನ ದಿವಸ ಆ ಸಭೆಯಲ್ಲಿ ಈ ಮಾತನ್ನು ಎತ್ತಿದ್ದು ಈವೊತ್ತಿನವರೆಗೂ ಅದರ ಬಗ್ಗೆ ಯಾವುದೂ ಕೆಲಸವಾಗಲಿಲ್ಲ, ಇವತ್ತು ಲಾರಿಗಳ ಮೂಲಕ ಇದನ್ನು ತೆಗೆದುಕೊಂಡು ಹೋಗುವುದಕ್ಕೆ ನಗರಸಭೆಯಲ್ಲಿ ಸಾಕಷ್ಟು ಲಾರಿಗಳು ಇಲ್ಲ, ಲಾರಿಗಳ ವ್ಯವಸ್ಥೆ ಇಲ್ಲದೇ ಹೋದರೆ ಈ ಕೆಲಸವನ್ನು ಕಂಟ್ರಾಕ್ಟರುಗಳಿಗೆ ಕೊಟ್ಟು ಕೊಳಚೆಯನ್ನು ತೆಗೆಯಿಸತಕ್ಕ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು. ಇಲ್ಲದೇ ಹೋದರೆ ಬೆಂಗಳೂರು ನಗರದಲ್ಲಿ ಮಳೆಗಾಲದಲ್ಲಿ ಜನ ಕೊಳಚೆ ನೀರಿನಲ್ಲಿ ಓಡಾಡುವುದನ್ನು ನಾವು ನೋಡುತ್ತಿದ್ದೇವೆ. ಕಸ ಗುಡಿಸುವವರೂ ಸಹ ಸರಿಯಾದ ರೀತಿಯಲ್ಲಿ ಗುಡಿಸುವುದಿಲ್ಲ ಮತ್ತು ರಾತ್ರಿ ವೇಳೆಯಲ್ಲಿ ಬೀದಿ ದೀಪಗಳು ಇಲ್ಲದೇ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಈಗ ಬೆಂಗಳೂರು ನಗರದಲ್ಲಿ ಹೊಸದಾಗಿ ಸೋಡಿಯಂ ವೇಪರ್ ಬಲ್ಬ್‌ನ್ನು ಉಪಯೋಗ ಮಾಡುತ್ತಿದ್ದಾರೆ. ಸೋಡಿಯಂ ವೇಪರ್ ಬಲ್ಬ್‌ನ್ನು ಉಪಯೋಗ ಮಾಡುವುದಕ್ಕೆ ಒಂದು ಪ್ರೊಸೀಜರನ್ನು ಸರ್ಕಾರದವರು ಇಟ್ಟುಕೊಂಡಿರುತ್ತಾರೆ. ಸೋಡಿಯಂ ವೇಪರ್ ಬಲ್ಬ್‌ನ ಬೆಲೆ ಮೂರು ಸಾವಿರ ರೂಪಾಯಿಗಳವರೆಗೆ ಇದು ಬೆಲೆಯಾಗುತ್ತದೆ. ಇದನ್ನು ಮುಖ್ಯವಾಗಿ ಮಹಾತ್ಮ ಗಾಂಧಿ ಸರ್ಕಲ್ ರಿಂಗ್ ವುಡ್ ಸರ್ಕಲ್ ಮುಂತಾದ

ಮುಖ್ಯ ಸರ್ಕಲ್‌ಗಳಲ್ಲಿ ಹಾಕಬೇಕು ಎಂದು ಮಾಡಿದ್ದಾರೆ. ಈ ಬಲ್ಬುಗಳನ್ನು ಏಕೆ ಉಪಯೋಗ ಮಾಡಬೇಕು ಎಂದರೆ ಇವು ಒಳ್ಳೆಯ ಬೆಳಕನ್ನು ಕೊಡುವುದಲ್ಲದೆ ಬಹಳ ಕಾಲ ಬಾಳಿಕೆ ಬರುತ್ತವೆಂದು ಹೇಳುತ್ತಾರೆ, ಅದರಂತೆ ಎಲೆಕ್ಟ್ರಿಸಿಟಿ ಬೋರ್ಡಿನವರು ಈ ಬಲ್ಬುಗಳನ್ನು ಮುಖ್ಯವಾದ ಕಡೆಗಳಲ್ಲಿ ಮಾತ್ರ ಹಾಕಬೇಕು. ಆದರೆ ಕೆಲವು ಕಡೆಗಳಲ್ಲಿ ಇವರು ಹಾಕುವಂಥ ಬಲ್ಬುಗಳು ೧೫ ದಿವಸದಲ್ಲಿಯೇ ಬರ್ನ್ ಆಗಿ ಹೋಗುತ್ತವೆ, ಮತ್ತೆ ಹೊಸ ಬಲ್ಬನ್ನು ಹಾಕಬೇಕಾದರೆ ಬಹಳ ದಿವಸ ತೆಗೆದುಕೊಳ್ಳುತ್ತಾರೆ. ಹಿಂದೆ ಇರುವಂಥ ಎಲ್ಲಾ ಬೀದಿ ದೀಪಗಳನ್ನು ಟ್ಯೂಬ್ ಲೈಟ್‌ಗಳನ್ನು ಹಾಕಬೇಕು ಎಂದು ಒಂದು ತೀರ್ಮಾನ ತೆಗೆದುಕೊಂಡು ಇವತ್ತಿಗೂ ಇದರ ಬಗ್ಗೆ ಸರಿಯಾದಂಥ ಕೆಲಸ ಆಗಿಲ್ಲ. ಮತ್ತೆ ಇರುವಂಥ ಬಲ್ಬುಗಳನ್ನು ರೀಪ್ಲೇಸ್ ಮಾಡಬೇಕಾದರೆ ಇಲ್ಲಿ ಎರಡು ರೀತಿಯ ಆಡಳಿತ ಇರುವುದರಿಂದ ಸರಿಯಾದ ಕೆಲಸ ನಡೆಯುತ್ತಿಲ್ಲ. ಈ ಬಲ್ಬುಗಳನ್ನು ಕಾರ್ಪೊರೇಷನ್‌ನವರು ಹಾಕಬೇಕೋ ಅಥವಾ ಕೆಇಬಿಯವರು ಹಾಕಬೇಕೋ ಎನ್ನುವುದು ಇದೆ. ಕೆಲವು ಸಂದರ್ಭದಲ್ಲಿ ಕಾರ್ಪೊರೇಷನ್‌ನವರು ಬಲ್ಬನ್ನು ಕೊಟ್ಟರೆ ಅದನ್ನು ಕೆಇಬಿಯ ವರು ತೆಗೆದುಕೊಂಡು ಹೋಗಿ ಹಾಕುವಂಥಾದ್ದು ಪದ್ಧತಿ ಇದೆ. ಇಲ್ಲಿ ಸರಿಯಾಗಿ ಕೋ-ಆರ್ಡಿನೇಷನ್ ಇಲ್ಲದೆ ಇದ್ದುದರಿಂದ ಈ ಕೆಲಸವೂ ಸರಿಯಾಗಿ ಆಗದೆ ಜನರಿಗೆ ವಿಪರೀತ ತೊಂದರೆ ಯಾಗುತ್ತಿದೆ ಎನ್ನುವುದನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಆದ್ದರಿಂದ ಸರ್ಕಾರ ದವರು ಈಡ್ಯೂಯಲ್ ಕಂಟ್ರೋಲ್‌ನ್ನು ತಪ್ಪಿಸಿ ಬೀದಿ ದೀಪಗಳನ್ನು ಸರಿಯಾದ ರೀತಿಯಲ್ಲಿ ಹಾಕು ವಂಥ ವ್ಯವಸ್ಥೆ ಮಾಡಬೇಕು ಎಂದು ನನ್ನ ಸಲಹೆ. ಹೋದ ವರ್ಷ ನಾನು ಈ ವಿಷಯದ ಬಗ್ಗೆ ಸಭೆಯ ಗಮನಕ್ಕೆ ತಂದಾಗ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳು ತ್ತೇನೆಂದು ಹೇಳಿದ್ದರು, ಆದರೆ ಇದರ ಕಡೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಆಮೇಲೆ, ಇಲ್ಲಿ ನಡೆಯಬೇಕಾದ ಕೆಲಸ ಕಾರ್ಯಗಳಿಗೆ ಎಲ್ಲವನ್ನೂ ಸಹ ಕರ್ನಾಟಕ ಕನ್ಸ್ಟ್ರಕ್ಷನ್ ಕಂಪನಿಯವರಿಗೆ ಕೊಟ್ಟಿರುತ್ತಾರೆ. ಇವರಿಗೆ ಕೆಲಸಗಳನ್ನು ಕೊಟ್ಟಿರುವ ಉದ್ದೇಶ ಎಂದರೆ, ಒಳ್ಳೆಯ ಕೆಲಸ ಆಗಬೇಕು ಮತ್ತು ಸರ್ಕಾರದ ಹಣ ಲೋಪವಾಗಬಾರದು ಎನ್ನುವುದು. ಆದರೆ ಇವರು ಏನು ಮಾಡುತ್ತಾರೆಂದರೆ, ಇವರಿಗೆ ಸಾಕಷ್ಟು ಕೆಲಸಗಳು ಇರುವುದರಿಂದ ಬೇರೆ ಕಂಟ್ರಾಕ್ಟರುಗಳಿಗೆ ಈ ಕೆಲಸಗಳನ್ನು ಕೊಟ್ಟು ಅವರ ಕೈಯಿಂದ ಮಾಡಿಸುತ್ತಾರೆ. ಈ ರೀತಿಯಾಗಿ ಕೆಲಸಗಳನ್ನು ಮಾಡುವಾಗ ಅವರು ಓವರ್ ಹೆಡ್ ಚಾರ್ಜಸ್‌ನ್ನು ಕ್ಲೇಮ್ ಮಾಡಿ ಸರ್ಕಾರದಿಂದ ಹಣ ಪಡೆಯುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಅವರ ಕೈಯಲ್ಲಿ ಎಷ್ಟು ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿದೆಯೋ ಅಷ್ಟು ಕೆಲಸಗಳನ್ನು ಮಾಡು ವುದಕ್ಕೆ ತಾವು ಅವರಿಗೆ ಅವಕಾಶ ಕೊಟ್ಟು ಬೇರೆ ಕೆಲಸಗಳನ್ನು ಟೆಂಡರ್ ಕರೆದು ಏಕೆ ಕೊಡಬಾರದು ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಕೆಲಸಗಳು ಸಮಯಕ್ಕೆ ಸರಿಯಾಗಿ ನಡೆಯದೆ ವರ್ಷಾನುಗಟ್ಟಲೆ ತಡವಾಗಿ ಕೆಲಸದ ಎಸ್ಟಿಮೇಟ್ ಸಹ ಜಾಸ್ತಿಯಾಗಿ ಸರ್ಕಾರ ವಿನಾಕಾರಣ ಹೆಚ್ಚಿನ ಹಣವನ್ನು ಕೊಡ ಬೇಕಾಗಿ ಬರುತ್ತದೆ. ಆದ್ದರಿಂದ ಕನ್ಸ್ಟ್ರಕ್ಷನ್ ಕಂಪನಿಯವರಿಂದ ಎಷ್ಟು ಕೆಲಸವನ್ನು ಮಾಡುವುದಕ್ಕೆ ಸಾಧ್ಯವೋ ಅಷ್ಟು ಅವರಿಗೆ ಕೊಟ್ಟು ಮಿಕ್ಕಿದ ಕೆಲಸಗಳನ್ನು ಬೇರೆಯವರಿಗೆ ಕೊಟ್ಟು ಒಳ್ಳೆಯ ಕೆಲಸ ಗಳನ್ನು ಮಾಡಿಸಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಮಾಡಿದಂಥ ಕೆಲಸಗಳನ್ನು ಇಂಜಿನಿಯರ್ಸ್ ಸೂಪರ್‌ವೈಸ್ ಮಾಡಿ ನಂತರ ಇವರಿಗೆ ಹಣ ಕೊಡುವಂಥ ವ್ಯವಸ್ಥೆ ಮಾಡಿದರೆ ಒಳ್ಳೆಯ ಕೆಲಸಗಳಾ ಗುತ್ತವೆಂದು ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ೩-೪ ಕೆಲಸಗಳಿಗೆ ಅಸ್ತಿಭಾರ ವನ್ನು ಹಾಕಿದ್ದಾರೆ. ಈ ಕೆಲಸಗಳು ಒಂದೂವರೆ ವರ್ಷವಾದರೂ ಇನ್ನೂ ಕಂಪ್ಲೀಟ್ ಆಗಿಲ್ಲ. ಈ ರೀತಿಯಾದರೆ ಮಂತ್ರಿಗಳು ಕೆಲಸಗಳಿಗೆ ಅಸ್ತಿಭಾರವನ್ನು ಹಾಕುವುದಷ್ಟೇ ಆಗುತ್ತದೇ ಹೊರತು ಕೆಲಸಗಳು ನಡೆಯುವುದಿಲ್ಲ. ಆದ್ದರಿಂದ ಈ ವಿಚಾರಗಳ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಗಮನ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಆಮೇಲೆ, ಗ್ರಾಮಗಳ ಕೆಲಸ ಹಿಂದೆ ಗ್ರಾಮ ಪಂಚಾಯತಿಯ ಮಟ್ಟದಲ್ಲಿ, ತಾಲ್ಲೂಕು ಬೋರ್ಡು ಗಳು ಇದ್ದಾಗ ಅನೇಕ ಕೆಲಸ ಕಾರ್ಯಗಳು ನಡೆಯುತ್ತಿದ್ದು ಈಗ ಇವು ಮುನಿಸಿಪಾಲಿಟಿಗೆ ಸೇರಿದ ಮೇಲೆ ಎಷ್ಟೂ ಕೆಲಸಗಳೂ ನಡೆಯುತ್ತಿಲ್ಲ. ಇಂಥ ಸುಮಾರು ೬೪ ಗ್ರಾಮಗಳನ್ನು ಬೆಂಗಳೂರು ನಗರಸಭೆಯವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡ ಮೇಲೆ ಇವತ್ತು ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಒಳಚರಂಡಿಯ ವ್ಯವಸ್ಥೆ ಇಲ್ಲ, ಈ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಒಳಚರಂಡಿಯ ವ್ಯವಸ್ಥೆಗಾಗಿ ಎಸ್ಟಿಮೇಟ್ ತಯಾರಾಗಿದ್ದು ಇದುವರೆಗೂ ಈ ಕೆಲಸ ಗಳನ್ನು ಕಾರ್ಪೊರೇಷನ್‌ನವರು ತೆಗೆದುಕೊಂಡಿಲ್ಲ. ಹೋದ ವರ್ಷ ನಾವು ಗಲಾಟೆ ಮಾಡಿದ ಮೇಲೆ

ಇಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಸುಮಾರು ೨೪ ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿಸಿ ಪೈಪುಗಳನ್ನು ಹಾಕಿದರು. ಈ ರೀತಿಯಲ್ಲಿ ಇನ್ನು ಎಷ್ಟು ಗ್ರಾಮಗಳಿಗೆ ನೀರಿನ ವ್ಯವಸ್ಥೆ ಆಗಬೇಕಾಗಿದೆಯೋ ಗೊತ್ತಿಲ್ಲ. ಬೆಂಗಳೂರು ನೀರು ಸರಬರಾಜು ಮಂಡಲಿಯವರು ಕಾವೇರಿ ಸೆಕೆಂಡ್ ಸ್ಟೇಜ್‌ನಿಂದ ಈ ಎಲ್ಲಾ ಹಳ್ಳಿಗಳಿಗೆ ನೀರನ್ನು ಕೊಡುತ್ತೇವೆಂದು ಹೇಳಿದ್ದರು. ಕಳೆದ ಮೂರು ನಾಲ್ಕು ತಿಂಗಳಿಂದ ನಾಲ್ಕು ಮಿಲಿಯನ್ ಗ್ಯಾಲನ್ ನೀರು ಹೆಚ್ಚಾಗಿ ಬಂದಿದ್ದರಿಂದ ಬೆಂಗಳೂರು ನಗರದ ಪರಿಸ್ಥಿತಿ ಉತ್ತಮವಾಗಿದೆ. ಈಗ ಸರ್ಕಾರದವರು ಯಾವ ಯಾವ ಪ್ರದೇಶದಲ್ಲಿ ನೀರಿನ ಅನಾನುಕೂಲತೆ ಇದೆಯೆಂದು ನೋಡಿ ಅಂಥ ಸ್ಥಳಗಳಿಗೆ ಕೂಡಲೇ ನೀರು ಕೊಡುವ ವ್ಯವಸ್ಥೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಒಳಚರಂಡಿಯ ವ್ಯವಸ್ಥೆಯ ಬಗ್ಗೆ ಕಾರ್ಪೊರೇಷನ್‌ನವರು ಗ್ರಾಂಟ್ಸ್ ಕೊಡಬೇಕೋ ಏನೋ ಗೊತ್ತಿಲ್ಲ. ಕೊಡುವ ಹಾಗೆ ಇದ್ದರೆ ಜಾಗ್ರತೆಯಾಗಿ ಈ ಕೆಲಸಗಳಿಗೆ ಹಣ ಕೊಡಿಸುವ ವ್ಯವಸ್ಥೆಯನ್ನು ತಾವು ಮಾಡಬೇಕು ಎಂದು ನಾನು ಸೂಚನೆ ಮಾಡುತ್ತೇನೆ. ಇಲ್ಲದೇ ಹೋದರೆ ಯಥಾಪ್ರಕಾರ ನೀರು ಸರಿಯಾದ ರೀತಿಯಲ್ಲಿ ಹೋಗದೆ ಇದ್ದರೆ ರಸ್ತೆಯಲ್ಲಿ ನಿಂತು, ರಸ್ತೆಯ ಮೋರಿಗಳಲ್ಲಿ ಹೋಗುವುದು ಜಾಸ್ತಿಯಾಗುತ್ತದೆ. ಆದ್ದರಿಂದ ಈ ಕೆಲಸವನ್ನು ತಾವು ಆದ್ಯತೆಯ ಮೇಲೆ ಮಾಡಬೇಕು ಎಂದು ನಾನು ತಮ್ಮಲ್ಲಿ ಒತ್ತಾಯ ಮಾಡಿ ತಿಳಿಸುತ್ತೇನೆ.

ಮತ್ತೆ ಕಾವೇರಿ ಎರಡನೆಯ ಮತ್ತು ಮೂರನೆಯ ಹಂತದ ಕೆಲಸ ಮುಗಿದು ಹೋದರೆ ಬೆಂಗಳೂರಿನ ನಾಗರೀಕರಿಗೆ ಕುಡಿಯುವ ನೀರಿನ ಅಭಾವ ಕಡಿಮೆಯಾಗಬಹುದು ಈಗ ನಡೆಯುತ್ತಿರುವ ರೇಟಿನಲ್ಲಿ ಕೆಲಸಗಳು ನಡೆಯುವುದಾದರೆ ನೀರನ್ನು ನಿಗದಿ ಮಾಡಿದ ಸಮಯಕ್ಕಿಂತ ಮುಂಚಿತವಾಗಿಯೇ ಜನರಿಗೆ ಕೊಡುವುದಕ್ಕೆ ಸಾಧ್ಯತೆ ಇದೆ, ಆದರೆ ಈ ದಿಸೆಯಲ್ಲಿ ಕೆಲಸಗಳು ಜಾಗ್ರತೆಯಾಗಿ ಆಗಬೇಕಾಗಿದೆ. ಕಾವೇರಿಯ ನೀರು ಬಂದರೂ ಸಹ ಹೊರಗಡೆ ನಗರಕ್ಕೆ ಸೇರಿರತಕ್ಕ ಹಳ್ಳಿಗಳಿಗೆ ನೀರನ್ನು ಕೊಡುವುದು ಸಾಧ್ಯವಾಗುತ್ತದೆಯೇ ಎಂಬ ಶಂಕೆ ಇನ್ನೂ ಇದ್ದೇ ಇದೆ. ಏಕೆಂದರೆ, ಬೆಂಗಳೂರು ಕೈಗಾರಿಕಾ ದೃಷ್ಟಿಯಿಂದ ದಿನೇ ದಿನೇ ಬೆಳೆಯುತ್ತಿದ್ದು ಈ ಕೈಗಾರಿಕೆಗಳಿಗೆ ನೀರನ್ನು ಒದಗಿಸುವ ಕಾರ್ಯವನ್ನು ನಾವು ಮಾಡಬೇಕಾಗಿದೆ. ಅಲ್ಲದೆ ಬಿಡಿಎದವರು ಇನ್ನೂ ಹೊಸ ಹೊಸದಾಗಿ ಲೇಔಟ್ಸ್‌ಗಳನ್ನು ಮಾಡಿಕೊಂಡು ಹೋಗುತ್ತಿರುವುದರಿಂದ ಅಲ್ಲಿಯ ನಿವಾಸಿಗಳಿಗೂ ನೀರನ್ನು ಕೊಡುವ ಜವಾಬ್ದಾರಿಯನ್ನು ಹೊರಬೇಕಾಗಿರುತ್ತದೆ. ಹೊಸ ಹೊಸ ಲೇಔಟ್ಸ್‌ಗಳಿಂದ ಜನರಿಗೆ ವಸತಿಯನ್ನೇನೋ ಕೊಡುವುದಕ್ಕೆ ಅನುಕೂಲವಾಗಬಹುದು ಆದರೆ ನೀರು ಸರಬರಾಜು ಮತ್ತು ಇತರ ಅನುಕೂಲತೆಗಳನ್ನು ಒದಗಿಸುವುದು ಕಷ್ಟದ ಕೆಲಸವಾಗುತ್ತದೆ. ಈಗ ಬೆಂಗಳೂರಿಗೆ ಹೊರಗಡೆಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಇಲ್ಲಿಯೇ ನೆಲಸತಕ್ಕದ್ದು ಜಾಸ್ತಿಯಾಗಿದೆ. ಹೊಸ ಲೇಔಟ್ಸ್‌ಗಳಲ್ಲಿ ಎರಡು ಲಕ್ಷ ಮೂರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲು ಇಟ್ಟಂಥ ಸ್ಕೀಂಗಳು ಇವರಿಗೆ ಹೆಚ್ಚಿಗೆ ಉಪಯೋಗವಾಗುತ್ತಿವೆ. ಇದರಿಂದ ಬೆಂಗಳೂರಿನ ಜನಸಂಖ್ಯೆಯೂ ಹೆಚ್ಚಾಗಿ ಇರುವಂಥ ವಸತಿ ಸೌಕರ್ಯ ಕಡಿಮೆಯೆಂದು ಕಾಣುತ್ತದೆ. ಆದರೆ ಕಾರ್ಪೊರೇಷನ್‌ಗೆ ಸೇರಿದಂಥ ಹಳ್ಳಿಗಳ ಅಭಿವೃದ್ಧಿಯ ಕಡೆ ಹೆಚ್ಚಿನ ಶ್ರಮ ತೆಗೆದುಕೊಳ್ಳಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಈ ನೀರಿನ ವ್ಯವಸ್ಥೆಯನ್ನು ಮಾಡುವಾಗ ಇದನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕು; ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ. ಈ ಕೊಳಚೆ ನಿರ್ಮೂಲನೆ ಮಾಡತಕ್ಕಂಥಾದ್ದು ಮೂರನೆಯ ವಿಚಾರ. ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಲಿ ೧೯೭೪ರಲ್ಲಿ ಪ್ರಾರಂಭವಾಗಿ ಅದು ಬೆಂಗಳೂರು ನಗರದಲ್ಲಿ ಆ ಬಗ್ಗೆ ೩ ಸ್ಕೀಮ್‌ಗಳನ್ನು ತೆಗೆದುಕೊಂಡು ೩ ವರ್ಷವಾಯಿತು. ಆದರೆ ಇದುವರೆಗೆ ಏನೇನೂ ಕೆಲಸಗಳು ಆಗಲಿಲ್ಲ. ಈ ಹುಡ್ಕೋ ಸ್ಕೀಮ್‌ನಲ್ಲಿ ಆ ಜನರಿಗೆ ಮನೆ ಕಟ್ಟಿಕೊಡಲು ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರದವರು ತರುತ್ತಿದ್ದಾರೆ. ಈಗ ಅಲ್ಲಿ ೩-೪ ಸ್ಕೀಮ್‌ಗಳನ್ನು ಹಾಕಿಕೊಂಡು ಏನು ಕೆಲಸ ಮಾಡುತ್ತಿದ್ದಾರೆ ಅದಕ್ಕೆ ಸರಿಯಾದ ಸಲಕರಣೆಗಳು ಇಲ್ಲದೇ ಆ ಕೆಲಸವೆಲ್ಲಾ ನಿಧಾನಗತಿಯಲ್ಲಿ ನಡೆಯುತ್ತಿವೆ ಎಂದು ತಿಳಿದು ಬಂದಿದೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಗಮನ ಕೊಡಬೇಕು. ನನ್ನ ಕ್ಷೇತ್ರದಲ್ಲಿ ಒಂದು ಡ್ರೈನೇಜ್ ವ್ಯವಸ್ಥೆ ಏನು ಮಾಡಿದ್ದಾರೆ ಅದು ಸರಿಯಾದ ಸ್ಥಿತಿಯಲ್ಲಿ ಇಲ್ಲ. ಅಲ್ಲಿ ಮಕ್ಕಳು ಮರಿಗಳು ಬಿದ್ದು ಸಾಯುವ ಪರಿಸ್ಥಿತಿ ಇದೆ. ಲಾಲ್‌ಬಾಗ್‌ಸ ಸಿದ್ಧಾಪುರದಲ್ಲಿ ಮಾಡಿರುವ ವ್ಯವಸ್ಥೆ ಕೂಡ ತುಂಬಾ ಶೋಚನೀಯ ಪರಿಸ್ಥಿತಿಯಲ್ಲಿದೆ. ನನ್ನ ಕ್ಷೇತ್ರದಲ್ಲಿ ಗುಡ್ಡೆ ಆಂಜನೇಯ ಕೊಳಚೆ ಪ್ರದೇಶ ಎಂದು ಇದೆ. ಆ ಸ್ಥಳವನ್ನು ಖಾಲಿ ಮಾಡಿಸುವವರೆಗೆ ಜನ ಸುಮ್ಮನಿದ್ದರು. ಆಮೇಲೆ ಯಾರೋ ಹೋಗಿ

ಹೈಕೋರ್ಟ್‌ನಿಂದ ಸ್ಟೇ ತೆಗೆದುಕೊಂಡು ಬಂದರು. ಈಗಲೂ ಅಲ್ಲಿ ಅದು ಹಾಗೆಯೇ ಇದೆ. ಅದನ್ನು ವೆಕೇಟ್ ಮಾಡಿಸದೇ ಇರುವುದಕ್ಕೆ ಕಾರಣ ಏನು ಎಂಬುದನ್ನು ತಿಳಿಸಬೇಕು. ಹುಡ್ಕೋದಿಂದ ಹಣ ತಂದಿದ್ದರೂ ಕೂಡ ಮನೆ ಕಟ್ಟತಕ್ಕಂಥ ಕೆಲಸ ಅಲ್ಲಿ ಹಾಗೆಯೇ ನಿಂತಿದೆ. ಅದರಲ್ಲಿ ಒಂದು ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತಾ ಇಲ್ಲ. ಅದರಲ್ಲಿ ಅನೇಕ ಸ್ಕೀಮ್‌ಗಳನ್ನು ಸರ್ಕಾರದವರು ಹಾಕಿಕೊಂಡಿದ್ದಾರೆ. ಆ ಕೆಲಸವಾಗದೇ ಇರುವುದು ತುಂಬಾ ಶೋಚನೀಯ. ಈ ಮನೆ ಕಟ್ಟತಕ್ಕಂಥ ಕೆಲಸ ಆಗದೇ ಅಲ್ಲಿ ಕೊಳಚೆ ಪ್ರದೇಶಗಳಲ್ಲಿ ಜನರನ್ನು ಖಾಲಿ ಮಾಡಿಸಿದರೆ ಅದರಿಂದ ಜನರಿಗೆ ತುಂಬಾ ತೊಂದರೆಯಾಗುತ್ತದೆ. ಒಂದು ಕಡೆ ಆ ಗುಡಿಸಲಿನಲ್ಲಿ ಇರತಕ್ಕಂಥ ಜನರನ್ನು ಹೊರಕ್ಕೆ ಹಾಕುತ್ತಾರೆ ; ಇಲ್ಲಿ ಈ ಕೆಲಸವೂ ಆಗುವುದಿಲ್ಲ. ಆ ಜನ ತುಂಬಾ ತೊಂದರೆ ಪಡುತ್ತಾರೆ. ಇಂತಹ ಒಂದು ಶೋಚನೀಯ ಪರಿಸ್ಥಿತಿ ಉಂಟಾಗಬಾರದು. ಈ ವಿಚಾರವನ್ನು ನಾನು ಈಗಾಗಲೇ ಮಾನ್ಯ ಮಂತ್ರಿಯವರಿಗೂ ಮತ್ತು ಮಾನ್ಯ ಮುಖ್ಯಮಂತ್ರಿಯವರಿಗೂ ತಿಳಿಸಿದ್ದೇನೆ. ಬೆಂಗಳೂರು ನಗರದಲ್ಲಿ ಶೇಕಡ ೨೦–೨೫ ರಷ್ಟು ಜನ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ಆ ಜನರ ಜೀವನ ತುಂಬಾ ಕೆಳಮಟ್ಟದಲ್ಲಿದೆ. ಬೆಂಗಳೂರು ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಧ್ಯೆ ಮಧ್ಯೆ ಈ ಕೊಳಚೆ ಪ್ರದೇಶಗಳು ಇರುವುದರಿಂದ ಅಲ್ಲಿರತಕ್ಕಂಥ ನಾಗರೀಕರಿಗೂ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಕೂಡ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರಿಗೆ ತೊಂದರೆಯಾಗದಿರಲೆಂದು ಬಿ.ಡಿ.ಎ. ರವರು ಅನೇಕ ಸ್ಕೀಮ್‌ಗಳನ್ನು ಮಾಡಿ ಲೇಔಟ್‌ಗಳನ್ನು ಮಾಡುತ್ತಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ವಿಚಾರದಲ್ಲಿ ಸ್ಲಂಕ್ಲಿಯರೆನ್ಸ್ ಬೋರ್ಡ್‌ನವರಿಗೆ ಸುಮಾರು ೨೫೦ ಎಕರೆಯಷ್ಟು ಭೂಮಿಯನ್ನು ಕೊಡುತ್ತೇವೆ ಎಂದು ಬಿ.ಡಿ.ಎ. ಚೇರ್ಮನ್‌ರವರು ಹೇಳುತ್ತಿದ್ದಾರೆ. ಆದರೆ ಅದನ್ನು ತೆಗೆದುಕೊಂಡು ಅಭಿವೃದ್ಧಿ ಮಾಡುವುದಕ್ಕೆ ಬೋರ್ಡ್‌ನವರ ಕೈಯಲ್ಲಿ ಆಗುತ್ತಾ ಇಲ್ಲ. ಈವತ್ತು ಬಿ.ಡಿ.ಎ. ರವರು ಸುಮಾರು ೩೦ ಎಕರೆಯ ಪ್ರದೇಶದಲ್ಲಿ ೧೦೦೦ ನಿವೇಶನಗಳ ಒಂದು ಲೇಔಟನ್ನು ಮಾಡಿದ್ದಾರೆ. ಅದರಂತೆಯೇ ಈ ೨೫೦ ಎಕರೆಗಳನ್ನೂ ಅವರೇ ತೆಗೆದುಕೊಂಡು ಲೇಔಟ್ ಮಾಡಿ, ಕೊಳಚೆ ಪ್ರದೇಶದಲ್ಲಿರತಕ್ಕಂಥ ಜನರಿಗೆ ಮೊದಲು ಅದರಲ್ಲಿ ಆದ್ಯತೆಯನ್ನು ಕೊಟ್ಟರೆ ಬೆಂಗಳೂರು ನಗರ ಇನ್ನೂ ಹೆಚ್ಚಿನ ರೀತಿಯಲ್ಲಿ ಶುದ್ಧಿಯಾಗುತ್ತದೆ. ಮತ್ತು ಈ ಕೊಳಚೆ ಪ್ರದೇಶಗಳಲ್ಲಿ ಹೆಚ್ಚಾಗಿ ಹರಿಜನ ಗಿರಿಜನರು ಮತ್ತು ಅಲ್ಪಸಂಖ್ಯಾತರು ಏನಿದ್ದಾರೆ ಅವರಿಗೆಲ್ಲಾ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಗಮನಕೊಡಬೇಕೆಂದು ಹೇಳುತ್ತೇನೆ. ಆ ಜನಕ್ಕೆ ಮೊದಲು ಆದ್ಯತೆಯನ್ನು ಕೊಟ್ಟು ಆಮೇಲೆ ಬೆಂಗಳೂರಿನ ಹೊರಗಡೆ ಇರತಕ್ಕಂಥ ಜನಕ್ಕೆ ಆದ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ಅಲ್ಲದೇ ೪೮೦೦ ರೂಪಾಯಿಗಳ ಒಳಗೆ ಆದಾಯವಿರತಕ್ಕಂಥ ಜನ ಯಾರಿದ್ದಾರೆ, ಎಕನಾಮಿಕಲಿ ವೀಕರ್‌ಸೆಕ್ಷನ್ಸ್ ಯಾರಿರುತ್ತಾರೆ ಅಂತಹ ಜನರಿಗೂ ಆದ್ಯತೆಯನ್ನು ಕೊಡಬೇಕು. ಇದರಲ್ಲಿ ಇನ್ನೊಂದು ವಿಚಾರ ಏನಿದೆ ಎಂದರೆ ಬೆಂಗಳೂರಿನ ಗ್ರಾಮಾಂತರದಲ್ಲಿ ಗ್ರಾಮಗಳ ಸುತ್ತಮುತ್ತ ಇರತಕ್ಕಂಥ ಜಮೀನುಗಳನ್ನು ಅಕ್ವೈರ್ ಮಾಡಿಕೊಂಡಿರುತ್ತಾರೆ. ಅವರೂ ಕೂಡ ಇವತ್ತು ಸೈಟ್‌ಗಾಗಿ ಅಂಗಲಾಚುತ್ತಿದ್ದಾರೆ. ಅವರಿಗೂ ಸೈಟ್ ಕೊಡುವುದರಲ್ಲಿ ಮತ್ತು ಮನೆ ಕಟ್ಟಿಕೊಡುವುದರಲ್ಲಿ ಆದ್ಯತೆಯನ್ನು ಕೊಡಬೇಕು ಎಂದು ನಾನು ಹೇಳಬಯಸುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಈ ದಿಶೆಯಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ನಗರ ಸಭೆಗಳು ಕೆಲಸ ಮಾಡುತ್ತಿವೆ. ಇವತ್ತು ಈ ಬಿ.ಡಿ.ಎ ಕೆಳಗೆ ೬೪ ಕೊಳಚೆ ಪ್ರದೇಶಗಳು ಬರುತ್ತವೆ ; ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಸುಮಾರು ೬೪ ಕೊಳವೆ ಪ್ರದೇಶಗಳು ಬರುತ್ತವೆ. ಹಾಗೆಯೇ ಸುಮಾರು ೨೫೦ ಕೊಳಚೆ ಪ್ರದೇಶಗಳು ಈ ಕೊಳಚೆ ನಿರ್ಮೂಲನಾ ಮಂಡಲಿಯ ಕೆಳಗೆ ಬರುತ್ತವೆ. ಮೊದಲು ಈ ಎಲ್ಲಾ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಪ್ರಯತ್ನ ಮಾಡಬೇಕು. ಆಮೇಲೆ ಬೇರೆ ಬೇರೆ ಯೋಜನೆಗಳನ್ನು ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಬೆಂಗಳೂರು ನಗರದ ಒಳಗಡೆ ಇರತಕ್ಕಂಥ ಕೆಲವಾರು ಕೊಳಚೆ ಪ್ರದೇಶಗಳನ್ನು ಮೊದಲು ಅಭಿವೃದ್ಧಿ ಮಾಡಬೇಕು. ಹಾಗೆ ಅಭಿವೃದ್ಧಿ ಮಾಡತಕ್ಕಂಥ ದಿಶೆಯಲ್ಲಿ ಮಂಡಲಿಯವರಿಗೆ ಬೇಕಾದ ಸಾಧನ ಸಲಕರಣೆಗಳನ್ನು ಕೊಡಬೇಕು. ಅದನ್ನೆಲ್ಲಾ ಕೊಡದೇ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ. ಬೆಂಗಳೂರು ನಗರದ ಒಳಗಡೆ ಇರತಕ್ಕಂಥ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿ ಮಾಡಬೇಕಾದರೆ ಅಲ್ಲಿರತಕ್ಕಂಥ ಗುಡಿಸಲುಗಳನ್ನು ಹೊರಗಡೆಗೆ ಷಿಫ್ಟ್ ಮಾಡಬೇಕಾಗುತ್ತದೆ. ಅವರನ್ನು ಹೊರಗಡೆಗೆ ಕಳಿಸುವುದಕ್ಕೆ ಮೊದಲು ಬೇರೆ ಕಡೆಗಳಲ್ಲಿ ಲೇಔಟ್‌ಗಳನ್ನು ಮಾಡಿ ಆನಂತರ ಅಲ್ಲಿಗೆ

ಅವರನ್ನು ಷಿಫ್ಟ್ ಮಾಡಬೇಕು. ಬೆಂಗಳೂರು ನಗರದ ಒಳಗಡೆ ಖಾಲಿ ಬೀಳತಕ್ಕಂಥ ಪ್ರದೇಶವನ್ನು ಅಭಿವೃದ್ಧಿಪಡಿಸಿ ಅದನ್ನು ಬೇರೆ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಬರುತ್ತದೆ. ಈ ಒಂದು ವಿಚಾರದ ಬಗ್ಗೆ ಮಾನ್ಯ ಮಂತ್ರಿಯವರು ವಿಚಾರ ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಈ ಕರ್ನಾಟಕ ಗೃಹನಿರ್ಮಾಣ ಮಂಡಳಿಯ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಈ ಕರ್ನಾಟಕ ಗೃಹನಿರ್ಮಾಣ ಮಂಡಲಿಯವರು ಹಿಂದೆ ಬೆಂಗಳೂರು ನಗರದಲ್ಲಿ ೨-೩ ಕಡೆಗಳಲ್ಲಿ ಈ ಲೋ ಇನ್‌ಕಂ ಗ್ರೂಪ್‌ನವರಿಗೆ ಕಾಲೋನಿಗಳ ರೂಪದಲ್ಲಿ ಮನೆಗಳನ್ನು ಕಟ್ಟಿ ಕೊಟ್ಟಿದ್ದಾರೆ. ಎರಡು ವರ್ಷದ ಹಿಂದೆ ಮಾನ್ಯ ರೋಡ್ರಿಗ್ಸ್‌ರವರು ಹೌಸಿಂಗ್ ಖಾತೆಯ ಮಂತ್ರಿಗಳಾಗಿದ್ದಾಗ ನಮ್ಮ ಒತ್ತಾಯದ ಮೇಲೆ ಅಂತಹ ಕೆಲಸಗಳನ್ನು ಮಾಡಿದರು. ಕೆಲವಾರು ಪ್ರದೇಶಗಳಲ್ಲಿ ಇರುವಂತಹ ಕಾಲೋನಿಗಳಲ್ಲಿ ಹೌಸಿಂಗ್ ಬೋರ್ಡ್‌ನವರು ತಮ್ಮ ಖರ್ಚಿನಲ್ಲಿ ರಸ್ತೆಗಳನ್ನು ಮಾಡತಕ್ಕಂಥಾದ್ದು ಮತ್ತು ಮೋರಿಗಳನ್ನು ಮಾಡತಕ್ಕಂಥಾದ್ದು ಈ ಕಾಮಗಾರಿಗಳನ್ನು ಪೂರ್ಣ ಮಾಡಿಲ್ಲ. ಇವತ್ತು ಅದೆಲ್ಲಾ ಕಾರ್ಪೊರೇಷನ್ ಲಿಮಿಟ್‌ನಲ್ಲಿ ಬಂದಿವೆ. ಇವತ್ತು ಕಾರ್ಪೊರೇಷನ್‌ನವರು ಅದರ ಮೈನ್‌ಟೆನೆನ್ಸನ್ನು ನೋಡುತ್ತಾ ಇಲ್ಲ. ೫-೬ ವರ್ಷಗಳಿಂದ ಅಲ್ಲಿ ಹೌಸ್ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಿದ್ದಾರೆ. ಹೌಸಿಂಗ್ ಬೋರ್ಡ್‌ನವರೇ ಆ ಹೌಸ್ ಟ್ಯಾಕ್ಸನ್ನು ಕಲೆಕ್ಟ್ ಮಾಡಿ ಕಾರ್ಪೊರೇಷನ್‌ನವರಿಗೆ ಕೊಡುತ್ತಿದ್ದಾರೆ. ಆದರೂ ಕೂಡ ಅಲ್ಲಿ ಅಪೂರ್ಣವಾಗಿ ಉಳಿದಂತಹ ಕಾಮಗಾರಿಗಳು ಕಾರ್ಪೊರೇಷನ್ ವತಿಯಿಂದ ಇನ್ನೂ ಆಗಿಲ್ಲ. ಕಾರ್ಪೊರೇಷನ್‌ನವರು ೫-೬ ತಿಂಗಳಿಂದ ಕಂದಾಯವನ್ನು ತೆಗೆದುಕೊಳ್ಳುತ್ತಿದ್ದರೂ ಕೂಡ 'ಉಳಿದಿರುವಂತಹ ಕಾಮಗಾರಿ ಕೆಲಸಗಳನ್ನು ನೀವೇ ಮಾಡಿ' ಎಂದು ಹೌಸಿಂಗ್ ಬೋರ್ಡ್‌ನವರಿಗೆ ಹೇಳುತ್ತಿದ್ದಾರೆ. ಹೌಸಿಂಗ್ ಬೋರ್ಡ್‌ನವರು ನಮ್ಮ ಹತ್ತಿರ ಹಣ ಇಲ್ಲವೆಂದು ಹೇಳುತ್ತಿದ್ದಾರೆ. ಹಣದ ಅಭಾವದಿಂದಾಗಿ ಬೆಂಗಳೂರು ನಗರದಲ್ಲಿ ಯಾವುದೇ ಸ್ಕೀಮನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಅವರು ತೀರ್ಮಾನ ಮಾಡಿದ್ದಾರೆ. ಇನ್ನು ಮುಂದೆ ಗೃಹನಿರ್ಮಾಣ ಮಂಡಲಿಯ ಕೆಲಸಗಳು ಇಲ್ಲಿ ನಡೆಯುವ ಹಾಗೆ ಇಲ್ಲ ಎನ್ನುವ ಪರಿಸ್ಥಿತಿ ಉಂಟಾಗಿದೆ. ಬಿ.ಡಿ.ಎ ಯವರು ಅವರ ಕೆಲಸವನ್ನು ತೆಗೆದುಕೊಂಡಿದ್ದಾರೆ. ಆದರೆ ಅವರ ವಶದಲ್ಲಿರತಕ್ಕಂಥ ಇಂತಹ ಕಾಲೋನಿಗಳು ಏನಿವೆ ಅವುಗಳ ಸೌಕರ್ಯ ನೋಡುವುದಕ್ಕೆ ಹಣ ವೆಚ್ಚ ಮಾಡುವುದಕ್ಕೆ ಅದರಿಂದ ಸಾಧ್ಯವಿಲ್ಲದೇ ಇರುವಾಗ ಆ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡು ಮಾಡತಕ್ಕಂಥಾದ್ದು ಕಷ್ಟ ಇದೆ. ಆದ್ದರಿಂದ ಕಾರ್ಪೊರೇಷನ್‌ನವರೇ ಇದರ ಕೆಲಸಗಳನ್ನು ಮಾಡಬೇಕು ಮತ್ತು ಅದರ ಸ್ವಚ್ಛತೆಯನ್ನು ಕೂಡ ನೋಡಿಕೊಳ್ಳಬೇಕು ಎಂದು ನಾನು ಹೇಳಬಯಸುತ್ತೇನೆ. ಮಾನ್ಯ ಮಂತ್ರಿಯವರು ಈ ಕಡೆಗೆ ಗಮನಕೊಡಬೇಕೆಂದು ನಾನು ಹೇಳಬಯಸುತ್ತೇನೆ. ಈ ಲಾಲ್‌ಬಾಗ್ ಸಿದ್ದಾಪುರದಲ್ಲಿ ಅಂತಹುದೇ ಒಂದು ಕಾಲೋನಿ ಇದೆ. ಅದನ್ನು ಮಾನ್ಯ ಮಂತ್ರಿಯವರೂ ಸಹ ನೋಡಿದ್ದಾರೆ. ಅದರ ವಿಚಾರವನ್ನೂ ನಾನು ಈಗಾಗಲೇ ತಿಳಿಸಿದ್ದೇನೆ. ಅದರ ಬಗ್ಗೆ ಕೂಡ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಅಧ್ಯಕ್ಷರು.—ತಾವು ಬೇಗ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿ.

ಶ್ರೀ ಎಂ. ಚಂದ್ರಶೇಖರ್.—ಆಯಿತು, ಬೇಗ ಮುಗಿಸಿಬಿಡುತ್ತೇನೆ. ಆಮೇಲೆ ಇನ್ನೊಂದು ವಿಚಾರವಿದೆ. ಬಹಳಷ್ಟು ಜನ ಮನೆ ಕಟ್ಟಿಸಿರುತ್ತಾರೆ. ಆ ಮನೆಗಳಲ್ಲಿ ಬಾಡಿಗೆಗೆ ಯಾರೋ ಇರುತ್ತಾರೆ; ಅದು ಬೇರೆ ವಿಚಾರ ; ಆ ಮನೆಯ ಯಜಮಾನ ಕಾಲವಾಗಿರುತ್ತಾನೆ. ಅವನು ಕಾಲವಾದ ಮೇಲೆ ಅವನ ನೆಕ್ಸ್ಟ್ ವಾರಸುದಾರ ಯಾರಿರುತ್ತಾನೋ ಅವನಿಗೆ ವಾರಸುದಾರಿಕೆಯನ್ನು ಕೊಡಬೇಕು. ಇದರಲ್ಲಿ ಏನಾಗುತ್ತದೆ ಎಂದರೆ ಗಂಡ ಸತ್ತಾಗ ಅದು ಹೆಂಡತಿಗೆ ಹೋಗುತ್ತದೆ. ಹೆಂಡತಿ ಸತ್ತಮೇಲೆ ಕೂಡ ಕಾರಣಾಂತರಗಳಿಂದ ಹೆಂಡತಿಯ ಹೆಸರಿನಲ್ಲೇ ಇರುತ್ತದೆ. ಆಕೆ ಕಾಲವಾದ ಮೇಲೆ ''ಇಂತಹ ಸಂಸಾರದಲ್ಲಿ ಇಂತಹವರಿಗೆ ಟ್ರಾನ್ಸ್‌ಫರ್ ಮಾಡಿಕೊಡಿ'' ಎಂದು ಕೇಳುತ್ತಾರೆ. ಅಂತಹ ಸಂದರ್ಭಗಳಲ್ಲಿ ಅವರ ವಾರಸುದಾರರಿಗೆ ಆ ಹಕ್ಕುದಾರಿಕೆಯನ್ನು ಟ್ರಾನ್ಸ್‌ಫರ್ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಕೊನೆಯದಾಗಿ ಬೆಂಗಳೂರು ನಗರ ಪ್ರದೇಶದಲ್ಲಿರತಕ್ಕಂಥ ಶಾಸಕರನ್ನು ಈಗಿರತಕ್ಕಂಥ ಕಮಿಟಿಯಲ್ಲಿ ನಾನ್ ಅಫಿಷಿಯಲ್ ಮೆಂಬರ್ಸ್ ತರಹ ಹಾಕಿ ಅದರ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತಹ ಅಧಿಕಾರವನ್ನು ಕೊಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಮುನಿಸಿಪಾಲಿಟಿಗಳ ಪ್ರದೇಶದಲ್ಲಿ ನಗರಸಭೆಗಳಲ್ಲಿ ಕೂಡ ಶಾಸಕರು ಸದಸ್ಯರಾಗಿ ಇರುವುದಕ್ಕೆ ವ್ಯವಸ್ಥೆಯಾಗಬೇಕು. ಅವರು ಎಕ್ಸ್ ಅಫಿಷಿಯೋ

ರೀತಿಯಲ್ಲಿ ಇರಬೇಕಾದರೆ ಈಗಿರತಕ್ಕಂಥ ಆಕ್ಟ್‌ಗೆ ತಿದ್ದುಪಡಿ ತರುವ ಸಮಯದಲ್ಲಿ ಇದನ್ನು ಮಾಡಿದರೆ ಒಳ್ಳೆಯದು ಎಂದು ನಾನು ಹೇಳಬಯಸುತ್ತೇನೆ. ಸಾಮಾನ್ಯವಾಗಿ ಶಾಸಕರು ಒಂದು ತಾಲ್ಲೂಕ್ ಬೋರ್ಡ್ ಅಥವಾ ನಗರಸಭೆಗಳ ಸುತ್ತಮುತ್ತ ಇರುವಂತಹ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನಗರ ಸಭೆ ಮತ್ತು ತಾಲ್ಲೂಕ್‌ಬೋರ್ಡ್‌ಗಳ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡುವ ಸಲುವಾಗಿ ಈ ಒಂದು ತಿದ್ದುಪಡಿ ಮಸೂದೆಯಲ್ಲಿ ಮಾರ್ಪಾಡು ಮಾಡಬೇಕೆಂದು ನಾನು ಸೂಚಿಸಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಸಭೆಯು ಈಗ ಮುಕ್ತಾಯ ವಾಗಿ ಮತ್ತೇ ನಾಳೆ ಬೆಳಿಗ್ಗೆ ೧-೦೦ ಗಂಟೆಗೆ ಸಭೆ ಸೇರಲಿದೆ.

ಸಭೆಯು ಆರು ಗಂಟೆ ಎರಡು ನಿಮಿಷಗಳಿಗೆ ಮುಕ್ತಾಯವಾಗಿ ಪುನಃ ದಿನಾಂಕ ೩೦ನೇ ಬುಧವಾರ ಜೂನ್ ೧೯೮೨ ರಂದು ಮಧ್ಯಾನ್ನ ೧ ಗಂಟೆಗೆ ಸೇರಲು ನಿಶ್ಚಯಿಸಿತು.

W D—6301